ಜೀ.ಶಂ.ಪ. ಅವರ "ಕನ್ನಡ ಜನಪದ ಕಥೆಗಳು" ಅವಲೋಕನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರಬಂಧ)

ಸಂಶೋಧಕರು

ಬಸವರಾಜು ಬಿ.ಎಸ್.

ಮಾರ್ಗದರ್ಶಕರು

ಪ್ರೊ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

705

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

Shree Mahantesh
XEROX & BOOK BINDING
Near S.B.I.,K.C.D.Road,DWD
Ph-2447880,

ಶಂ.ಶಂ.ಠ.ಚಿನ್ನಿ
705
AKSHARA GRANTHALAYA
ACC.NO. 048515

705

ಚಿಗನ್ನಪ್ಪ ಗ್ರಂಥಾಲಯ.
ಕನ್ನಡ ವಿಶ್ವವಿದ್ಯಾಲಯ. ಹಂಪಿ.

705

ಜೀ.ಶಂ.ಪ. ಅವರ "ಕನ್ನಡ ಜನಪದ ಕಥೆಗಳು"

ಅವಲೋಕನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರಬಂಧ)

ಸಂಶೋಧಕರು

ಬಸವರಾಜು ಬಿ.ಎಸ್.

ಮಾರ್ಗದರ್ಶಕರು

ಪ್ರೊ.ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಪ್ರಮಾಣ ಪತ್ರ

ಜೀ.ಶಂ.ಪ. ಅವರ "ಕನ್ನಡ ಜನಪದ ಕಥೆಗಳು" ಅವಲೋಕನ ಎಂಬ ಶೀರ್ಷಿಕೆಯ ಪ್ರಬಂಧವನ್ನು ಪ್ರೊ.ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೨೮.೦೯.೨೦೦೯

ಬಸವರಾಜು ಬಿ.ಎಸ್.

ಸಂಶೋಧಕರು
ಜಾನಪದ ಅಧ್ಯಯನ ವಿಭಾಗ
ಕವಿಹಂ, ವಿದ್ಯಾರಣ್ಯ

[illegible]

[illegible]

[illegible]

[illegible]

[illegible]
[illegible]

ಪರಿವಿಡಿ



ಜೀ.ಶಂ. ಪರಮಶಿವಯ್ಯ

ಅಧ್ಯಾಯ - ೧

ಪ್ರಸ್ತಾವನೆ

ಪ್ರಸ್ತಾವನೆ

ಜಾಗತಿಕ ಮಟ್ಟದಲ್ಲಿ ಜಾನಪದ ಅಧ್ಯಯನ ವಿಸ್ತೃತ ರೂಪ ಪಡೆಯುತ್ತಿದೆ. ಅದರಲ್ಲಿ ಜನಪದ ಕಥೆಗಳ ಅಧ್ಯಯನಗಳು ವಿಶೇಷವಾದ ಸ್ಥಾನ ಪಡೆಯುತ್ತಿವೆ. ಜಗತ್ತಿನ ಜಾನಪದ ಅಧ್ಯಯನ ಆರಂಭವಾಗಿದ್ದು ಕನ್ನಡ ಜನಪದ ಕಥೆಗಳ ಮುಖಾಂತರ. ಈ ವಿಧಾನವು ಹಲವು ಪ್ರಕಾರಗಳ ಮೇಲೆ ಪರಿಣಾಮ ಬೀರಿದೆ. ಜನಪದ ಕಥೆಗಳು ಪುರಾಣಗಳಿಂದ ಒಡೆದ ಚೂರುಗಳು ಅನ್ನುವ ವಾದವು ಇದೆ. ಕಥೆ, ಪುರಾಗಣಗಳು ಮತ್ತು ಕಾವ್ಯಗಳು ಒಂದೇ ನೆಲೆಯ ವಸ್ತುವನ್ನು ಒಳಗೊಂಡಿರುವ ಉದಾಹರಣೆಗಳು ಸಿಗುತ್ತವೆ. ಹೀಗೆ ಕಥೆ, ಕಾವ್ಯ ಮತ್ತು ಪುರಾಣಗಳ ಜೊತೆ ಸಂಯುಕ್ತ ಸಂಬಂಧವನ್ನು ಇಟ್ಟುಕೊಂಡಿದೆ ಅನ್ನುವ ಸಾಂಸ್ಕೃತಿಕ ಅಸ್ಮಿತತೆಯನ್ನು ಹೊಂದಿದೆ. ಈ ಕಥೆಗಳು ದೇಶದ ಸಾಂಸ್ಕೃತಿಕ ಅಧ್ಯಯನಕ್ಕೆ ನೆರವಾಗಬಲ್ಲ ಸಾಧನ ಸಾಮಗ್ರಿಗಳನ್ನು ಒದಗಿಸಬಲ್ಲವು. ಪ್ರಾಚೀನ ಕಾಲದ ಹಿನ್ನೆಲೆಯನ್ನು ಹೊಂದಿರುವ ಈ ಜಾನಪದ ಕಥೆಗಳು, ಬೇರೆ ಬೇರೆ ದೇಶಗಳ ಕಥೆಗಳ ನಿರೂಪಣೆ, ವಸ್ತು, ಅಲ್ಲಿನ ಪರಿಸರ ಇತ್ಯಾದಿ ವಿಭಿನ್ನ ರೀತಿಯಲ್ಲಿ ಅಭಿವ್ಯಕ್ತಗೊಳ್ಳುವುದರಿಂದ ಜನಪದ ಸೃಜನಶೀಲ ಮನಸ್ಸಿನ ಸತ್ಯವನ್ನು ಅರ್ಥಮಾಡಿಕೊಳ್ಳಲು ಮತ್ತು ಚಿಂತನೆ ನಡೆಸಲು ಸಹಕಾರಿಯಾಗುತ್ತದೆ. ಜನಪದ ನಂಬಿಕೆ, ರೂಢಿ-ಸಂಪ್ರದಾಯಗಳು, ವಿಧಿ-ವಿಧಾನ, ಕ್ರಿಯೆ ಇತ್ಯಾದಿ ತುಂಬ ಮಹತ್ವದ್ದಾಗಿದ್ದು, ಇದನ್ನೇ ನಾವು 'ಜೀವನ ಮೌಲ್ಯ' ಎನ್ನುತ್ತೇವೆ. ಸತ್ಯ, ಅಹಿಂಸೆ, ತ್ಯಾಗ, ಬಲಿದಾನ, ಪರೋಪಕಾರ, ಪಾತಿವ್ರತ್ಯ, ಸಹಕಾರ, ಸಹಾಯ ಮುಂತಾದವು ಜಾನಪದ ಕಥೆಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದಿರುತ್ತವೆ.

ಬದುಕಿನ ನೋವು-ನಲಿವು, ತ್ಯಾಗ-ಬಲಿದಾನ, ಕಷ್ಟ-ಕಾರ್ಪಣ್ಯ ಮುಂತಾದ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಜಾನಪದ ಕಥೆಗಳು ವಾಸ್ತವತೆಯನ್ನು ತಿಳಿಸುವ ಪ್ರಯತ್ನ ಮಾಡುತ್ತವೆ. ಅಲ್ಲದೆ ಜಾನಪದ ಕಥೆಗಳ ಅತಿದೊಡ್ಡ ಸಾಂಸ್ಕೃತಿಕ ಗುಣವೆಂದರೆ ಜಾತಿ ಧರ್ಮಗಳ ವಿಷಯವನ್ನು ಅನವಶ್ಯಕವಾಗಿ ಬಿತ್ತರಿಸದಿರುವುದು. ಜನ ಸಾಮಾನ್ಯರನ್ನು ಪ್ರತಿನಿಧಿಸುವ ಜನಪದ ಸಾಹಿತ್ಯ ಮಾನವ ಗುಣ ಸ್ವಭಾವವನ್ನು ವಿಡಂಬಿಸಿ, ಅದಕ್ಕೆ ಹಾಸ್ಯದ ಲೇಪನ ಮಾಡುವುದರಿಂದ ತುಂಬ ಪರಿಣಾಮಕಾರಿ ಎನಿಸುತ್ತದೆ. ಇದು ನೇರವಾಗಿ ಉಪದೇಶದ ಮಾರ್ಗವನ್ನು ಹಿಡಿಯದೆ, ನವಿರಾಗಿ ಮನಸ್ಸನ್ನು ಸ್ಫೂರ್ತಿಗೊಳಿಸಿ ಪರಿವರ್ತಿಸುತ್ತದೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನದ ಬಗ್ಗೆ ಹೊಸ ಆಸಕ್ತಿ ಉತ್ಸಾಹಗಳು ತೋರಿ ಬರುತ್ತಿರುವುದು ಗಮನಾರ್ಹವಾದ ವಿಷಯ. ಆದರೂ ಶಾಸ್ತ್ರೀಯವಾದ ತಳಹದಿಯ ಮೇಲೆ ಜಾನಪದ ಸಂಗ್ರಹ, ಸಂಶೋಧನೆಗಳು ನೆಲೆಗೊಳ್ಳಬೇಕಾಗಿದೆ. ನಮ್ಮ ಸಂಸ್ಕೃತಿಯ ತಾಯಿಬೇರಾದ ಜಾನಪದದ ಬಗೆಗೆ ಭಾರತದಲ್ಲಿ ಅಲಕ್ಷ್ಯವೇ ಹೆಚ್ಚಾಗಿದ್ದು ಈವರೆಗೆ ನಡೆದಿರುವ ಸಂಗ್ರಹಕಾರ್ಯ. ತುಂಬ ಅಸಮಗ್ರ ಎನಿಸಿದೆ. ಜಾನಪದ ಪ್ರಕಾರಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳು ನಡೆದಿದ್ದರೂ ಜಾನಪದ ಕಥೆಗಳ ಬಗ್ಗೆ ವ್ಯಾಪಕವಾದ ಕಾರ್ಯ ಇನ್ನೂ ಆಗಬೇಕಾಗಿದೆ.

ಡಾ.ಜೀ.ಶಂ.ಪರಮಶಿವಯ್ಯರವರು ಕನ್ನಡ ಜಾನಪದ ವಿದ್ವಾಂಸರಲ್ಲಿ ಅಗ್ರಗಣ್ಯರು. ಕರ್ನಾಟಕ, ಭಾರತೀಯ ಹಾಗೂ ಪಾಶ್ಚಾತ್ಯ ಜಾನಪದದ ಬಗೆಗೆ ಸರಿಯಾಗಿ ತಿಳುವಳಿಕೆ ಹೊಂದಿದ ಅವರು ಅನ್ವಯಿಕವಾಗಿ ಮಾತನಾಡಬಲ್ಲ ಶಕ್ತಿಯನ್ನು ಹೊಂದಿದ್ದರು. ಈ ಮೂಲಕ ಜೀ.ಶಂ.ಪ. ದೇಶ ವಿದೇಶಗಳ ಬಗೆಗಿನ ಜಾನಪದವನ್ನು ಅರಿಯಲು ಪ್ರಯತ್ನಿಸಿದ ಫಲವಾಗಿ ಹಾಗೂ ಅಂತರಾಷ್ಟ್ರೀಯ ಜನಪದ ಕಥೆಗಳ ಅಭ್ಯಾಸದ ಪರಿಣಾಮದಿಂದಾಗಿ ಅವರು ಕನ್ನಡ ಜನಪದ ಕಥೆಗಳು ಸಂಕಲನವನ್ನು ಹೊರತಂದರೆಂದು ಕೋರುತ್ತದೆ.

೧. ಅಧ್ಯಯನ ಉದ್ದೇಶ ವಿಧಾನ ಮತ್ತು ವ್ಯಾಪ್ತಿ

ಜನಪದ ಸಾಹಿತ್ಯದ ಬಹುಮುಖ್ಯ ಪ್ರಕಾರ ಜನಪದ ಕಥೆಗಳು ನಮ್ಮ ಸಮಾಜದಷ್ಟೇ ಪ್ರಾಚೀನತೆಯನ್ನು ಪಡೆದುಕೊಂಡಿರುವ ಈ ಕಥೆಗಳನ್ನು ಹೇಳುವ ಮತ್ತು ಕೇಳುವ ಕ್ರಿಯೆ ಯಾವುದೊಂದು ಪ್ರದೇಶ ಮತ್ತು ಕಾಲಕ್ಕೆ ಸೀಮಿತವಾಗಿಲ್ಲ. ಎಲ್ಲ ಕಾಲಕ್ಕೂ ಪ್ರಪಂಚದ ಎಲ್ಲ ಭಾಗಗಳಿಗೂ ಅದು ಹರಡಿರುವಂಥದ್ದು, ಜಗತ್ತಿನಾದ್ಯಂತದ ಜನಪದ ಕಥೆಗಳಲ್ಲಿ ಕಂಡುಬರುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಕಥೆಯಲ್ಲಿ ಕಂಡುಬರುವ ವ್ಯತ್ಯಾಸಗಳು ಜನಪದ ಕಥೆಯ ವಿಶಿಷ್ಟ ಲಕ್ಷಣವಾಗಿ ತೋರುತ್ತವೆ. ಇಂಥ ಒಂದೊಂದು ವಿಷಯವೂ ಒಬ್ಬೊಬ್ಬರಿಗೆ ಅಧ್ಯಯನದ ವಸ್ತುವಾಗಬಲ್ಲದು. ಕಥೆಯಲ್ಲಿ ಭಾಷಾ ವೈವಿಧ್ಯ, ಭಾಷಾ ವಿಜ್ಞಾನಿಗಳಿಗೆ ವಸ್ತುವಾಗುವಂತೆ ಅದರಲ್ಲಿ ಬರುವ ಸಾಂಸ್ಕೃತಿಕ, ಸಾಮಾಜಿಕ, ಚಾರಿತ್ರಿಕ ಮತ್ತು ರಾಜಕೀಯ ವಿಷಯಗಳು ಆಯಾ ದೃಷ್ಟಿಯಲ್ಲಿ ಅಧ್ಯಯನ ನಡೆಸುವ ಸಂಶೋಧಕರಿಗೆ ವಸ್ತುವಾಗುತ್ತದೆ.

ಈ ಹಿನ್ನೆಲೆಯಲ್ಲಿ ಜೀ.ಶಂ.ಪ.ಅವರ ಕನ್ನಡ ಜನಪದ ಕಥೆಗಳು ಕಥಾಸಂಕಲನದ ವಿವಿಧ ಮುಖಗಳ ಸಮಗ್ರ ಅಧ್ಯಯನ ಇದುವರೆಗೂ ನಡೆದಿಲ್ಲ. ಇಲ್ಲಿನ ಕಥೆಗಳು ವಸ್ತು, ಜೀವನ ದೃಷ್ಟಿ, ಪರಿಸರ, ಸಾಹಸ ಬುದ್ಧಿಶೀಲತೆ, ತಂತ್ರಗಾರಿಕೆ, ಲೋಕನೀತಿ, ರೂಪಾಂತರ ನೀತಿ ಮುಂತಾದ ವೈವಿಧ್ಯಮಯ ಕ್ಷೇತ್ರಗಳನ್ನು ಆಲಂಗಿಸಿಕೊಂಡಿವೆ. ಈ ಕಥೆಗಳನ್ನು ಅತ್ಯಂತ ಸರಳವಾಗಿ, ಸರಾಗವಾಗಿ, ಸಹಜವಾಗಿ, ಆಕರ್ಷಕವಾಗಿ ಮತ್ತು ಪರಿಣಾಮಕಾರಿಯಾಗಿ ಜೀ.ಶಂ.ಪ. ಅವರು ಸಂಪಾದಿಸಿಕೊಟ್ಟಿದ್ದಾರೆ.

ಈ ಕಥೆಗಳ ವೈವಿಧ್ಯತೆ, ಅನನ್ಯತೆ, ವ್ಯಾಪಕತೆಗಳು ಹಾಗೂ ಕಥಾಸಂಕಲನದ ವಿಶಿಷ್ಟತೆ ಹಲವಾರು ರೀತಿಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಪ್ರೇರಣೆಯನ್ನು ಒದಗಿಸುತ್ತಿವೆ. ಈ ಕಥಾಸಂಕಲನಕ್ಕೆ ಜೀ.ಶಂ.ಪ ಅವರು ಬರೆದಿರುವ ಪ್ರಸ್ತಾವನೆ ಕನ್ನಡ ಜನಪದ ಕಥೆಗಳ ಬಗೆಗಿನ ವಿದ್ವತ್ಪೂರ್ಣ ವಿವೇಚನೆಯಾಗಿದೆ.

ಈ ಸಂಗ್ರಹ ಪ್ರಕಟವಾದ ನಂತರ ಪ್ರಕಟವಾದ ಕನ್ನಡ ಜನಪದ ಕಥಾಸಂಕಲನಗಳ ಬಹುತೇಕ ಸಂಪಾದಕರಿಗೆ ಈ ಸಂಗ್ರಹದ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಇಲ್ಲಿಯ ಪ್ರಸ್ತಾವನೆ, ವಿಭಾಗೀಯ ಕ್ರಮ, ಸಂಪಾದನೆಯ ಹಲವಾರು ಅಂಶಗಳು ಅನುಕರಣೀಯವಾಗಿವೆ. ಹೀಗಾಗಿ ಈ ಪುಸ್ತಕದ ಮಹತ್ವ ಗಣನೀಯ ಪ್ರಮಾಣದ್ದೆನಿಸುತ್ತದೆ. ಈ ಕೃತಿ ಕನ್ನಡ ಜನಪದ ಕಥೆಗಳ ಸಂಗ್ರಹ ವಿಧಾನ ಮತ್ತು ವಿಶ್ಲೇಷಣೆಗಳ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಕುರಿತು ಚರ್ಚಿಸಬೇಕಾಗಿದೆ. ಆ ಕೃತಿಯ ಇತಿ ಮಿತಿಗಳನ್ನು ಚರ್ಚಿಸಬೇಕಾಗಿದೆ. ಕನ್ನಡ ಜನಪದ ಕಥೆಗಳ ಸಂಗ್ರಹದ ವಿಧಾನಕ್ಕೆ ಒಂದು ಸೈದ್ಧಾಂತಿಕ ಶಿಸ್ತನ್ನು ರೂಢಿಸಿಕೊಳ್ಳುವ ಅನಿವಾರ್ಯತೆ ನಮ್ಮ ಮುಂದಿದೆ. ಪ್ರಸ್ತುತ ಅಧ್ಯಯನ ಈತರದ ಯೋಚನೆಗಳನ್ನು ಮಾಡುತ್ತದೆ.

ಈ ಕಥಾ ಸಂಕಲನದಲ್ಲಿ ೬೮ ಕಥೆಗಳಿದ್ದು ಅವುಗಳನ್ನು ಅತಿಮಾನುಷ ಪತ್ನಿಯರು, ಅತಿಮಾನುಷ ಪತಿಗಳು, ಅತಿಮಾನುಷ ವಿರೋಧಿಗಳು, ರಮ್ಯ, ಅದ್ಭುತ, ಬುದ್ಧಿವಂತಿಕೆಯ, ಹಾಸ್ಯ, ಪ್ರಾಣಿಕಥೆಗಳೆಂದು ಎಂಟು ಬಗೆಯಲ್ಲಿ ವಿಭಾಗಿಸಿಕೊಳ್ಳಲಾಗಿದೆ. ಹೀಗೆ ಇಲ್ಲಿಯ ವಿಭಾಗೀಕ್ರಮ ಮೊದಲು ಮಾಡಿಕೊಂಡು ಸಂಪಾದಕರ ಎಲ್ಲಾ ಕೆಲಸಗಳಲ್ಲಿ ಪಾಶ್ಚಾತ್ಯರಲ್ಲಿ ನಡೆದ ಜನಪದ ಕಥೆಗಳ ಅಧ್ಯಯನದ ವಿಸ್ತಾರವಾದ ಅನುಭವ ಎದ್ದು ಕಾಣುತ್ತದೆ. ದೇಶಿಯ ನೆಲೆಯ ಚಿಂತನೆಗಳು ಕಾಣುತ್ತಿಲ್ಲ. ಜೀಶಂಪ ಅವರ ಈ ವಿಧಾನಗಳನ್ನು ಅನುಸರಿಸುವ ಅನಿವಾರ್ಯತೆ ಮತ್ತು ಕನ್ನಡ ಜನಪದ ಕಥೆಗಳ ಅಧ್ಯಯನದ ವಿಸ್ತಾರವಾದ ಅನುಭವ ಎದ್ದು ಕಾಣುತ್ತದೆ. ಇಲ್ಲಿ ಕನ್ನಡ ಜನಪದ ಕಥೆಗಳ ಸಂದರ್ಭವನ್ನು ಕುರಿತು ಚರ್ಚೆ ಮಾಡಬೇಕಾಗಿದೆ. ಈ ಕೃತಿಯಲ್ಲಿ ಪ್ರಸ್ತಾವನೆ ಗಮನ ಸೆಳೆಯುತ್ತದೆ. ಸುದೀರ್ಘವಾಗ ೨೧ ಪುಟಗಳ ಪ್ರಸ್ತಾವನೆ ಜನಪದ ಕಥೆಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಪುಲವಾದ ಮಾಹಿತಿ ಒದಗಿಸುತ್ತದೆ. ಇದನ್ನು ಗಮನಿಸಿದರೆ ಜೀ.ಶಂ.ಪ. ಅವರಿಗಿದ್ದ ಪ್ರಪಂಚದ ಜಾನಪದದ ಅಭ್ಯಾಸದ ಅಪಾರ ತಿಳುವಳಿಕೆಯ ಅರಿವು ನಮಗಾಗುತ್ತದೆ. ಈ ಪ್ರಸ್ತಾವನೆ ಅಧ್ಯಯನಕ್ಕೆ ಆಸಕ್ತಿ ಮತ್ತು ಉತ್ತೇಜನವನ್ನು ನೀಡಿದೆ.

ಒಟ್ಟಾರೆಯಾಗಿ ಈ ಕಥಾಸಂಕಲನದಲ್ಲಿನ ಕಥೆಗಳು ಭಾಷಿಕವಾಗಿ, ಸಾಂಸ್ಕೃತಿಕವಾಗಿ, ಮಹಿಳಾ ಚಿತ್ರಣ ಹಾಗೂ ಕಥೆಗಳ ವರ್ಗೀಕರಣ, ಹೆಚ್ಚಾಗಿ ನಂತರ ಬಂದ ಕನ್ನಡ ಜನಪದ ಕಥೆಗಳ ಮೇಲೆ ಪ್ರಭಾವ ಬೀರಿವೆ ಅವುಗಳನ್ನು ಕುರಿತು ಚರ್ಚೆ ಮಾಡಲಾಗುತ್ತದೆ.

೨. ಕನ್ನಡ ಜನಪದ ಕಥೆಗಳ ವೈಶಿಷ್ಟ್ಯ, ಸ್ವರೂಪ ಮತ್ತು ಲಕ್ಷಣ

ಜನಪದ ಕಥೆಗಳನ್ನು ಹೇಳುವ ಪರಿಪಾಠವಿದೆ. ಇದೊಂದು ಪ್ರಜ್ಞಾಪೂರ್ವಕ ಮನರಂಜನಾ ಕಲೆ. ಸಾಮಾಜಿಕವಾಗಿ, ಧಾರ್ಮಿಕವಾಗಿ ಕಥೆ ಕೆಲವೊಮ್ಮೆ ಪಾತ್ರವಹಿಸಿದರೂ ಅಪ್ಪಟ ಮನರಂಜನೆಯೇ ಇದರ ಮುಖ್ಯ ಉದ್ದೇಶ. ಇಲ್ಲಿನ ಕಥೆಗಳು ವಯಸ್ಸಿನ ಸ್ಥಾನದ ಪರಿವೇ ಇಲ್ಲದೆ ಎಲ್ಲರಿಗೂ ಕುತೂಹಲ ಕೆರಳಿಸುವ ಸಾಧನಗಳಾಗಿವೆ.

ಜನಪದರ ಕಥೆ ಜನಪದರ ಬದುಕಿನ ಸಾಂಪ್ರದಾಯಿಕ ಕಥೆ. ಇದು ಜನಪದ ಪರಂಪರೆಯ ಪೂರ್ವಕಾಲೀನ ಸಮಕಾಲೀನ ಮತ್ತು ಸಾರ್ವತ್ರಿಕ ಅಂಶಗಳಿಂದ ರಚನೆಗೊಂಡದ್ದು. ಜನಪದ ಕಥೆ ಒಟ್ಟು ಜನತೆಯಲ್ಲಿ ಇದ್ದದ್ದು. ಸದಾ ಪುನರಾಭಿವ್ಯಕ್ತಿಗೆ ಸಹ್ಯವಾಗಿರುವಂಥದ್ದು. ಜನಪದ ಕಥೆ ಹೇಳುವ ಮತ್ತು ಸೇರಿಸುವ ಗುಣದಿಂದ ಬಂದಿದ್ದು ಹಲವರ ಪ್ರತಿನಿಧಿಯಾಗಿ ಒಬ್ಬ ಕಥೆ ಹೇಳುತ್ತಾನೆ. ಪ್ರೇಕ್ಷಕರಾಗಿ ಜನ ಅದಕ್ಕೆ 'ಹೂಂ' ಗುಡುತ್ತಾರೆ, ತಲೆ ಒಗೆಯುತ್ತಾರೆ. ಜನಪದ ಕಥೆ ಏಕಮುಖ ಸೃಷ್ಟಿಗೆ ಬದ್ಧವಾದುದಲ್ಲ. ವಕ್ತೃ-ಪ್ರೇಕ್ಷಕರ ಮಧ್ಯೆ ನಡೆಯುವ ಒಂದು ಸಾಮಾಜಿಕ ಸಾಂಪ್ರದಾಯಿಕ ಕಲೆಗಾರಿಕೆ.

ಈ ಕಥಾಸಂಕಲನವು ೬೮ ಕಥೆಗಳನ್ನು ಹೊಂದಿದ್ದು ಅವುಗಳನ್ನು ಅತಿಮಾನುಷ ಪತ್ನಿಯರು, ಅತಿಮಾನುಷ, ಪತಿಗಳು, ಅತಿಮಾನುಷ ವಿರೋಧಿಗಳು, ರಮ್ಯ, ಅದ್ಭುತ, ಬುದ್ಧಿವಂತಿಕೆಯ, ಹಾಸ್ಯ, ಪ್ರಾಣಿ ಕಥೆಗಳು ಎಂದು ಎಂಟು ಬಗೆಯಲ್ಲಿ ವಿಭಾಗಿಸಲಾಗಿದೆ. ಹೀಗೆ ಇಲ್ಲಿಯ ವಿಭಾಗೀಕ್ರಮ ಮೊದಲು ಮಾಡಿಕೊಂಡು ಸಂಪಾದಕರ ಎಲ್ಲ ಕೆಲಸಗಳಲ್ಲಿ ಪಾಶ್ಚಾತ್ಯರಲ್ಲಿ ನಡೆದ ಜನಪದ ಕಥೆಗಳ ಅಧ್ಯಯನದ ವಿಸ್ತಾರವಾದ ಅನುಭವ ಎದ್ದು ಕಾಣುತ್ತದೆ.

೩. ಕನ್ನಡ ಜನಪದ ಕಥೆಗಳಲ್ಲಿ ಮಹಿಳಾ ಚಿತ್ರೀಕರಣ

ಭಾರತೀಯ ಕಥೆಗಳು ಹೆಚ್ಚಾಗಿ ಮಹಿಳೆಯರಿಂದ ಕಟ್ಟಲ್ಪಟ್ಟಿದ್ದು, ಇದು ಕನ್ನಡ ಜನಪದ ಕಥೆಗಳು ಕಥಾಸಂಕಲನ ಇದರಿಂದ ಹೊರತಾದದ್ದೇನು ಇಲ್ಲ. ಈ ಕಥೆಗಳಿಂದ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳನ್ನು ಗುರುತಿಸಬಹುದು. ಇಲ್ಲಿ ಈ ಕೆಲಸವನ್ನು ಮಾಡಲಾಗುತ್ತದೆ. ಅಲ್ಲದೆ ಈ ಕಥೆಗಳಲ್ಲಿನ ಮಹಿಳಾ ಚಿತ್ರಣಗಳನ್ನು ಇತರ ಜನಪದ ಪ್ರಕಾರಗಳೊಂದಿಗೆ ತೌಲನಿಕವಾಗಿ ನೋಡುವ ಮತ್ತು ಕಥೆಗಳ ವಿಶಿಷ್ಟ್ಯತೆಯನ್ನು ಗುರುತಿಸುವ ಜರೂರತೆ ನಮ್ಮ ಮುಂದಿದೆ. ಬದುಕಿನ ವಿನೋದ, ಹಾಸ್ಯ, ಆಧ್ಯಾತ್ಮ, ಕುಟುಂಬ, ಮದುವೆ, ದುರಂತ, ಸಾಹಸ, ಕಷ್ಟಪರಂಪರೆಗಳು ಇತ್ಯಾದಿ ಸಂಗತಿಗಳನ್ನು, ಈ ಕಥೆಗಳು ಒಳಗೊಂಡಿರುತ್ತವೆ. ಈ ಕಥೆಗಳಲ್ಲಿ ಪ್ರಸ್ತುತ ಅಧ್ಯಯನವು ಕಾಣಲಿರುವ ಗುಣಗಳೆಂದರೆ ಪಾಲನೆ, ಮಾತೃತ್ವ, ಸಾಹಸ, ರಕ್ಷಣೆ ಇತ್ಯಾದಿ ಹಾಗಾಗಿ ಇಲ್ಲಿನ ಕಥೆಗಳನ್ನು ಸ್ತ್ರೀ ಕೇಂದ್ರಿತ ಹಾಗೂ ಪುರುಷ ಕೇಂದ್ರಿತ ಕಥೆಗಳು ಎಂದು ವಿಂಗಡಿಸಬಹುದಾಗಿದೆ.

ಸ್ತ್ರೀ ಕೇಂದ್ರಿತ ಕಥೆಗಳಲ್ಲಿ ಕಥೆಯು ಯಾವ ಸಂದರ್ಭದಿಂದ ಪ್ರಾರಂಭವಾಗುತ್ತದೆ, ಎಲ್ಲಿ ಮುಕ್ತಾಯವಾಗುತ್ತದೆ. ಮತ್ತು ಅಲ್ಲಿನ ಕಥಾವಸ್ತು ಹೇಗಿರುತ್ತದೆ. ಪುರುಷಕೇಂದ್ರಿತ ಕಥೆಗಳಲ್ಲಿ ಹೇಗಿರುತ್ತದೆ, ಜನಪದರಲ್ಲಿ ಸ್ತ್ರೀಗೆ ಸಿಕ್ಕಿರುವ ಸ್ಥಾನಮಾನ ಯಾವುದು, ಅಂದಿನ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಹೇಗಿತ್ತು, ಮಹಿಳೆ ಇಲ್ಲಿನ ಕಥೆಗಳಲ್ಲಿ ನಾಯಕಿಯಾಗಿ ಒಬ್ಬ ತಾಯಿಯಾಗಿ, ಸೊಸೆಯಾಗಿ ಹಾಗೂ ಮಗಳಾಗಿ ಯಾವರೀತಿ ಚಿತ್ರಣಗೊಂಡಿದ್ದಾಳೆ ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತೇನೆ. ಒಟ್ಟಾರೆಯಾಗಿ ಈ ಕಥೆಗಳಲ್ಲಿ ಮಹಿಳೆಯ ಜೀವನದ ಎಲ್ಲಾ ಮಜಲುಗಳನ್ನು ತಿಳಿಯಲು ಇಚ್ಛಿಸುತ್ತೇನೆ.

೪. ಭಾಷೆ, ಶೈಲಿ ಮತ್ತು ತಂತ್ರ

ಜನಪದ ಕಥೆಗಳಲ್ಲಿ ಭಾಷೆ, ಬಹುಮುಖ್ಯವಾದುದಾಗಿದೆ. ಕಥೆಗಳು ಮೌಖಿಕ ಪರಂಪರೆಯಿಂದ ಕೂಡಿರುವುದರಿಂದ ಭಾಷೆ ಪ್ರಮುಖ ಸ್ಥಾನಪಡೆಯುತ್ತದೆ. ಇಲ್ಲಿನ ಜನಪದ ಕಥೆಗಳಲ್ಲಿ ಜೀ.ಶಂ.ಪ.ಅವರು ಅಲ್ಲಿನ ಪ್ರಾದೇಶಿಕ ಭಾಷೆಗಳಲ್ಲಿ ಕಥೆಗಳನ್ನು ಸಂಗ್ರಹಿಸಿ, ಸಾಮಾನ್ಯ ಕನ್ನಡದಲ್ಲಿ ಸರಳವಾದ ರೀತಿಯಲ್ಲಿ ಎಲ್ಲರಿಗೂ ಅರ್ಥವಾಗುವ ಶ್ರೀಸಾಮಾನ್ಯ ಭಾಷೆಯಲ್ಲಿ ಕಥೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

ಸಾಹಿತ್ಯದ ಯಾವುದೇ ಪ್ರಕಾರದಲ್ಲಿ ಭಾಷೆ ಬಹುಮುಖ್ಯವಾದುದು. ಅದರಲ್ಲಿಯೂ ಬಹಳ ಮುಖ್ಯವಾಗಿ ಜಾನಪದದಲ್ಲಿ ಭಾಷೆಗೆ ಅಗ್ರಸ್ಥಾನ. ಜನಪದ ಪ್ರಕಾರಗಳಲ್ಲಿ ಜನಪದ ಕಥೆಗಳಲ್ಲಿ ಭಾಷೆ ಪ್ರಮುಖ ಆಧಾರವಾಗಿರುವುದರಿಂದ ಇಲ್ಲಿ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತದೆ. ಪ್ರಾದೇಶಿಕವಾಗಿ ಮತ್ತು ಭೌಗೋಳಿಕವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವ್ಯತ್ಯಾಸವಿದ್ದಂತೆಯೇ ಭಾಷೆಯಲ್ಲಿ ವ್ಯತ್ಯಾಸವಿರುತ್ತದೆ. ಆದ್ದರಿಂದ ಪ್ರಸ್ತುತ ಕಥೆಗಳನ್ನು ಕೆಲವು ಸೀಮಿತ ಪ್ರದೇಶಗಳಲ್ಲಿ ಸಂಗ್ರಹ ಮಾಡಿರುವುದರಿಂದ ಅವುಗಳಲ್ಲಿ ಭಾಷೆಯ ಬಳಕೆಯು ಭಿನ್ನತೆಯಿಂದ ಕೂಡಿರುತ್ತದೆ. ಈ ಭಿನ್ನತೆಯನ್ನು ಅರಿಯಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗುತ್ತದೆ.

ಕಥೆಗಳು ಮೌಖಿಕ ಪರಂಪರೆಯಿಂದ ಬಂದವಾದುದರಿಂದ ಜೀ.ಶಂ.ಪ. ಅವರು ತಮ್ಮ ಕಥಾಸಂಕಲನದಲ್ಲಿ ಮೌಖಿಕ ಪರಂಪರೆಯಿಂದ ಬಂದ ನಿರೂಪಣಾ ಶೈಲಿಯನ್ನೇ ಅಳವಡಿಸಿಕೊಂಡಿದ್ದಾರೆ. ಈ ನಿರೂಪಣಾ ಶೈಲಿಯು ಇತರ ಸಾಹಿತ್ಯ ಪ್ರಕಾರಗಳಿಂದ ಜನಪದ ಕಥೆಗಳನ್ನು ಹೇಗೆ ಸ್ಪಷ್ಟವಾಗಿ ಬೇರ್ಪಡಿಸುತ್ತದೆ ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತೇನೆ.

ಜನಪದ ಕಥೆಗಳಲ್ಲಿ ನಿರೂಪಣಾ ತಂತ್ರ ಪ್ರಧಾನವಾಗಿರುತ್ತದೆ. ಈ ತಂತ್ರವನ್ನು ವಕೃವು ಸನ್ನಿವೇಷಕ್ಕೆ ತಕ್ಕಂತೆ ಹೇಗೆ ಬಳಸುತ್ತಾನೆ. ಕೇಳುಗರನ್ನು ಯಾವರೀತಿ ತನ್ನ ಹಿಡಿತದಲ್ಲಿಟ್ಟುಕೊಂಡು ತನ್ನ ನಿರೂಪಣಾತಂತ್ರವನ್ನು ಮುಂದುವರೆಸುತ್ತಾನೆ ಎಂಬುದು ಪ್ರಸ್ತುತ ಕಥೆಗಳಲ್ಲಿ ಯಾವರೀತಿ ಮೂಡಿಬಂದಿದೆ ಎಂಬುದನ್ನು ಅರಿಯಲು ಪ್ರಯತ್ನಿಸಲಾಗುತ್ತದೆ. ಪ್ರಸ್ತುತ ಕಥೆಗಳಲ್ಲಿ ಕಥೆಯ ಆರಂಭ, ಮಧ್ಯ, ಮತ್ತು ಅಂತ್ಯಗಳನ್ನು ವಕೃತವು ತನ್ನ ತಂತ್ರಗಳ ಬಳಕೆಯಿಂದ ಸಂದರ್ಭಕ್ಕೆ ತಕ್ಕಂತೆ ಹೇಗೆ ಅಳವಡಿಸಿಕೊಂಡಿದ್ದಾರೆ ಎಂಬುದನ್ನು ಅರಿಯಲು ಪ್ರಯತ್ನಿಸುತ್ತೇನೆ.

ಅಧ್ಯಾಯ - ೨

ಜೇಶಂಪ ಪರಿಚಯ

ಜೀಶಂಪ ಪರಿಚಯ

ಜಾನಪದ ಭೀಷ್ಮ. ಜಾನಪದ ತಿಮಿಂಗಿಲ ಮುಂತಾಗಿ ಜನಪ್ರಿಯರಾಗಿದ್ದ ಅಂತರಾಷ್ಟ್ರೀಯ ಖ್ಯಾತಿಯ ಜಾನಪದದ ವಿದ್ವಾಂಸರೆಂದು ಪ್ರಖ್ಯಾತರಾಗಿದ್ದ ಜೀರಹಳ್ಳಿ ಶಂಕರೇಗೌಡ ಪರಮಶಿವಯ್ಯ ಅವರು 'ಜೀಶಂಪ' ಎಂಬ ಕಾವ್ಯನಾಮದಿಂದ ಜನಪ್ರಿಯರಾಗಿದ್ದರು. ಜೀಶಂಪ ಎಂಬ ಮೂರು ಅಕ್ಷರಗಳನ್ನು ಕೇಳುತ್ತಲೇ ಜಾನಪದ ಬಗ್ಗೆ ಅಲ್ಪ-ಸ್ವಲ್ಪ ಅಭಿರುಚಿ ಮತ್ತು ಆಸಕ್ತಿ ಇರುವವರೆಲ್ಲರ ಮನಸ್ಸಿನಲ್ಲೂ ಸಹ ಅಖಂಡ ಕರ್ನಾಟಕದ ಸಂಪತ್ ಸಮೃದ್ಧ ವೈವಿಧ್ಯಮಯ ಜಾನಪದ ಗಣಿ ಜೀವ ತಳೆದು ಎದ್ದು ನಿಲ್ಲುತ್ತದೆ. 'ಜೀಶಂಪ' ಎಂಬ ಸಂಕ್ಷಿಪ್ತನಾಮದಲ್ಲಿ ಕರ್ನಾಟಕದಾದ್ಯಂತ ಅಷ್ಟೇ ಏಕೆ, ಭಾರತದ ಬಹುಭಾಗದ ಜನರಿಗೆ ಚಿರಪರಿಚಿತರಾದವರು. ಜಾನಪದ ಸಂಶೋಧನೆ, ಸಂಗ್ರಹಣೆ, ಸಂಪಾದನೆ, ವಿಮರ್ಶೆ, ವಿಶ್ಲೇಷಣೆ ಇತ್ಯಾದಿಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ಜಾನಪದ ಜಗತ್ತಿನ ವಿಸ್ಮಯಗಳನ್ನು ಅನಾವರಣಗೊಳಿಸಿ, ಹಲವರು ಅದರಲ್ಲಿ ಮುಂದಾಗಲು ಪ್ರೇರೇಪಿಸಿದ ಶಕ್ತಿಯಾಗಿ ನಿಂತವರು ಜೀಶಂಪ. ಒಳ್ಳೆಯ ಸಂಘಟಕರಾಗಿ, ಕಲಾರಾಧಕರಾಗಿ, ಜನಪದ ಕಲಾವಿದರ ಏಳಿಗೆಗಾಗಿ ಸದಾ ಶ್ರಮಿಸುತ್ತ ಬಂದ ಕೀರ್ತಿ ಅವರಿಗೆ ಸಲ್ಲುತ್ತದೆ. ಜಾನಪದ ಕ್ಷೇತ್ರದಲ್ಲಿ ಅವರ ಸಾಧನೆ ಬಹು ದೊಡ್ಡದು.

ಕರ್ನಾಟಕ ಜಾನಪದ ಅಧ್ಯಯನ ಕ್ಷೇತ್ರದ ಅಪ್ಪಟ ದೇಶೀ ಪ್ರತಿಭೆಯಾಗಿದ್ದ ಡಾ.ಜೀಶಂ.ಪರಮಶಿವಯ್ಯ ಅವರು ಭಾರತಖಂಡದ ಪ್ರಪ್ರಥಮ ಜಾನಪದ ಪ್ರಾಧ್ಯಾಪಕರೆಂಬ ಕೀರ್ತಿಗೆ ಪಾತ್ರರಾಗಿದ್ದರು. ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕು ಅಂಬಲ ಜೀರಹಳ್ಳಿಯ ಸಾಮಾನ್ಯ ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದ ಇವರು, ಹಳ್ಳಿಗಾಡಿನ ಎಲ್ಲ ಬಗೆಯ ಕಷ್ಟ ಕೋಟಲೆಗಳು ಮತ್ತು ಸಾಂಸ್ಕೃತಿಕ ವೈವಿಧ್ಯಗಳನ್ನು ಅತ್ಯಂತ ಸೂಕ್ಷ್ಮವಾಗಿ ಬಲ್ಲವರಾಗಿದ್ದರು. ಸ್ವತಃ ಸೃಜನಶೀಲ ಲೇಖಕರೂ ವಿನಯ-ವಿದ್ವತ್ತು-ಸಜ್ಜನಿಕೆಗಳ ಸಾಕಾರಮೂರ್ತಿಯೂ ಆಗಿದ್ದ ಜೀಶಂಪ ಅವರು ಕನ್ನಡ ಜಾನಪದ ಅಧ್ಯಯನಕ್ಕೆ ಒಂದು ನಿರ್ದಿಷ್ಟ ದಿಕ್ಕುತೋರಿದ ಮಹಾನ್ ಪ್ರತಿಭೆ. ಕೇವಲ ಗ್ರಂಥಾಲಯದ ಕೋಣೆಗಳಲ್ಲಿ ಮಾತ್ರ ಹೂತು ಹೋಗದೆ ಕರ್ನಾಟಕದ ಸಹಸ್ರಾರು ಹಳ್ಳಿಗಳನ್ನು ಕಾಲ್ನಡಿಗೆಯಲ್ಲಿ ಸುತ್ತಿ, ನೂರಾರು ಜನಪದ ಕಲಾವಿದರಿಗೆ ಆತ್ಮಸ್ಥೈರ್ಯ ತುಂಬಿ ಅಪಾರ ಜ್ಞಾನ ಸಂಪತ್ತನ್ನು ಸಂಗ್ರಹಿಸಿದ ಸಾಹಸಿ ಇವರು. ಕನ್ನಡ ಜಾನಪದ ಕ್ಷೇತ್ರಕ್ಕೆ ಹಲವಾರು ಮಹತ್ವದ ಕೃತಿಗಳನ್ನು ನೀಡಿರುವ ಡಾ.ಜೀಶಂಪ ಅವರು ತಮ್ಮ ಅಮೂಲ್ಯ ಉಪನ್ಯಾಸ ಮತ್ತು ಲೇಖನಗಳ

[illegible]

[illegible]

[illegible]

ಮೂಲಕ ಕರ್ನಾಟಕ ಜಾನಪದ ಸತ್ವ ಮತ್ತು ಸೊಗಸನ್ನು ದೇಶ ವಿದೇಶಗಳಲ್ಲಿ ಸಮರ್ಥವಾಗಿ ಪರಿಚಯಿಸಿದ ಜಾಗತಿಕ ಮಟ್ಟದ ವಿದ್ವಾಂಸರಾಗಿದ್ದಾರೆ.

ಜೀಶಂಪರವರ ಬಾಲ್ಯದ ದಿನಗಳಲ್ಲಿ ಅವರ ಮೇಲೆ ಗ್ರಾಮೀಣ ಪರಿಸರ ಬೀರಿದ ಪ್ರಭಾವ ಹಾಗೂ ಮುಂದೆ ಅದು ಅವರು ಮಾಡಿದ ಸಾಹಿತ್ಯ ರಚನೆಗೆ ನೀಡಿದ ಪ್ರೇರಣೆ ಹಾಗೂ ಸ್ಥಿತಿ ಎಂತಹುದೆಂಬುದನ್ನು ಅವರ ಮಾತುಗಳಲ್ಲಿಯೇ ಆಲಿಸಬೇಕು.

"ನನಗೆ ಜಾನಪದದಲ್ಲಿ ಆಸಕ್ತಿ ಅಂತ ಅಂದರೆ ಬಹಳ ಚಿಕ್ಕ ವಯಸ್ಸಿನಲ್ಲಿ ನಾನು ಬೆಳೆದ ಪರಿಸರ ನನ್ನ ಮೇಲೆ ಒಂದು ವಿಶೇಷವಾದ ಸ್ಫೂರ್ತಿಯನ್ನು ನೀಡಿತು ಅಂತ ಹೇಳಬಹುದು. ನಮ್ಮೂರಿನ ಮದುವೆ ಮನೆಗಳಲ್ಲಿ ಹೆಣ್ಣು ಮಕ್ಕಳು ಹಾಡ್ತಾ ಇದ್ದಂತಹ ಸೋಬಾನೆ ಪದಗಳು, ನಮ್ಮೂರಿಗೆ ಬರ್ತಾ ಇದ್ದಂತಹ ಕಿಳ್ಳೇಕ್ಯಾತರು, ಮೊದಲಾದವರು ನಮ್ಮೂರಿನ ಹತ್ತಿರದಲ್ಲಿಯೇ ಇದ್ದ ಬೆಳ್ಳೂರಿನ ಸೂತ್ರದ ಗೊಂಬೆಯಾಟ, ನಮ್ಮೂರಿನಲ್ಲಿಯೇ ನಡೆಯುತ್ತಿದ್ದಂತಹ ಯಕ್ಷಗಾನ ಬಯಲಾಟಗಳು ಇವೆಲ್ಲವನ್ನೂ ನೋಡ್ತಾ ಚಿಕ್ಕಂದಿನಲ್ಲಿಯೇ ನನ್ನ ಮನಸ್ಸಿನಲ್ಲಿ ತುಂಬಾ ಕಾಲ ನಿಲ್ಲುವಂತಾದವು. ನಾನು ಸಾಹಿತ್ಯ ಕ್ಷೇತ್ರದಲ್ಲಿ ಬರಹಗಳನ್ನು ಆರಂಭಮಾಡಿದ ಮೇಲೆ ನಾನು ಬರೆದಂತಹ ಎಲ್ಲ ಬರಹಗಳಲ್ಲಿ ದಟ್ಟವಾಗಿ ಛಟ್ಟಿ ಇಳಿಸಿದ್ದೀನಿ. ನನ್ನ ಕಥೆ, ಕಾದಂಬರಿ, ಪ್ರಬಂಧ ಎಲ್ಲವುಗಳಲ್ಲೂ ಜನಪದ ಜೀವನದ ಶೈಲಿಯನ್ನು ವಿವರಿಸಿ ಬರೆಯೋದಕ್ಕೆ ಪ್ರಯತ್ನಿಸಿ ಬರೆದಿದ್ದೇನೆ".

ಅಪ್ಪಟ ಹಳ್ಳಿಯ ಮುಗ್ದ ಕುಟುಂಬದಲ್ಲಿ ಬಡತನದ ಬವಣೆಯಲ್ಲಿ ಹುಟ್ಟಿದ ಜೀಶಂಪ ಆ ಗುಡಿಸಲಿನಿಂದ ಜಾನಪದ ಆಕಾಡೆಮಿಯ ಅಧ್ಯಕ್ಷಗಿರಿಗೇರಿದ್ದು ಒಂದು ರೋಚಕ ಇತಿಹಾಸ. ಸ್ವಪ್ರಯತ್ನದಿಂದ, ದಣಿವರಿಯದ ದುಡಿಮೆಯಿಂದ, ಕೊನೆಗಾಣದ ಕುತೂಹಲದಿಂದ, ಅಂತ್ಯವಿಲ್ಲದ ಆಸಕ್ತಿಯಿಂದ ಈ ಸಾಮಾನ್ಯ ಹುಡುಗ ಪ್ರಾಥಮಿಕ ಶಾಲಾ ಉಪಾಧ್ಯಾಯ ಗಿರಿಯಿಂದ ತೊಡಗಿ ಗುಮಾಸ್ತನಾಗಿ ಸಣ್ಣ ಪುಟ್ಟ ಕೆಲಸಗಳನ್ನು ಹೊಟ್ಟೆಪಾಡಿಗಾಗಿ ನಿರ್ವಹಿಸಿ, ಆ ಬವಣೆಯ ಬುತ್ತಿಯನ್ನುಂಡು ತನ್ನ ಧೀಶಕ್ತಿಯನ್ನು ಸೃಜನಶೀಲ ಸಾಮಾರ್ಥ್ಯವನ್ನು ಪೋಷಿಸಿಕೊಂಡು ಏರಿದ ಹುದ್ದೆಗಳು ಹಲವು, ಮಾಡಿದ ಕೆಲಸಗಳು ನೂರಾರು, ಗಳಿಸಿದ ಸ್ನೇಹಿತರು ಸಾವಿರಾರು. ತೊಟ್ಟಿಲಲ್ಲಿ ಇದ್ದಾಗಲೇ ಹಳ್ಳಿಯ ಹಾಡನ್ನು ಜನಪದ ಕಥೆಗಳನ್ನು ಕಿವಿ ಮೂಲಕ ಹೃದಯದಲ್ಲಿ ಧಾರಣೆ ಮಾಡಿಕೊಂಡ ಈ ವ್ಯಕ್ತಿ ಅನಂತರದ ದಿನಗಳಲ್ಲಿ ಈ ಜನಪದ ಸಂಸ್ಕೃತಿಯ ವಿರಾಟ ಸ್ವರೂಪವನ್ನು ಅರಸುತ್ತ, ಅರಗಿಸಿಕೊಳ್ಳುತ್ತ, ಅರಳಿಸುತ್ತಾ ಸುತ್ತ ಮುತ್ತ ಪರಿಮಳಿಸುತ್ತ ನಡೆದು ಜಾನಪದ ಜಗತ್ತಿನಲ್ಲಿ ಒಂದು ದಂತಕತೆಯ ನಾಯಕನ ಮಟ್ಟಕ್ಕೆ ಬೆಳೆದರು. ಇವರಿಲ್ಲದಿದ್ದರೆ ಈ ಕರ್ನಾಟಕ ಜಾನಪದ ಕ್ಷೇತ್ರ ಹೇಗಿರುತ್ತಿತ್ತು ಎಂಬುದನ್ನು ಊಹಿಸಿಕೊಳ್ಳುವುದು ಕೂಡ ಕಷ್ಟದ ಮಾತು.

ಅವರಿಗಿಂತ ಹಿರಿಯ ತಲೆಮಾರಿನ ಜನ ಈ ಕ್ಷೇತ್ರದಲ್ಲಿ ಸಾಕಷ್ಟು ಕೃಷಿಯನ್ನು ಮಾಡಿದ್ದರೂ ಅದರ ಆಳ-ಅಗಲಗಳನ್ನು ಗುರುತಿಸಿ, ಅದನ್ನು ಮುಗ್ಧ ಆಸ್ವಾದನೆಯ ಮಜಲಿನಿಂದ ತೀವ್ರ ವೈಜ್ಞಾನಿಕ ಜಿಜ್ಞಾಸೆಯ

ಹಂತದವರೆಗೆ ಬೆಳೆಸಿದ ಕೀರ್ತಿ ಅವರದು ಎಂಬುದು ನಿರ್ವಿವಾದ. ತಮ್ಮ ಬಾಲ್ಯದ ಜಾನಪದ ಪರಿಸರದ ಜೀವನಾಡಿಯನ್ನು ಹಿಡಿದು ಅದನ್ನೇ ಜೀವ ಮಂತ್ರದಂಡವನ್ನಾಗಿ ಮಾರ್ಪಡಿಸಿಕೊಂಡು ಪ್ರೊ.ದೇಜಗೌ, ಪ್ರೊ.ಹಾಮಾನಾ ಮುಂತಾದವರ ಸಕ್ರಿಯ ಸಜೀವ ನೆರವಿನ ಮೂಲಕ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಅಖಂಡ ಕರ್ನಾಟಕದ ಜಾನಪದ ಸಂಪದದ ಜೀವಝರಿಯಾಗಿ ಅವರು ಮಾರ್ಪಟ್ಟಿದ್ದು ಒಂದು ಪವಾಡವೆಂದೇ ಹೇಳಬೇಕು.

ಪ್ರೊ.ದೇ.ಜ.ಗೌ ಹಾಗೂ ಪ್ರೊ.ಹಾ.ಮಾ.ನಾಯಕ ಅವರುಗಳ ದೂರದೃಷ್ಟಿ ಹಾಗೂ ಕನಸಿನ ಫಲವಾದ ಜಾನಪದ ಕ್ಷೇತ್ರವನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಅಧ್ಯಯನಕ್ಕೆ ಅಳವಡಿಸಲು ಯೋಜಿಸಿದ್ದ ಯೋಜನೆಗೆ ಜೀಶಂಪ ತಕ್ಕ ಸೂತ್ರಧಾರರಾಗಲು ಸಾಧ್ಯ ಎಂಬುದನ್ನು ಅವರು ಮನಗಂಡಿದ್ದರು. ಯಾವ ನಿರೀಕ್ಷೆಯೂ ಇಲ್ಲದೆ, ನಿರಂತರವಾಗಿ ಮಾಡುತ್ತಾ ಬಂದ ದುಡಿಮೆಗೆ, ಶ್ರಮಕ್ಕೆ ಜೀಶಂಪ ಅವರಿಗೆ ದೊಡ್ಡ ಲಾಭವೇ ದೊರೆತಂತಾಗಿತ್ತು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜಾನಪದ ವಿಭಾಗವೊಂದನ್ನು ತೆರೆದು ಅದಕ್ಕೆ ಅವರನ್ನು ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಅದೇ ವಿಭಾಗದಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಅಂತಿಮವಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ನಿವೃತ್ತಿ ಹೊಂದಿದರು.

ವಿಶ್ವವಿದ್ಯಾಲಯದ ಮಟ್ಟದಲ್ಲಿ ಜಾನಪದವನ್ನು ಅಧ್ಯಯನ ವಿಷಯವಾಗಿ ಆರಂಭಿಸಬೇಕೆಂಬ ಕಾರಣಕ್ಕಾಗಿ ಅವರನ್ನು ಆಹ್ವಾನಿಸಿದ ಮೇಲೆ ಅದಕ್ಕೆ ಪೂರಕವಾದ ಜಾನಪದ ವಸ್ತು ಸಂಗ್ರಹಾಲಯದ ಅಗತ್ಯವನ್ನು ಅವರು ಮನಗಂಡರು. ಪ್ರೊ.ದೇಜಗೌ ಅವರ ಸಲಹೆ ಸಹಕಾರದಿಂದ ಯೋಜನೆಯನ್ನು ರೂಪಿಸಿದಷ್ಟೇ ಅಲ್ಲ, ಅದು ಪೂರ್ಣರೂಪದಲ್ಲಿ ಯಶಸ್ವಿಗೊಳ್ಳಬೇಕಾದರೆ ತಕ್ಕ ವ್ಯಕ್ತಿ ಯಾರೆಂಬುದನ್ನು ಅವರು ಸೂಚಿಸಿದರು. ತಮ್ಮ ಜೀವನ್ಮಿತ್ರ ಕಲಾವಿದ ಪಿ.ಆರ್.ತಿಪ್ಪೇಸ್ವಾಮಿ ಅವರನ್ನು ಆ ಕಾರಣಕ್ಕಾಗಿಯೇ ತಮ್ಮ ಜೊತೆಯಲ್ಲಿ ಕರೆತಂದರು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಮೇಲೆ ಅವರು ಮಾಡಿದ ಕಾರ್ಯಗಳಲ್ಲಿ ಅನೇಕವು ಅಪೂರ್ವ ಬಗೆಯವು. ಕಲಾವಿದ ಉಳಿದೆಡೆ ಕಲೆ ಉಳಿಯಲು ಸಾಧ್ಯ ಎಂಬುದನ್ನು ಚೆನ್ನಾಗಿ ಮನಗಂಡಿದ್ದರು. ಅವರು ಕಲಾವಿದನ ಉಳಿವಿಗಾಗಿ ಹೆಚ್ಚು ಶ್ರಮಿಸಿದರು. ಪ್ರತಿಯೊಬ್ಬ ಕಲಾವಿದನಿಗೆ ಅವಕಾಶಗಳು ದೊರೆಯುವಂತೆ ಎಚ್ಚರ ವಹಿಸಿದರು. ಅಕಾಡೆಮಿಗೆ ಸರ್ಕಾರ ಕೊಡುವ ಹಣ 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂಬಂತೆ ಎಂಬ ಸತ್ಯ ತಿಳಿದಿದ್ದರೂ ಅದರಲ್ಲಿಯೇ ಎಲ್ಲವನ್ನೂ ತೂಗಿಸುವ ಪ್ರಯತ್ನ ಮಾಡುತ್ತಿದ್ದರು. ಅದಕ್ಕಾಗಿಯೇ ದೊಡ್ಡ ದೊಡ್ಡ ಯೋಜನೆಗಳನ್ನು ಬದಿಗೊತ್ತಿ ಅವರದೇ ಆದ ಕೆಲವೊಂದು ಸಣ್ಣ ಸಣ್ಣ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರು. ಅವುಗಳಲ್ಲಿ ಮುಖ್ಯವಾದವು "ಒಂದು ಸುತ್ತಿನ ಜಾನಪದ" ಎಂಬ ಹೆಸರುಗಳಲ್ಲಿ ಎಲ್ಲ ಊರಿನ ಎಲ್ಲ ಕಲಾವಿದರು ಪಾಲ್ಗೊಳ್ಳಲು ಯೋಜನೆಗಳನ್ನು ರೂಪಿಸಿದರು. ಅನೇಕ ಕಲಾವಿದರಿಗೆ ಹಣಕ್ಕಿಂತ ಅವಕಾಶ ಮುಖ್ಯ ಎಂಬುದನ್ನು ಅವರು

ಮನಗಂಡಿದ್ದರು. ಅವರಿಗೆ ಕೈತುಂಬ ಹಣ ಕೊಡದಿದ್ದರೂ ಮನಸ್ಸು ತುಂಬುವ ಅವಕಾಶವನ್ನಾದರೂ ಏಕೆ ಕಲ್ಪಿಸಿಕೊಡಬಾರದು ಎಂಬುದು ಅವರ ಆಲೋಚನೆಯಾಗಿತ್ತು. ಅವರ ಈ ಯೋಚನೆ ಬಹುಮಟ್ಟಿಗೆ ಯಶಸ್ವಿಗೊಂಡಿತ್ತು. ಕಲಾವಿದರ ಸಂಘಟನೆಗೂ ಅವರು ಶ್ರಮಿಸಿದರು ಹಾಗೂ ನಶಿಸಿಹೋಗುತ್ತಿದ್ದ ಮೂಡಲಪಾಯ ಯಕ್ಷಗಾನದಂತಹ ಕಲೆಯ ಪುನರುಜ್ಜೀವನಕ್ಕಾಗಿ ಅವರು ಹಾಕಿಕೊಂಡ ಯೋಜನೆ, ಅಲ್ಲಿ ನಡೆಸಿದ ಪ್ರಯೋಗಗಳು ಅಪೂರ್ವ ರೀತಿಯವು. ಶ್ರೀ ಬಿದರೆಯಮ್ಮ ಯಕ್ಷಗಾನ ಟ್ರಸ್ಟ್ ಎಂಬ ಹೆಸರಿನಲ್ಲಿ ತಿಪಟೂರು ತಾಲ್ಲೂಕಿನ ಕೊನೇಹಳ್ಳಿ ಎಂಬಲ್ಲಿ ಆರಂಭಿಸಿದ ಟ್ರಸ್ಟ್ ಮೂಡಲಪಾಯ ಯಕ್ಷಗಾನದ ಸರ್ವತೋಮುಖ ಕಲೆಯ ಲೋಪ ದೋಷಗಳನ್ನು ಗುರುತಿಸಿ ಅದನ್ನು ಸರಿಪಡಿಸುವುದು, ಆ ಬಗೆಗಿನ ಕಮ್ಮಟಗಳು, ವಿಚಾರ ಸಂಕಿರಣಗಳು ಮೇಲಿಂದ ಮೇಲೆ ನಡೆಯುವ ಕೇಂದ್ರವಾಗಿ ಅದು ಸಾಕಷ್ಟು ಪ್ರಭಾವ ಬೀರಿತು.

ಜನಪದ ಕಲಾವಿದರ ನೆರವಿಗಾಗಿ ಸರ್ಕಾರದ ಮಟ್ಟದಲ್ಲಿ ನಿರಂತರವಾಗಿ ಹೋರಾಡುತ್ತ ಬಂದವರು ಜೀಶಂಪ. ಆ ಬಗೆಗೆ ಸರ್ಕಾರಕ್ಕೂ ಹಲವು ಬಗೆಯ ಸೂಚನೆಗಳನ್ನು, ಸಲಹೆಗಳನ್ನು ಯೋಜನೆಗಳ ರೂಪದಲ್ಲಿ ಸಿದ್ಧಪಡಿಸಿಕೊಟ್ಟಿದ್ದಾರೆ. ಮೂಲಸಂಸ್ಕೃತಿ ಹಾಗೂ ಅದನ್ನು ಹೊತ್ತ ನಮ್ಮ ಜನಪದ ಸಾಹಿತ್ಯ ಕಲೆಗಳ ಸಂರಕ್ಷಣೆ ಅದಕ್ಕೆ ಕಾರಣವಾದ ಜನಪದ ಕಲಾವಿದರ ಯೋಗಕ್ಷೇಮದ ರಕ್ಷಣೆ ಎಷ್ಟು ಮುಖ್ಯ ಎಂಬುದನ್ನು ತಿಳಿಸುತ್ತ ಬಂದರು. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ, ಇತರ ಸರ್ಕಾರಿ ಚಟುವಟಿಕೆಗಳು ನಡೆಯುವಂತೆ ಜಾನಪದ ಸಂಬಂಧಿಯಾದ ಚಟುವಟಿಕೆಗಳು ಚುರುಕಿನಿಂದ ನಡೆಯುವಂತೆ ಅಲ್ಲಿಯ ಅಧಿಕಾರಿಗಳಿಗೇ ಜವಾಬ್ದಾರಿ ವಹಿಸಬೇಕು ಎಂಬ ಅತ್ಯುತ್ತಮ ಸಲಹೆಯನ್ನು ನೀಡಿದರು.

ಜೀಶಂಪ ಅವರು ವಿದೇಶವನ್ನು ಹಲವು ಬಾರಿ ಸುತ್ತಿಬಂದರು. ಅಲ್ಲಿಯ ಜನಪದ ಚಟುವಟಿಕೆಗಳನ್ನು ಗಮನಿಸುತ್ತಾ ಬಂದರು. ಬಹುಮುಖ್ಯವಾಗಿ ಅಲ್ಲೆಲ್ಲ ಅವರ ಗಮನ ಸೆಳೆದದ್ದು ವಸ್ತು ಸಂಗ್ರಹಾಲಯಗಳು. ಅವುಗಳ ವಿನ್ಯಾಸ ಹಾಗೂ ವಸ್ತುಗಳನ್ನು ಅನಾವರಣಗೊಳಿಸಿರುವ ಬಗೆ, ಅದರಲ್ಲಿಯೂ ಬಯಲು ವಸ್ತುಸಂಗ್ರಹಾಲಯಗಳು ವಸ್ತುಗಳ ಸಂರಕ್ಷಣೆಗೆ ವಹಿಸಬೇಕಾದ ಕ್ರಮದ ಬಗ್ಗೆ ಅವರು ಹೆಚ್ಚು ಆಸಕ್ತರಾಗಿದ್ದರು. ಅವರು ಹೊತ್ತಿದ್ದ ಜಾನಪದ ವಿಶ್ವವಿದ್ಯಾನಿಲಯದ ಕನಸು ಕೊನೆಗೂ ಅವರ ಪಾಲಿಗೆ ಕನಸಾಗಿಯೇ ಉಳಿಯಿತು.

ಪ್ರೊ.ದೇ.ಜ.ಗೌ ಅವರು ಜೀಶಂಪ ಅವರನ್ನು ಕುರಿತು ಒಂದು ಕಡೆ ಹೀಗೆ ಬರೆಯುತ್ತಾರೆ. "ಜಾನಪದ ಕ್ಷೇತ್ರದಲ್ಲಿ ಜೀಶಂಪ ಅವರಿಗೆ ಸರಿಗಟ್ಟಬಲ್ಲ ವ್ಯಕ್ತಿಗಳು ಇಂಡಿಯಾ ದೇಶದಲ್ಲಿಯೇ ವಿರಳ. ಆಕ್ಷೇತ್ರದ ಎಲ್ಲ ಮುಖಗಳೂ, ಮೂಲೆ ಮೊಡಕುಗಳೂ ಅವರಿಗೆ ಸುಪರಿಚಿತ. ಅದು ಅವರಿಗೆ ಉಸಿರಾಗಿತ್ತು. ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಪರಮ ಪತಿವ್ರತೆಗೆ ಗಂಡನೊಬ್ಬ ಎನ್ನುವ ರೀತಿಯಲ್ಲಿ ಅವರು ಅದಕ್ಕೆ ಗಂಟು ಹಾಕಿಕೊಂಡಿದ್ದರು. ಅವರು ಕನ್ನಡ ನಾಡಿನ ಶ್ರೇಷ್ಠ ವಾಗ್ಮಿಗಳಲ್ಲೊಬ್ಬರು. ಅವರು ಮಾತಿಗೆ ನಿಂತೆಂದರೆ ಸಂಗೀತದೋಪಾದಿಯಲ್ಲಿ ವಾಕ್ಪ್ರವಾಹ ಪ್ರವಹಿಸುತ್ತಿತ್ತು. ನಿರರ್ಗಳತೆ, ಮೋಹಕತೆ,

ಅರ್ಥ, ಭಾವ... ಅವರ ವಾಗ್ಮಿತೆಯ ಲಕ್ಷಣ. ಸಮಯೋಚಿತ ಹಾಸ್ಯಪ್ರಜ್ಞೆಯಿಂದ, ಅನೇಕ ಕೃತಿಗಳಿಂದ ಏಕಾಗ್ರತೆಯ ಶಿಸ್ತಿನಿಂದ ಅವರು ಆದರ್ಶ ಅಧ್ಯಾಪಕರಾಗಿ ಮುಂದಿನವರಿಗೆ ಮಾರ್ಗದರ್ಶಕರಾಗಿ ಬಾಳಿದರು, ಬಾಳಿ ಬೆಳಗಿದರು". ಅಷ್ಟು ಕಾರ್ಯದಕ್ಷರಾಗಿದ್ದಾಗ ಜೀಶಂಪ ಎಂದೂ ಯಾರ ಮೇಲೂ ಚಾಡಿ ಹೇಳಿದವರಲ್ಲ; ದ್ವೇಷಸಾಧಿಸಿದವರಲ್ಲ, ಯಾರ ಕುರಿತಾಗಿಯೂ ಸಣ್ಣ ಮೇಲೆ ಕ್ರೋಧ ತೋರಿದವರಲ್ಲ, ಅವಿಧೇಯತೆಯಿಂದ ವರ್ತಿಸಿದವರಲ್ಲ; ಅಷ್ಟೇ ಅಲ್ಲ, ತಮ್ಮ ಸ್ವಾರ್ಥಕ್ಕಾಗಿ ಅಧಿಕಾರವನ್ನು ದುರುಪಯೋಗಪಡಿಸಿ ಕೊಂಡವರಲ್ಲ. ವಿನಯ ಸೌಜನ್ಯಗಳಿಂದಲೇ ಅವರು ಎದುರಾದವರನ್ನು ಗೆದ್ದುಕೊಳ್ಳುತ್ತಿದ್ದರು.

ಜೀಶಂಪ ಅವರ ಮೆಚ್ಚಿನ ಗುರುಗಳಾದ ಡಾ.ಹಾ.ಮಾ.ನಾಯಕ ಅವರು ಹೀಗೆ ದಾಖಲಿಸಿದ್ದಾರೆ. "ಶ್ರೀಮಾನ್ ಜೀ.ಶಂ.ಪರಮಶಿವಯ್ಯ ಅವರ ಹೆಸರು ಕನ್ನಡ ನಾಡಿನಲ್ಲಿ ಈಗ ಇಪ್ಪತ್ತೈದು ವರ್ಷಗಳಿಂದಲೂ ಪ್ರಸಿದ್ಧವಾಗಿರುವ ಹೆಸರು. ಅವರು ಶ್ರದ್ಧಾವಂತ ಅಧ್ಯಾಪಕರು, ಪ್ರತಿಭಾವಂತ ಲೇಖಕರು, ಒಳ್ಳೆಯ ವಾಗ್ಮಿ, ಸಂಶೋಧಕರು ಮತ್ತು ಜಾನಪದ ವಿಶ್ವಕೋಶ. ಅವರು ಜಂಗಮ ಜಾನಪದ. ಅನೇಕ ಕ್ಷೇತ್ರಗಳಲ್ಲಿ ಪರಿಣತರಾಗಿ, ಸೃಜನಶೀಲ ಲೇಖಕರೂ ಆಗಿ ಕಥೆ, ಪ್ರಬಂಧ, ಕಾದಂಬರಿ, ನಾಟಕಗಳನ್ನು ರಚಿಸಿದ್ದಾರೆ. ಜಾನಪದ ಸಂಶೋಧನೆ, ಪ್ರಕಟಣೆ, ಕ್ಷೇತ್ರಕಾರ್ಯಕ್ಕಾಗಿ ಇವರು ಕರ್ನಾಟಕದ ಮೂಲೆ ಮೂಲೆಗಳನ್ನು ತಿರುಗಿದ್ದಾರೆ. ಇದೇ ಉದ್ದೇಶಕ್ಕಾಗಿ ಮತ್ತು ಪ್ರಪಂಚದ ಇತರ ಭಾಗಗಳಲ್ಲಿ ಜಾನಪದ ಅಭಿವೃದ್ಧಿ ಮತ್ತು ಆಧುನಿಕ ಜೀವನದಲ್ಲಿ ಪ್ರಪಂಚದ ಇತರ ಭಾಗಗಳಲ್ಲಿ ಜಾನಪದ ಅಭಿವೃದ್ಧಿ ಮತ್ತು ಆಧುನಿಕ ಜೀವನದಲ್ಲಿ ಅದರ ಪ್ರಸ್ತುತತೆಯನ್ನು ಅರ್ಥಮಾಡಿಸುವ ಉದ್ದೇಶದಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲೆಲ್ಲಾ ತಿರುಗಾಡಿ ವಿಷಯ ಸಂಗ್ರಹಮಾಡಿ ಅನುಭವ ಹೊಂದಿ ಬಂದಿದ್ದಾರೆ. ಜೀಶಂಪ ಅವರು ನನ್ನ ವಿದ್ಯಾರ್ಥಿಯಾಗಿದ್ದರು; ಸಹೋದ್ಯೋಗಿಯಾದರು. ನನ್ನ ಜತೆಗಿದ್ದು ಕನ್ನಡ ಅಧ್ಯಯನ ಸಂಸ್ಥೆಯನ್ನು ಕಟ್ಟಿ ಬೆಳೆಸುವುದರಲ್ಲಿ ಸಹಾಯ ಮಾಡಿದರು. ಅಂಬಲಜೀರಹಳ್ಳಿಯ ಅವರ ಮನೆಗೆ ಹೋಗಿ ಸವಿಯಾದ ಎಳನೀರನ್ನು ಕುಡಿದ ನೆನಪು ಎಂದಿಗೂ ನನ್ನ ನೆನಪಿನಲ್ಲಿ ಉಳಿದಿರುತ್ತದೆ. ಅವರ ತಮ್ಮನಿಗೆ ಹೇಳಿ ಕೆಲವು ವರ್ಷಗಳ ಹಿಂದೆ ಮೂರು ತೆಂಗಿನ ಸಸಿಗಳನ್ನು ತರಿಸಿ ನಮ್ಮ ಮನೆಯ ಅಂಗಳದಲ್ಲಿ ನೆಡಿಸಿದರು. ಅವು ಈಗ ಕಾಯಿ ಬಿಡುತ್ತಿವೆ! ಮುಂದಿನ ಎಷ್ಟೋ ವರ್ಷಗಳವರೆಗೆ ಅವು ಜೀಶಂಪ ನೆನಪನ್ನು ಶಾಶ್ವತಗೊಳಿಸುತ್ತವೆ".

ಜಾನಪದ ವಿದ್ವಾಂಸರೂ, ಜೀಶಂಪ ಅವರ ಬಂಧುಗಳೂ ಆದ ಶ್ರೀ ಎಚ್.ಎಲ್.ನಾಗೇಗೌಡ ಅವರ ಬಗ್ಗೆ ಬರೆಯುತ್ತಾ "ಜಾನಪದ ಕ್ಷೇತ್ರದಲ್ಲಿ ಜೀಶಂಪ ಅವರ ಸಾಧನೆಯ ಬಗ್ಗೆ ಎರಡನೆಯ ಮಾತಿಲ್ಲ. ಕರ್ನಾಟಕ ಜಾನಪದ ಸಂಪತ್ತು ವಿಶ್ವಮಟ್ಟಕ್ಕೇರಲು ಅವರ ಪ್ರಾಮಾಣಿಕ ದುಡಿಮೆ ವಿದ್ವತ್ತು ಕಾರಣ ಎಂಬುದನ್ನು ಎಲ್ಲರೂ ಬಲ್ಲರು? ಆದರೆ ಆಮೇಲೆ ಅವರು ತುಳಿದ ದಾರಿ ಸ್ವಲ್ಪ ಬದಲಾಗಿದ್ದರೆ ವಿಶ್ವದ ಅತ್ಯಂತ ಶ್ರೇಷ್ಠ ಜಾನಪದ ತಜ್ಞರಲ್ಲೊಬ್ಬರಾಗುತ್ತಿದ್ದರು. ಕನ್ನಡ ಜಾನಪದಕ್ಕೂ ಇನ್ನೂ ಹೆಚ್ಚಿನ ಮಾನ್ಯತೆ ದೊರಕುತ್ತಿತ್ತು ಎಂಬುದು ನನ್ನ ಅಭಿಪ್ರಾಯ".

ಜೀಶಂಪ ಅವರ ಆತ್ಮೀಯ ಗೆಳೆಯರಾದ ಪಿ.ಆರ್.ತಿಪ್ಪೇಸ್ವಾಮಿ ಅವರು ಬರೆಯುತ್ತಾ "ಜೀಶಂಪ ಅವರು ಕರ್ನಾಟಕದ ಅನೇಕ ಜಾನಪದ ಪ್ರಕಾರಗಳನ್ನು ಗುರುತಿಸಿ ಬೆಳಕಿಗೆ ತಂದರು. ಮೂಡಲಪಾಯ ಯಕ್ಷಗಾನವೆಂದು ಹೆಸರಿಸಿ, ಅಳಿದು ಹೋಗುತ್ತಿದ್ದ ಅಪೂರ್ವ ಯಕ್ಷಗಾನ ಕಲೆ ಉಳಿವಿಗಾಗಿ ಕಾರಣಕರ್ತರಾದರು. ಒಟ್ಟಿನಲ್ಲಿ ಕರ್ನಾಟಕ ಜಾನಪದ ಕ್ಷೇತ್ರಕ್ಕೆ ಜೀಶಂಪ ಕೊಡುಗೆ ಹಿರಿದಾದು. ಹೀಗೆ ನಾನು ಹಾಗೂ ಮಿತ್ರ "ಜೀಶಂಪ" ಅವರು ಸುಮಾರು ಅರ್ಧ ಶತಮಾನದಷ್ಟು ಕಾಲ ಮಿತ್ರರಾಗಿ, ಸೋದರ ಸಮಾನರಾಗಿ ಒಟ್ಟಿಗೆ ಬಾಳಿ ಬೆಳೆದೆವು. ನನ್ನಿಂದ ಅವರು ಅವರಿಂದ ನಾನು ಸ್ಫೂರ್ತಿಪಡೆದು ನಮ್ಮ ಬದುಕನ್ನು ಹಸನಾಗಿಸಿಕೊಂಡೆವು. ಇಂಥ ಅಪರೂಪದ ಆತ್ಮೀಯರನ್ನು ಜೀವದ ಗೆಳೆಯರನ್ನು ಕಳೆದುಕೊಂಡು ಬಾಳು ಬರಡು ಎಂಬ ಭಾವ ಕಾಡುತ್ತಿದೆ. ಇದು ನನಗೊಬ್ಬನಿಗೆ ಆದ ನಷ್ಟವಲ್ಲ, ಕರ್ನಾಟಕದ ಜಾನಪದ ಕ್ಷೇತ್ರಕ್ಕೆ ಆದ ದೊಡ್ಡ ನಷ್ಟವೆಂಬುದು ನನ್ನ ಭಾವನೆ.

"ಜೀಶಂಪ ಅವರಿಗೆ ಕ್ಷೇತ್ರಕಾರ್ಯದ ಅನುಭವ ದಟ್ಟವಾಗಿತ್ತು. ಕರ್ನಾಟಕದ ಉದ್ದಗಲಕ್ಕೂ ಅವರು ಹಲವು ಬಾರಿ ಸುತ್ತಾಡಿ, ಅಪಾರ ಸಾಹಿತ್ಯವನ್ನು ಸಂಗ್ರಹಿಸಿ, ಅದರ ಅಧ್ಯಯನವನ್ನು ಆಳವಾಗಿ ನಡೆಸಿ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಕರ್ನಾಟಕದ ಜನಪದ ವೃತ್ತಿಗಾಯಕರ ಬಗ್ಗೆ ಮೊತ್ತ ಮೊದಲ ಬಾರಿಗೆ ಅತ್ಯಂತ ವ್ಯಾಪಕವಾದ ರೀತಿಯಲ್ಲಿ ಅವರು ನಡೆಸಿದ ಅಧ್ಯಯನ ಅವರ ಜಾನಪದ ಆಸಕ್ತಿಗೆ ಹಾಗೂ ಪ್ರತಿಭೆಗೆ ಜ್ವಲಂತ ಸಾಕ್ಷಿ, ಜಾನಪದ ಕ್ಷೇತ್ರದಲ್ಲಿ ಅವರು ನಡೆಸಿದ ಸಂಗ್ರಹಕಾರ್ಯ, ಸಂಶೋಧನೆ, ಸಂಪಾದನೆ, ವಿಮರ್ಶೆ ಮುಂತಾದ ಕಾರ್ಯಗಳು ಮುಂದಿನ ಯುವ ಜಾನಪದ ವಿದ್ವಾಂಸರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡಬಲ್ಲ ಆದರ್ಶಗಳು. ಕರ್ನಾಟಕದಲ್ಲಿ ಅವರಷ್ಟು ಜಾನಪದದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಅಪರೂಪ".

ಡಾ.ಜೀ.ಶಂ.ಪರಮಶಿವಯ್ಯ ಅವರ ಸಾಧನೆ ಸಿದ್ದಿಗೆ ದೊರೆತ ಮಾನ್ಯತೆ ಅಪಾರ. ಅವರು ಜನಪದ ಕಲಾವಿದರ ಹೃದಯದಲ್ಲಿ ನೆಲೆಸಿದವರು. ಹಾಗೆಯೇ ವಿದ್ವಾಂಸರ ನೆನಪಿನಲ್ಲಿ ಹಸಿರಾಗಿ ಉಳಿದವರು. ಅವರ ಸಾಧನೆಯನ್ನು ಸರ್ಕಾರ ಗುರುತಿಸಿ ಗೌರವಿಸಿದೆ. ಆ ಕಾರಣದಿಂದಲೇ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಅವರಿಗೆ ಲಭಿಸಿತು. ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ ರಾಷ್ಟ್ರೀಯ ಪ್ರಾಧ್ಯಾಪಕ ಗೌರವ, ಹದಿಮೂರನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ಕರ್ನಾಟಕದ ವಿಶ್ವವಿದ್ಯಾಲಯ ಅಧ್ಯಕ್ಷ ಪಟ್ಟ ಈ ಎಲ್ಲ ಗೌರವಗಳೂ ಅವರಿಗೆ ಸಂದಿವೆ. ಅಷ್ಟೇ ಅಲ್ಲ, ಅವರ ಸಾಧನೆಯನ್ನು ಗುರುತಿಸಿ ಆ ಕ್ಷೇತ್ರದಲ್ಲಿ ದುಡಿದ ಇನ್ನಿತರರೂ ಅವರಿಗೆ ಕೊಟ್ಟಿರುವ ಬಿರುದುಗಳೂ ಅವರ ಶ್ರೇಷ್ಠತೆಯನ್ನು ಸಾರುತ್ತವೆ. ಜಾನಪದ ಪಂಪ, ಜಾನಪದ ಭೀಷ್ಮ, ಜಾನಪದ ಜಾಣ, ಜಾನಪದ ವಿಶ್ವಕೋಶ, ಜಾನಪದ ಜಂಗಮ, ಜಾನಪದ ತಿಮಿಂಗಲ, ಜಾನಪದ ಮಹಾಮತ್ಸ್ಯ, ಜಾನಪದ ದೀಕ್ಷಾಗುರು, ಜಾನಪದ ಜೀವನಾಡಿ ಹೀಗೆ ಒಬ್ಬೊಬ್ಬರ ಕಣ್ಣಲ್ಲಿಯೂ ಅವರು ಒಂದೊಂದು ಬಗೆಯಾಗಿ ಕಂಡಿದ್ದಾರೆ.

ಡಾ.ಜೀ.ಶಂ.ಪ ಅವರು ಜಾನಪದ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಬಹುಮುಖಿಯಾದದ್ದು. ಸಂಶೋಧನೆ, ಸಂಗ್ರಹಣೆ, ಸಂಪಾದನೆ, ಸಂಘಟನೆ ಹೀಗೆ ಜಾನಪದ ಅಧ್ಯಯನವನ್ನು ಸಮಗ್ರ ದೃಷ್ಟಿಯಿಂದ ನೋಡಿದವರು ಜೀಶಂಪ. ಅಧ್ಯಯನದಲ್ಲಿ ವೈಜ್ಞಾನಿಕ ದೃಷ್ಟಿಯನ್ನು ಬೆರಸಿ ಅಂತಹ ಒಂದು ಪಡೆಯನ್ನು ನಿರ್ಮಿಸಲು ಕಾರಣ ಕರ್ತರಾದವರೂ ಅವರೇ.

ಜಾನಪದಕ್ಕೆ ಸಂಬಂಧಿಸಿದಂತೆ ಅವರು ನಲವತ್ತಕ್ಕೂ ಹೆಚ್ಚು ವಿವಿಧ ಬಗೆಯ ಕೃತಿಗಳನ್ನು ಹೊರತಂದಿದ್ದಾರೆ. ಜನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಗುರುತಿಸಿ ಅವುಗಳ ಮೂಲ ಚೂಲಗಳನ್ನು ಶೋಧಿಸಿ, ವಿಶ್ಲೇಷಿಸಿ, ವಿಮರ್ಶಿಸಿದಂತೆಯೇ, ಜನಪದ ಕಲೆಗಳನ್ನು ಶೋಧಿಸಿ ತಲಸ್ಪರ್ಶಿಯಾದ ಅಧ್ಯಯನವನ್ನು ನಡೆಸಿದವರಲ್ಲಿ ಜೀಶಂಪ ಮೊದಲಿಗರು.

ಜನಪದ ಸಾಹಿತ್ಯ ಸಮೀಕ್ಷೆ, ಜಾನಪದ, ಜಾನಪದ ಸಂಗಮ, ಜಾನಪದ ಕೆಲವು ಮುಖಗಳು, ಜಾನಪದ ಸಮೀಕ್ಷೆ, ಜನಪದ ಕಲಾವಿಹಾರ ಈ ಮುಂತಾದ ಕೃತಿಗಳು ಜೀಶಂಪ ಅವರ ವಿದ್ವತ್ತಿಗೆ ಹಾಗೂ ಜಾನಪದ ಬಗೆಗಿನ ಅರಿವಿಗೆ ಮೂಲ ಸಾಕ್ಷಿಯಾಗಿ ನಿಲ್ಲುತ್ತದೆ. ಜಾನಪದ ವಿವಿಧ ಮಗ್ಗಲುಗಳನ್ನು ಅದರ ಆಳ ಅಗಲಗಳನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಗಣಿಸಿ ವಿಶ್ಲೇಷಿಸಿರುವುದನ್ನು ಇಲ್ಲಿ ಕಾಣಬಹುದು.

೧೯೬೭ರಲ್ಲಿ ಪ್ರಕಟವಾದ ಅವರ ಜಾನಪದ ಸಾಹಿತ್ಯ ಸಮೀಕ್ಷೆ ಹದಿನೆಂಟು ಉತ್ತಮ ಲೇಖನಗಳನ್ನು ಒಳಗೊಂಡ ಸಂಗ್ರಹ. ಇದರಲ್ಲಿ ಜನಪದ ಸಾಹಿತ್ಯ ಸಂಸ್ಕೃತಿ ಹಾಗೂ ಆ ಒಂದು ಪರಂಪರೆಯ ಸೊಬಗು, ಸೌಂದರ್ಯ ಹಾಗೂ ಸ್ವಾರಸ್ಯಗಳನ್ನು ಬಿಡಿಸಿಟ್ಟಿದ್ದಾರೆ. ಜನಪದರ ಬದುಕು, ಅವರ ಮುಗ್ಧ ಭಕ್ತಿ, ಬಂಧುತ್ವದಲ್ಲಿ ಕಾಣಬರುವ ಅನ್ಯೋನ್ಯತೆ ಇತ್ಯಾದಿಗಳನ್ನು ವಿಶ್ಲೇಷಿಸಿ ಅದರ ಸೊಬಗನ್ನು ಸೆರೆಹಿಡಿದಿದ್ದಾರೆ. ಹಾಗೆಯೇ ಅವರ ಮತ್ತೊಂದು ಕ್ಷೇತ್ರವಾದ ಜನಪದ ಕಲೆಗಳ ಸಂಗ್ರಹ ಮತ್ತು ಸಂರಕ್ಷಣೆಯನ್ನು ಕುರಿತ ಲೇಖನಗಳೂ ಇದರಲ್ಲಿವೆ.

ಡಾ.ಜೀಶಂಪ ಅವರು ಬರೆದ ಯಾವುದೇ ಲೇಖನವಾಗಲಿ, ಕೃತಿಯಾಗಲಿ, ಅವೆಲ್ಲವೂ ಕೇವಲ ಜಾನಪದವನ್ನು ಕುರಿತ ಸಂಗ್ರಹಣೆಯಾಗಿರದೆ ಅಥವಾ ಮೇಲ್ನೋಟದ ವಿಶ್ಲೇಷಣೆಯೋ ವಿಮರ್ಶೆಯೋ ಆಗಿರದೆ, ಅವುಗಳ ಮೂಲವನ್ನು ಶೋಧಿಸುವ ಪ್ರಯತ್ನವಾಗಿರುವುದು ಗಮನಾರ್ಹ. ಒಂದು ಕಥೆಯನ್ನೋ ಗೀತೆಯನ್ನೋ, ಗಾದೆಯನ್ನೋ ಅಥವಾ ಕಲೆಯನ್ನೋ ಕೈಗೆತ್ತಿಕೊಂಡರೆ ಅದರ ಹಿನ್ನೆಲೆಯನ್ನು ಜಾಲಾಡುವ ಜಾದುಗಾರರಾಗಿ ಅವರು ಗೋಚರಿಸುತ್ತಾರೆ. ಜನಪದ ಸಂಸ್ಕೃತಿಯ ಬೇರುಗಳನ್ನು ಗುರುತಿಸಿ ಬದುಕಿನಲ್ಲಿ ಹಲವು ಹಾಸುಹೊಕ್ಕಾಗಿ ಬೆಳೆದು ಬಂದಿರುವುದನ್ನು ಶೋಧಿಸುತ್ತಾರೆ. ಜಾನಪದ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಅವುಗಳನ್ನು ವಿಶ್ಲೇಷಿಸುತ್ತಾರೆ. ವೈಜ್ಞಾನಿಕ ದೃಷ್ಟಿಯ ಮೂಲಕ ಅವರು ನಡೆಸಿರುವ ಅಧ್ಯಯನ ಜಾನಪದದ ಮೇಲೆ ಹೊಸ ಬೆಳಕು ಚೆಲ್ಲುವಂತಹುದು. ಜಾನಪದ ಕೃತಿಗಳಿಗೆ ಬರೆದ ಮುನ್ನುಡಿಗಳನ್ನೊಳಗೊಂಡ ಅವರ 'ಜಾನಪದ ಸಂಗಮ' ಕೂಡ ಆಯಾ ವಿಷಯಗಳ ಮೇಲೆ ಹೊಸ ಬೆಳಕನ್ನು ಚೆಲ್ಲುವ ವಿಚಾರಪೂರಿತ ಸಂಶೋಧನಾ ದೃಷ್ಟಿಯುಳ್ಳ ಲೇಖನಗಳೇ ಆಗಿವೆ.

ಜೀಶಂಪ ಅವರ ಕ್ಷೇತ್ರಕಾರ್ಯಾನುಭವ ಅಪಾರವಾದದ್ದು. ಅವರು ನಾಲ್ಕು ಗೋಡೆಗಳ ಮಧ್ಯೆ ಕುಳಿತು ಜಾನಪದ ಅಧ್ಯಯನವನ್ನು ಮಾಡಿದವರಲ್ಲ. ಅವರಿಗೆ ಮಣ್ಣಿನ ವಾಸನೆಯ ಸೊಗಡಿನಂತೆಯೇ ವೈಜ್ಞಾನಿಕ ವಿಶ್ಲೇಷಣಾ ವಿಧಾನಗಳ ಸೊಗಡು ಸಮಪ್ರಮಾಣದಲ್ಲಿ ಇದ್ದು, ಜಾನಪದವನ್ನು ಸಮತೂಕದಲ್ಲಿ ನೋಡಲು ಸಾಧ್ಯವಾಯಿತು. ಒಂದು ಕಾಲದವರೆಗೆ ಸೀಮಿತ ಚೌಕಟ್ಟಿನಲ್ಲಿದ್ದ ಜಾನಪದ ಅಧ್ಯಯನ ವ್ಯಾಪ್ತಿಯಿಂದ ಹೊರಬಂದು ಅದನ್ನು ವಿಶ್ಲೇಷಿಸಿ ವಿಮರ್ಶಿಸಲು ಸಾಧ್ಯವಾಯಿತು.

ಜೀಶಂಪ ಅವರು ದೊಡ್ಡ ಜಾನಪದ ಸಂಶೋಧಕರಾಗಿದ್ದಂತೆಯೇ ಅಷ್ಟೇ ದೊಡ್ಡ ಸಂಗ್ರಹಕರಾಗಿಯೂ ಹೆಸರಾದವರು. ಸಂಶೋಧನೆ ಮತ್ತು ಸಂಗ್ರಹಕಾರ್ಯ ಇವೆರಡೂ ಜೊತೆ ಜೊತೆಯಲ್ಲಿಯೇ ನಡೆಯುವ ಕಾರ್ಯಗಳು. ನಂತರ ವಿಮರ್ಶೆ ಮತ್ತು ವಿಶ್ಲೇಷಣೆ. ಜೀಶಂಪ ಅವರು ಈ ನಾಲ್ಕರಲ್ಲಿಯೂ ಪರಿಣತಿಯನ್ನು ಸಾಧಿಸಿದ್ದರು. ಅವರ ಪಿ.ಎಚ್.ಡಿ. ಮಹಾಪ್ರಬಂಧ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಒಂದು ಉತ್ಕೃಷ್ಟ ಸಂಶೋಧನ ಪ್ರಬಂಧ. ಕರ್ನಾಟಕದ ಜನಪದ ಕಲೆಗಳಲ್ಲಿ ಹಲವನ್ನು ಮೇಲ್ನೋಟಕ್ಕೆ ಗುರುತಿಸುವ ಕಾರ್ಯಸ್ವಲ್ಪ ಮಟ್ಟಿಗೆ ಆಗಿತ್ತಾದರೂ ಅವುಗಳನ್ನು ಒಳಹೊಕ್ಕು ನೋಡುವ ಕಾರ್ಯ ಸಮರ್ಪಕವಾಗಿ ಆಗಿರಲಿಲ್ಲ ಎಂದೇ ಹೇಳಬಹುದು. ಮತ್ತೆ ಕೆಲವು ಕೃತಿಗಳು ಹಾಗೆಯೇ ಅಜ್ಞಾತವಾಗಿಯೇ ಉಳಿದಿದ್ದವು. ಆದರೆ ಜೀಶಂಪ ಅವುಗಳನ್ನು ಬೆಳಕಿಗೆ ತರುವಲ್ಲಿ ಯಶಸ್ವಿಯಾದರು. ದಕ್ಷಿಣ ಕರ್ನಾಟಕದ ವೃತ್ತಿಗಾಯಕರ ಬಗ್ಗೆ ಜೀಶಂಪ ಅವರು ನಡೆಸಿರುವ ಸಂಶೋಧನೆ ಅಪೂರ್ವ ರೀತಿಯದು. ಧಾರ್ಮಿಕ ವೃತ್ತಿಗಾಯಕರಾಗಲಿ ಅಥವಾ ಲೌಖಿಕ ವೃತ್ತಿಗಾಯಕರಾಗಲಿ ಅವರ ಪರಂಪರೆ ಅವರ ವೈಶಿಷ್ಟ್ಯ ಸಾಹಿತ್ಯದ ಸತ್ವ, ವೇಷಭೂಷಣ, ವಾದ್ಯ ವಿಶೇಷಗಳು, ಬಳಸುವ ಲಾಂಛನಗಳು, ಧಾರ್ಮಿಕವಾದ ಹಾಗೂ ಲೌಕಿಕವಾದ ಅವರ ಸಂಬಂಧಗಳು ಇತ್ಯಾದಿ ವಿಷಯಗಳನ್ನು ಜೀಶಂಪ ಎಳೆಎಳೆಯಾಗಿ ಬಿಡಿಸಿದ್ದಾರೆ. ಕಲಾವಿದರ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ಬದುಕಿನ ರೀತಿನೀತಿಗಳನ್ನು ವಿಶ್ಲೇಷಿಸಿದ್ದಾರೆ.

ಜೀಶಂಪ ಅವರ ಆತ್ಮೀಯ ಮಿತ್ರರಾದ ಪಿ.ಆರ್.ತಿಪ್ಪೇಸ್ವಾಮಿ ಹೇಳುವಂತೆ ೧೯೬೦ರಲ್ಲಿ ನಾವು ಕೆಲವು ಮಿತ್ರರೊಡಗೂಡಿ ತರೀಕೆರೆಯಲ್ಲಿ ಪ್ರಥಮ ಜಾನಪದ ಸಮ್ಮೇಳನ ನಡೆಸಲು ತೀರ್ಮಾನಿಸಿದೆವು. ಸಮ್ಮೇಳನದ ಸಂದರ್ಭದಲ್ಲಿ 'ಜೀಶಂಪ' ಅವರ ಸಂಪಾದಕತ್ವದಲ್ಲಿ ಪ್ರಕಟವಾದ "ಹೊನ್ನಬಿತ್ತೇವು ಹೊಲಕ್ಕೆಲ್ಲ" ಎಂಬ ಗ್ರಂಥ ಕನ್ನಡ ಜಾನಪದ ಕ್ಷೇತ್ರದಲ್ಲಿ ಅಪರೂಪದ ಕೃತಿಯಾಗಿ ಉಳಿದಿದೆ. ಜೀಶಂಪ ಅವರಲ್ಲಿ ಹುದುಗಿದ್ದ ಜಾನಪದ ಆಸಕ್ತಿಯನ್ನು ಗುರುತಿಸಿದ 'ಶ್ರೀ ದೇಜಗೌ' ಹಾಗೂ 'ಹಾಮಾನಾ' ಅವರಲ್ಲಿ ಮನೆಮಾಡಿತ್ತು. ಜೀಶಂಪ ಅವರು "ಈ ಕೆಲಸಕ್ಕೆ ತಿಪ್ಪೇಸ್ವಾಮಿಯವರೇ ಸೂಕ್ತ ವ್ಯಕ್ತಿ" ಎಂದು ಅವರ ಮನವೊಲಿಸಿ, ಜೀವನದ ಉದ್ದಕ್ಕೂ ನೌಕರಿಗೆ ಸೇರಬಾರದೆಂದು ಇದ್ದ ನನ್ನ ನಿರ್ಧಾರವನ್ನು ಹುಸಿಗೊಳಿಸಿ ಈ ಒಂದು ಗುರುತರವಾದ ಕೆಲಸಕ್ಕೆ ನನ್ನನ್ನು ಒಪ್ಪಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಿಭಾಗದಲ್ಲಿ ನಾವಿಬ್ಬರೂ ಒಟ್ಟಾಗಿ ೧೪ವರ್ಷಗಳ ಕಾಲ ಅವಿರತವಾಗಿ ದುಡಿದೆವು. ಪೂರ್ವ ಏಷ್ಯಾ ಖಂಡದಲ್ಲೇ ಅಪರೂಪದ ಜಾನಪದ ವಸ್ತು ಸಂಗ್ರಹಾಲಯವೊಂದನ್ನು ನಾವಿಬ್ಬರೂ ಕಟ್ಟಿ ಬೆಳೆಸಿದೆವು" 'ಜೀಶಂಪ' ಅವರ ಮಾತುಗಳನ್ನೇ ಇಲ್ಲಿ ಕೊಡುವುದು ಉಚಿತ ಎನಿಸುತ್ತದೆ.

"ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತು ಸಂಗ್ರಹಾಲಯದ ಬೆಳವಣಿಗೆ ವಿಶೇಷವಾಗಿ ದುಡಿದಿರುವ ತಿಪ್ಪೇಸ್ವಾಮಿಯವರು ಕನ್ನಡ ನಾಡಿನ ಮೂಲೆ ಮೂಲೆಗಳಲ್ಲಿ ಸಂಚಾರಮಾಡಿ ಅಪಾರ ವಸ್ತುಗಳನ್ನು ಸಂಗ್ರಹಿಸಿ ತಂದಿದ್ದಾರೆ. ಜೀಶಂಪ ಅವರೊಡನೆ ನಿಂತು ಈ ವಸ್ತು ಸಂಗ್ರಹಾಲಯ ವ್ಯಾಪಕವಾಗಿ ರೂಪಗೊಳ್ಳಲು ಕಾರಣರಾಗಿದ್ದಾರೆ".

ತಮ್ಮ ಸಂಶೋಧನಾ ಪ್ರಬಂಧದ ಪ್ರಾರಂಭದಲ್ಲಿ ಅವರು ಪ್ರಸ್ತಾಪಿಸಿರುವ, ಜಗತ್ತಿನ ಜಾನಪದ ಕ್ಷೇತ್ರದಲ್ಲಿ ಜಾನಪದದ ಬಗ್ಗೆ ನಡೆದಿರುವ ಚಿಂತನೆ, ಮರುಚಿಂತನೆ ಹಾಗೂ ಜಾನಪದದ ಶೀರ್ಷಿಕೆಯ ವಿಶ್ಲೇಷಣೆಯ ಬಗೆಗೆ ವ್ಯಾಖ್ಯಾನಗಳ ನಿರೂಪಣೆ ಆ ಅಧ್ಯಯನದಲ್ಲಿ ತೊಡಗುವವರಿಗೆ ಹೆಚ್ಚು ಉಪಯುಕ್ತವಾದುದಾಗಿದೆ. ಎಲ್ಲದೃಷ್ಟಿಯಿಂದ ಈ ಮಹಾ ಸಂಶೋಧನಾ ಪ್ರಬಂಧ ಜಾನಪದ ಕ್ಷೇತ್ರಕ್ಕೆ ಅತ್ಯಂತ ಮಹತ್ವದ ಕೊಡುಗೆ. ಜಾನಪದ ಸಂಶೋಧನೆ ಮತ್ತು ಅಧ್ಯಯನಕ್ಕೆ ಘನತೆ ಗೌರವವನ್ನು ತಂದುಕೊಟ್ಟ ಕೃತಿ ಇದಾಗಿದೆ.

ಡಾ.ದೇವೇಂದ್ರ ಕುಮಾರ ಹಕಾರಿಯವರು ತಮ್ಮ ಲೇಖನದಲ್ಲಿ ಬರೆಯುತ್ತಾ "೧೯೫೦-೬೦ರ ಅವಧಿಯಲ್ಲಿ ಗದ್ದಗೀಮಠರಿಗೆ ಸರಿದೊರೆಯಾಗಿ ಕಾರ್ಯಕ್ಷೇತ್ರ ಮತ್ತು ಜನಪದ ಸಾಹಿತ್ಯ ಕುರಿತು ಉತ್ತಮ ಲೇಖನ ಬರೆದು ಪ್ರಕಟಿಸಿದವರು ಡಾ.ಜೀಶಂಪ. ೧೯೬೦ರಿಂದ ಈಚೆಗೆ ಜೀಶಂಪ ಅವರು ಮಾಡಿದ ಈ ಕ್ಷೇತ್ರಕಾರ್ಯ ಸಂಶೋಧನೆ, ವಿಮರ್ಶೆಗಳು ನಾಡಿನ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಪ್ರಜಾವಾಣಿಯಲ್ಲಿ ಜನಪದ ಸಾಹಿತ್ಯ ಚಿತ್ರಗಳ ಲೇಖನಮಾಲೆ, ಸುಧಾ ಪತ್ರಿಕೆ ಮತ್ತು ಇತರ ವಿಶೇಷ ಸಾಹಿತ್ಯಾಂಕಗಳಲ್ಲಿ ಮೂಡಿಬಂದ ಜನಪದ ಕಾವ್ಯ ಸಂಪ್ರದಾಯ ಮತ್ತು ಆ ಸಂಪ್ರದಾಯದ ಗಾಯಕರನ್ನು ಗುರುತಿಸುವ, ನೇರವಾಗಿ ವಕ್ತೃಗಳನ್ನೇ ಕಾಣಬಹುದು. ಅವರ ಮೂಲಕ ಜನಪದ ಭಾಷೆಯಲ್ಲಿಯೇ ಹಾಡುಗಳನ್ನು, ಕಥೆಗಳನ್ನು ಸಂಗ್ರಹಿಸುವುದು ಇತ್ಯಾದಿ ವಿಶಿಷ್ಟ ಬಗೆಯ ಸಾಹಸದ ಕಾರ್ಯವನ್ನು ಜೀಶಂಪ ರೂಪಿಸಿಕೊಂಡರು. ಡಾ.ಗದ್ದಗೀಮಠ ಸಾಹಿತ್ಯಕ ನೆಲೆಯಲ್ಲಿ ಮಾಡಿ ಅಪೂರ್ಣಗೊಳಿಸಿದ ಕಾರ್ಯ ಡಾ.ಜೀಶಂಪ ಮುಂದುವರೆಸಿದರು ಮತ್ತು ತಮ್ಮ ಸ್ವೋಪಜ್ಞತೆ ಜನಪದ ಬದುಕಿನ ಬದ್ಧತೆ, ಜನಪದ ಸಂಸ್ಕೃತಿಯ ಗಾಢ ಕಾಳಜಿಗಳಿಂದಾಗಿ ಸಾಹಿತ್ಯಕ ನೆಲೆಯ ಜೊತೆಗೆ ಸಾಹಿತ್ಯೇತರ ಆಯಾಮಗಳನ್ನು ಜಾನಪದ ಅಧ್ಯಯನಕ್ಕೆ ಅಳವಡಿಸಿ ಮುನ್ನೆಡೆದರು.

ಜೀಶಂಪ ಅವರು ಮಾಡಿದ ಕಾರ್ಯ ಕಳೆದ ಶತಮಾನದಲ್ಲಿ ಜೆ.ಚೈಲ್ಡ್, ಬೆಷಪ್, ಪರ್ಸಿ, ಸರ್ ವಾಲ್ಟರ್‌ಸ್ಕಾಟ್ ಮುಂತಾದವರು ವಿದೇಶಗಳಲ್ಲಿ ಮಾಡಿದ ಕಾರ್ಯಕ್ಕೆ ಸಂವಾದಿಯಾಗಿದೆ.

ಜಾನಪದಕ್ಕೆ ಸಂಬಂಧಿಸಿದ ಅವರ ಪ್ರಥಮ ಕೃತಿಗಳು ಪ್ರಕಟವಾಗಿ ೧೯೬೭ರಲ್ಲಿ ಬಹುಶಃ ಅದೇ ವರ್ಷ ೧೯೬೬-೬೭ರಲ್ಲಿಯೇ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ.ಗೆ ಜನಪದ ಸಾಹಿತ್ಯದ ೧೦೦ ಅಂಕಗಳ ಒಂದು ಪತ್ರಿಕೆ ಸೇರ್ಪಡೆಯಾಯಿತು. ಅದೇ ವರ್ಷವೇ ಜೀಶಂಪ ಅವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಅಧ್ಯಾಪಕರಾಗಿ ಬಂದರು.

ಹೀಗೆ ಹೊಸದಾಗಿ ವಿಶ್ವವಿದ್ಯಾಲಯಕ್ಕೆ ಸೇರಿದ ಜೀಶಂಪ ದೇಶ ವಿದೇಶಗಳ ಬಗೆಗಿನ ಜಾನಪದವನ್ನು ಅರಿಯಲು ಪ್ರಯತ್ನಿಸಿದರು. ಬಹುಶಃ ಈ ಫಲವಾಗಿಯೇ ಇರಬೇಕು ಅಂತರಾಷ್ಟ್ರೀಯ ಜನಪದ ಕಥೆಗಳ ಅಭ್ಯಾಸದ ಪರಿಣಾಮದಿಂದಾಗಿ ಅವರು ಜನಪದ ಕಥೆಗಳ ಸಂಗ್ರಹವನ್ನು ಹೊರತಂದರೆಂದು ತೋರುತ್ತದೆ. ಈ ಮಾತು ಹೇಳಲು ಕಾರಣವೆಂದರೆ ಅವರು ತಮ್ಮ ಜಾನಪದ ಕಥಾಸಂಗ್ರಹಗಳಿಗೆ ಬರೆದ ಪ್ರಸ್ತಾವನೆಗಳನ್ನು ಗಮನಿಸಿದರೆ, ಕನ್ನಡದ ಕಥೆಗಳನ್ನು ಕುರಿತು ಬರೆಯುವಾಗ, ಅವರಿಗೆ ಅವುಗಳ ಅಂತರಾಷ್ಟ್ರೀಯ ಮಹತ್ವದ ಹಿನ್ನೆಲೆಯಲ್ಲಿನ ಅರಿವು ಇರುವುದು ಸ್ಪಷ್ಟವಾಗುತ್ತದೆ.

ಜೀಶಂಪ ಅವರ ಬಹುಮುಖ್ಯವಾದ ಕೊಡುಗೆ ಇರುವುದು ವೃತ್ತಿಗಾಯಕರ ಶೋಧದಲ್ಲಿ ಮತ್ತು ಅವರ ಕಥಾನಕಗಳನ್ನು ಪ್ರಕಟಿಸುವಲ್ಲಿ. ಜನಪದ ಕಥೆಗಳಿಗೆ ಸಂಬಂಧಿಸಿದಂತೆ ಅವರು ಮುಖ್ಯವಾಗಿ ಮೂರು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ ಮತ್ತು ಅವುಗಳಿಗೆ ಬರೆದ ಪ್ರಸ್ತಾವನೆಗಳೇ ಅವರು ಜನಪದ ಕಥೆಗಳ ಬಗ್ಗೆ ಬರೆದ ಬರವಣಿಗೆಗಳು ಎನಿಸುತ್ತವೆ. ಮತ್ತೆ ಜನಪದ ಕಥೆಗಳನ್ನು ಕುರಿತ ಪ್ರತ್ಯೇಕವಾದ ಬರವಣಿಗೆ ಇದ್ದಂತಿಲ್ಲ. ಹೀಗಾಗಿ ಕಥೆಗಳಿಗೆ ಸಂಬಂಧಿಸಿದ ಅವರ ಅಭ್ಯಾಸ ತಮ್ಮ ಸಂಗ್ರಹಗಳಿಗೆ ಪ್ರಸ್ತಾವನೆ ಬರೆಯುವ ಉದ್ದೇಶದಿಂದಲೇ ವಿಶೇಷವಾಗಿ ಮಾಡಿದುದು ಎನಿಸುತ್ತದೆ. ಆದರೆ ಆ ಪ್ರಸ್ತಾವನೆಗಳಲ್ಲಿ ಅವರ ಅಪಾರ ತಿಳುವಳಿಕೆಯ ಜೊತೆಗೆ ಅವುಗಳ ಬಗೆಗಿನ ವೈಜ್ಞಾನಿಕ ಅರಿವು ನಮಗೆ ಗಾಬರಿ ಹುಟ್ಟಿಸುವಂತದ್ದು. ಅದಕ್ಕಾಗಿ ಜೀಶಂಪ ಅವರ ಜನಪದ ಕಥೆಗಳ ಸಂಗ್ರಹಗಳಿಗೆ ಒಂದು ವಿಶಿಷ್ಟವಾದ ಮಹತ್ವ ಇದೆ.

ಜೀಶಂಪ ಅವರು ಸಂಗ್ರಹಿಸಿದ ಮೂರು ಜನಪದ ಕಥಾ ಸಂಗ್ರಹದಲ್ಲಿ ಎರಡು ಒಂದೇ ವರ್ಷ ೧೯೭೦ರಲ್ಲಿ ಪ್ರಕಟವಾಗಿವೆ. ೧೯೭೦ ಮಾರ್ಚ್ ತಿಂಗಳಲ್ಲಿ "ಆಯ್ದ ಜನಪದ ಕಥೆಗಳು" ಸಂಗ್ರಹ ಪ್ರಕಟವಾಗಿದೆ. ಎಂ.ಎ. ವಿದ್ಯಾರ್ಥಿಗಳು ಸಂಗ್ರಹಿಸಿ ತಂದ ನೂರಾರು ಕಥೆಗಳಲ್ಲಿ ಉತ್ತಮವೆನಿಸಿದ ೪೧ ಕಥೆಗಳನ್ನು ಆಯ್ದು ಇದರಲ್ಲಿ ಪ್ರಕಟಿಸಲಾಗಿದೆ. ಹೀಗೆ ಕಥೆಗಳ ಆಯ್ಕೆ ಮಾಡುವಲ್ಲಿ ಇದುವರೆಗೆ ಪ್ರಕಟವಾದ ಸಂಗ್ರಹಗಳಲ್ಲಿ ಬರೆದ ಕಥೆಗಳ ಆಯ್ಕೆ ಮಾಡಲು ಪ್ರಯತ್ನಿಸಿದ್ದು ಎದ್ದು ಕಾಣುತ್ತದೆ. ಆದರೆ ಜೀಶಂಪ ಅವರ ಈ ಮೂರು ಸಂಗ್ರಹಗಳ ಕಥೆಗಳನ್ನು ಗಮನಿಸಿದಾಗ ಮತ್ತು ಹತ್ತಾರು ವರ್ಷಗಳಲ್ಲಿ ಅನೇಕ ಸಲ ಕಥೆಗಳನ್ನು ಕುರಿತು ಅವರು ಮಾತನಾಡಿದುದನ್ನು ನೆನಪಿಸಿಕೊಂಡಾಗ ಈ ಕಥೆಗಳ ಸಾಹಿತ್ಯಿಕ ಗುಣಗಳ ಬಗ್ಗೆ ಅವರಿಗೆ ತೀರ ಒಲವು ಇರುವುದು ಯಾರಿಗಾದರೂ ಗೋಚರಕ್ಕೆ ಬರುತ್ತದೆ.

ಹೀಗೆ ಕಥೆಗಳ ಸಾಹಿತ್ಯಿಕ ಗುಣಗಳೇ ಜೀಶಂಪ ಅವರಿಗೆ ಹೆಚ್ಚು ಆಕರ್ಷಕವಾಗಿ ಕಾಣಲು ಅವರೊಬ್ಬ ಮೂಲಭೂತವಾಗಿ ಸೃಜನಶೀಲ ಲೇಖಕರಾಗಿರುವುದು ಒಂದು ಕಾರಣವಾಗಿರಬಹುದು.

೧೯೭೦ರ ಸೆಪ್ಟೆಂಬರ್ ತಿಂಗಳಲ್ಲಿ ಪ್ರಕಟವಾದ "ಕನ್ನಡ ಜನಪದ ಕಥೆಗಳು" ಕನ್ನಡ ಜನಪದ ಕಥಾಸಂಕಲನಗಳಲ್ಲಿ ಒಂದು ಮಾದರಿ ಸಂಗ್ರಹವಾಗಿ ಈ ಕೃತಿ ನಿಲ್ಲುತ್ತದೆ. ಈ ಸಂಗ್ರಹ ಪ್ರಕಟವಾದ ನಂತರ ಪ್ರಕಟವಾದ ಕನ್ನಡ ಜನಪದ ಕಥಾಸಂಕಲನಗಳ ಬಹುತೇಕ ಸಂಪಾದಕರಿಗೆ ಈ ಸಂಗ್ರಹದ

ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಇಲ್ಲಿಯ ಪ್ರಸ್ತಾವನೆ, ವಿಭಾಗೀಯ ಕ್ರಮ, ಸಂಪಾದನೆಯ ಹಲವಾರು ಅಂಶಗಳು ಅನುಕರಣೀಯವಾಗಿವೆ. ಹೀಗಾಗಿ ಈ ಪುಸ್ತಕದ ಮಹತ್ವ ಗಣನೀಯ ಪ್ರಮಾಣದ್ದೆನಿಸುತ್ತದೆ.

ಸುದೀರ್ಘವಾದ ೨೧ ಪುಟಗಳ ಪ್ರಸ್ತಾವನೆ ಜನಪದ ಕಥೆಗಳ ಅಭ್ಯಾಸಕ್ಕೆ ಸಂಬಂಧಿಸಿದಂತೆ ವಿಪುಲವಾದ ಮಾಹಿತಿ ಒದಗಿಸುತ್ತದೆ. ಇದನ್ನು ಗಮನಿಸಿದರೆ ಜೀಶಂಪ ಅವರಿಗಿದ್ದ ಪ್ರಪಂಚ ಜಾನಪದದ ಅಭ್ಯಾಸದ ಅಪಾರ ತಿಳುವಳಿಕೆಯ ಅರಿವು ನಮಗಾಗುತ್ತದೆ. ೧೮೨೧ ರಿಂದ ಬೇರೆ ಬೇರೆ ದೇಶಗಳಲ್ಲಿ ಜನಪದ ಕಥೆಗಳ ಅಭ್ಯಾಸ ಹೇಗೆ ಪ್ರಾರಂಭವಾಯಿತು ಎಂಬುದನ್ನು ಸಾದ್ಯಂತವಾಗಿ ಬರೆಯುತ್ತಾರೆ. ಇಟಲಿ, ಫ್ರಾನ್ಸ್, ನಾರ್ವೆ, ಐರ್ಲೆಂಡ್, ಇಂಗ್ಲೆಂಡ್, ರಷ್ಯಾ, ಜಪಾನ್, ಅಮೇರಿಕಾ, ಭಾರತ ಮುಂತಾದ ಕಡೆ ನಡೆದ ಜನಪದ ಕಥೆಗಳ ಅಧ್ಯಯನದ ಜಾಗತಿಕ ಇತಿಹಾಸವನ್ನು ಇಲ್ಲಿ ತಿಳಿಸಿದ್ದಾರೆ.

ಜೊತೆಗೆ ಕಥೆಗೆ ಸಂಬಂಧಿಸಿದಂತೆ ಹುಟ್ಟಿಕೊಂಡ ಪ್ರಮೇಯಗಳ ಬಗೆಗೂ ಬರೆಯುತ್ತಾರೆ. ಮಾದರಿ ಮತ್ತು ಆಶಯಗಳ ಪರಿಕಲ್ಪನೆಗಳು ಜನಪದ ಕಥೆಗಳಿಗೆ ಸಂಬಂಧಿಸಿದಂತೆ ತೀರಾ ಮಹತ್ವದ ಅಭ್ಯಾಸಗಳು ಪ್ರಥಮವಾಗಿ ಈ ಕೃತಿಯಲ್ಲಿ ೨೫ ಕಥೆಗಳ ಮಾದರಿಗಳನ್ನು ಗುರುತಿಸಿ ಅನುಬಂಧದಲ್ಲಿ ವಿವರಗಳನ್ನು ಕೊಡಲಾಗಿದೆ. ಜೊತೆಗೆ ಕೆಲ ಕಥೆಗಳ ಮಾದರಿಗಳ ಬಗ್ಗೆ ಪ್ರಸ್ತಾವನೆಯಲ್ಲಿ ಚರ್ಚಿಸಲಾಗಿದೆ. ಹೀಗೆ ಒಂದು ಸಣ್ಣ ಮಾದರಿ ಸೂಚಿಯನ್ನು ಹೊಂದಿದ ಮತ್ತು ಮಾದರಿ ಆಶಯಗಳ ಬಗೆಗೆ ಅನ್ವಯಿಕವಾಗಿ ವಿಚಾರ ಮಾಡಿದ ಮೊದಲ ಗ್ರಂಥ ಇದಾಗಿದೆ.

ಈ ಸಂಕಲನದಲ್ಲಿ ಅಪೂರ್ವ ಕಥೆಗಳನ್ನು ಸಂಗ್ರಹಿಸಿ ವಿಶಿಷ್ಟ ರೀತಿಯಲ್ಲಿ ವರ್ಗೀಕರಿಸಿ ಕೊಟ್ಟಿರುವುದಲ್ಲದೆ, ವಿಶ್ವದ ಜಾನಪದ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನದ ಹಿನ್ನೆಲೆಯಲ್ಲಿ ನಡೆದಿರುವ ಮಾಹಿತಿಗಳನ್ನು ಸಂಗ್ರಹಿಸಿ ಪ್ರಸ್ತಾಪಿಸಿರುವ ವಿಧಾನ ಹಾಗೂ ವಿಷಯ ಒಬ್ಬ ಶ್ರೇಷ್ಠ ವಿದ್ವಾಂಸರಿಂದ ಮಾತ್ರ ಸಾಧ್ಯವಾಗುವಂತಹುದೆಂಬುದನ್ನು ದೃಢಪಡಿಸುತ್ತದೆ. ಯಾವುದೇ ಜಾನಪದ ಪ್ರಕಾರವನ್ನು ಸಂಗ್ರಹಿಸಿ ಕೊಡುವ ಹಿನ್ನೆಲೆಯಲ್ಲಿ ಸಂಗ್ರಹಕಾರ ಗಮನಿಸಬೇಕಾದ ಅಂಶಗಳ ಕಡೆ ಅವರು ಹೆಚ್ಚು ಗಮನ ಕೊಡುತ್ತಾರೆ. ಸಂಗ್ರಹ ಕಾರ್ಯ ಕೇವಲ ಯಾಂತ್ರಿಕವಾದ ಒಂದು ಕ್ರಿಯೆಯಲ್ಲ, ಅದು ಸೃಜನ ಶೀಲಕ್ರಿಯೆಗೆ ಸಂಬಂಧಿಸಿದ್ದು ಎಂಬುದರ ಕಡೆ ಅವರು ಗಮನ ಸೆಳೆಯುತ್ತಾರೆ. ಸಂಗ್ರಹಕಾರ್ಯವನ್ನು ಯಾರು ಬೇಕಾದರೂ ಮಾಡಬಹುದು. ಆದರೆ ಆ ಸಂದರ್ಭವಾದ ಮಾಹಿತಿ ಸಂಗ್ರಹಣೆ ಹಾಗೂ ವಿಶ್ಲೇಷಣಾ ವಿಧಾನವನ್ನು ಅಳವಡಿಸುವುದು ಬಹಳ ಮುಖ್ಯವಾಗುತ್ತದೆ. ಜೀಶಂಪ ಆ ಮರ್ಮವನ್ನು ಅರಿತು ಕ್ಷೇತ್ರಕಾರ್ಯ ಮಾಡಿದವರು ಹಾಗೂ ಉಳಿದವರಿಗೂ ಪ್ರೇರೇಪಿಸಿದವರು.

ಡಾ.ಜೀಶಂಪ ಅವರು ಸಂಶೋಧಿಸಿ, ಸಂಪಾದಿಸಿಕೊಟ್ಟಿರುವ ಜಾನಪದ ಸಂಬಂಧಿಯಾದ ಕೃತಿಗಳ ಆಳವಾದ ಜ್ಞಾನ ಸಂಖ್ಯೆಯನ್ನು ಗಮನಿಸಿದರೇ ಸಾಕು. ಆ ವಿಷಯದ ಬಗ್ಗೆ ಅವರಿಗಿದ್ದ ಆಳವಾದ ಜ್ಞಾನ ಎಷ್ಟೆಂಬುದು ವೇದ್ಯವಾಗುತ್ತದೆ. ಅವುಗಳ ಪ್ರಾಸ್ತಾವಿಕ ಪುಟಗಳ ಮೇಲೆ ಕಣ್ಣಾಡಿಸಿದರೂ ಸಾಕು ಅವರ

[illegible] ಅದಕ್ಕೆ ಅವರ ಕೃತಿಗಳೇ ಸಾಕ್ಷಿ.

ಜಾನಪದ ಸಂಗ್ರಹ ಕೃತಿಗಳು

೧. ಕರ್ನಾಟಕದ ವೃತ್ತಿಗಾಯಕರ ಕಾವ್ಯಗಳು

೨. ಗೊರವರ ಕಾವ್ಯಗಳು

೩. ದೊಂಬಿ ದಾಸರ ಆಖ್ಯಾನಗಳು

೪. ಜನಪದ ಕಾವ್ಯ ಕಥೆಗಳು

೫. ಕನ್ನಡ ಜನಪದ ಕಥೆಗಳು

೬. ಆಯ್ದ ಜನಪದ ಕಥೆಗಳು

೭. ದಕ್ಷಿಣ ಕರ್ನಾಟಕದ ಜನಪದ ಕಥೆಗಳು

೮. ಜನಪದ ಖಂಡ ಕಾವ್ಯಗಳು

೯. ಜನಪದ ವೀರ ಕಾವ್ಯಗಳು

೧೦. ಮಂಟೇಸ್ವಾಮಿ ಕಾವ್ಯ

೧೧. ಎರಡು ಜನಪದ ಕಾವ್ಯಗಳು

೧೨. ಪಿರಿಯಾಪಟ್ಟಣ ಕಾಳಗ

೧೩. ಭಾಗವಂತಿಕೆ ಮೇಳ

೧೪. ಮುದುಕು ಕೆಂಪೆಯ ಮಲ್ಲಿಕಾರ್ಜುನ

೧೫. ಆವರ ಸಿರಿದೇವ

ಸಂಶೋಧನ ಕೃತಿಗಳು

೧. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು

೨. ಜಾನಪದ

೩. ಜಾನಪದ ಕೆಲವು ಮುಖಗಳು

೪. ಜನಪದ ಸಾಹಿತ್ಯ ಸಮೀಕ್ಷೆ

೫. ಜಾನಪದ ಸಂಗಮ

೬. ಗಂಡಸರ ಜನಪದ ಗೀತೆಗಳು

೭. ಹೆಂಗಸರ ಜನಪದ ಗೀತೆಗಳು

೮. ಮಂಟೇಸ್ವಾಮಿ ನೀಲಗಾರರು

೯. ಕರ್ನಾಟಕ ಜನಪದ ವಾದ್ಯಗಳು

೧೦. ಕಂಸಾಳೆಯವರು

೧೧. ಮೈಲಾರ ಲಿಂಗ

೧೨. ದೊಂಬಿದಾಸರು

೧೩. ಕಿನ್ನರಿ ಜೋಗಿಗಳು

೧೪. ಸೂತ್ರದ ಗೊಂಬೆಯಾಟ

೧೫. ಜನಪದ ಅಡುಗೆಗಳು

೧೬. ಜನಪದ ಕಲಾವಿಹಾರ

೧೭. ಮೂಡಲಪಾಯ

೧೮. ಜಾನಪದ ಸಿರಿ

೧೯. ನಮ್ಮ ಜನಪದ ಕಲೆಗಳು

೨೦. ಜಾನಪದ ಒಂದು ಅಧ್ಯಯನ

ಸಂಪಾದಿತ ಜಾನಪದ ಪತ್ರಿಕೆಗಳು

೧. ಜಾನಪದ

೨. ಮೂಡಲಪಾಯ

೩. ಜಾನಪದ ವಾರ್ತಾ ಪತ್ರಿಕೆ

ಇವಿಷ್ಟೂ ಕೃತಿಗಳ ಹಿನ್ನೆಲೆಯಲ್ಲಿ ಡಾ.ಜೀಶಂಪ ಅವರು ಜಾನಪದ ಅಧ್ಯಯನಕ್ಕೆ, ಆ ಮೂಲಕ ಜಾನಪದ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ ಅಪಾರವಾದದ್ದು, ಅವಿಸ್ಮರಣೀಯವಾದದ್ದು. ಸಂಶೋಧನೆಯಾಗಲಿ, ಸಂಗ್ರಹಣೆಯಾಗಲಿ, ಸಂಪಾದನೆಯಾಗಲಿ ಅಥವಾ ಅವುಗಳ ವಿಶ್ಲೇಷಣೆ, ವಿಮರ್ಶೆಯಾಗಲಿ, ಇಲ್ಲವೆ ಕಲಾಭಿವೃದ್ಧಿಯಾಗಲಿ ಅಥವಾ ಜನಪದ ಕಲಾವಿದರ ಸಂಘಟನೆಯಾಗಲಿ ಈ ಎಲ್ಲದರಲ್ಲಿಯೂ ಅವರು

ತೊಡಗಿಸಿಕೊಂಡ ರೀತಿ, ಅಭಿವ್ಯಕ್ತಿಸಿದ ವಿಚಾರಧಾರೆ ಮಾರ್ಗದರ್ಶಿಯಾದದ್ದು. ಈ ವಿಚಾರಗಳಲ್ಲಿ ಅವರು ತೋರಿದ ಶ್ರದ್ಧೆ, ಪ್ರಾಮಾಣಿಕತೆ, ನಿಷ್ಠೆ ಮೊದಲಾದವು ಅವರಿಗೆ ಯಶಸ್ಸನ್ನು ತಂದು ಕೊಟ್ಟಿವೆ. ಕೀರ್ತಿಯನ್ನು ಗಳಿಸಿಕೊಟ್ಟಿವೆ. ಅವರಿಂದ ಕನ್ನಡ ಜಾನಪದ ಉಳಿದಿದೆ, ಬೆಳೆದಿದೆ. ಆ ಮೂಲಕ ಅವರಿಗೂ ಹಿರಿಮೆಯನ್ನು ತಂದುಕೊಟ್ಟಿದೆ.

ಅಧ್ಯಾಯ - ೩.

ಕನ್ನಡ ಜನಪದ ಕಥೆಗಳ ವೈಶಿಷ್ಟ್ಯ, ಸ್ವರೂಪ ಮತ್ತು ಲಕ್ಷ್ಯ

ಕನ್ನಡ ಜನಪದ ಕಥೆಗಳ ವೈಶಿಷ್ಟ್ಯ, ಸ್ವರೂಪ ಮತ್ತು ಲಕ್ಷಣ

ಜನಪದ ಕಥೆಗಳನ್ನು ಹೇಳುವ ಪರಿಪಾಠವಿದೆ. ಇದೊಂದು ಪ್ರಜ್ಞಾಪೂರ್ವಕ ಮನರಂಜನಾ ಕಲೆ. ಸಾಮಾಜಿಕವಾಗಿ, ಧಾರ್ಮಿಕವಾಗಿ ಕಥೆ ಕೆಲವೊಮ್ಮೆ ಪಾತ್ರವಹಿಸಿದರೂ ಮನರಂಜನೆ ಮುಖ್ಯವಾಗಿರುತ್ತದೆ. ಅದಷ್ಟೇ ಅಲ್ಲ ಮನುಷ್ಯನ ತಪ್ಪುಗಳನ್ನು ತಿದ್ದಿ ಸರಿದಾರಿಯಲ್ಲಿ ನಡೆಸುವಂತ ನೀತಿಬೋಧನೆಯೇ ಈ ಕಥೆಗಳ ಮುಖ್ಯ ಉದ್ದೇಶವಾಗಿದೆ. ಇಲ್ಲಿನ ಕಥೆಗಳು ವಯಸ್ಸಿನ ಸ್ಥಾನದ ಪರಿವೇ ಇಲ್ಲದೆ ಎಲ್ಲರಿಗೂ ಕುತೂಹಲ ಕೆರಳಿಸುವ ಸಾಧನಗಳಾಗಿವೆ.

ಜನಪದ ಕಥೆ ಜನಪದರ ಬದುಕಿನ ಸಾಂಪ್ರದಾಯಿಕ ಕಥೆ. ಇದು ಜನಪದ ಪರಂಪರೆಯ ಪೂರ್ವಕಾಲೀನ ಸಮಕಾಲೀನ ಮತ್ತು ಸಾರ್ವತ್ರಿಕ ಅಂಶಗಳಿಂದ ರಚನೆಗೊಂಡದ್ದು. ಜನಪದ ಕಥೆ ಒಟ್ಟು ಜನತೆಯಲ್ಲಿ ಇದ್ದದ್ದು. ಸದಾ ಪುನರಭಿವ್ಯಕ್ತಿಗೆ ಸಹ್ಯವಾಗಿರುವಂತದ್ದು. ಜನಪದರು ಹೇಳುವ ಮತ್ತು ಸೇರಿಸುವ ಗುಣದಿಂದ ಬಂದುದು. ಹಲವರ ಪ್ರತಿನಿಧಿಯಾಗಿ ಒಬ್ಬ ಕಥೆ ಹೇಳುತ್ತಾನೆ. ಪ್ರೇಕ್ಷಕರಾಗಿ ಜನ ಅದಕ್ಕೆ 'ಹೂಂ' ಗುಡುತ್ತಾರೆ. ಜನಪದ ಕಥೆ ಏಕಮುಖ ಸೃಷ್ಟಿಗೆ ಬದ್ಧವಾದುದಲ್ಲ. ವಕ್ತೃ ಮತ್ತು ಪ್ರೇಕ್ಷಕರ ಮಧ್ಯೆ ನಡೆಯುವ ಒಂದು ಸಾಮಾಜಿಕ ಸಾಂಪ್ರದಾಯಿಕ ಕಲೆಗಾರಿಕೆ.

ಕನ್ನಡ ಜನಪದ ಕಥೆಗಳು, ಭಾರತದ ಜನಪದ ಕಥೆಗಳು ಮತ್ತು ಜಗತ್ತಿನ ಜನಪದ ಕಥೆಗಳಿಂದ ಹೊರತಾದುದೇನೂ ಅಲ್ಲ. ಆದರೆ ಕನ್ನಡ ಜನಪದ ಕಥೆಗಳು ಪ್ರಾದೇಶಿಕ ವೈಷಿಷ್ಟ್ಯತೆಯಿಂದ ಹಾಗೂ ಭಾಷಿಕ ವೈಶಿಷ್ಟ್ಯದಿಂದ ಕೂಡಿರುವುದು ಇಲ್ಲಿ ವಿಶಿಷ್ಟವಾಗಿದೆ. ಈ ಕಥಾ ಸಂಕಲನದ ಜನಪದ ಕಥೆಗಳು ತಲೆಮಾರಿನಿಂದ ತಲೆಮಾರಿಗೆ, ಬಾಯಿಂದ ಬಾಯಿಗೆ ಕಂಠಸ್ಥ ರೂಪದಲ್ಲಿ ಬದುಕುಳಿದು ಬಂದಿರುತ್ತವೆ. ಈ ಕಥೆಗಳಲ್ಲಿ ವಸ್ತುವಿನ ಜಟಿಲತೆಯಿಲ್ಲ. ಪಾತ್ರಗಳ ತೊಡಕಿಲ್ಲ. ಕಥೆ ತನ್ನ ಚಾಕಚಕ್ಯತೆ ಮತ್ತು ಕಥೆ ಹೇಳುವವನ ಶೈಲಿಯಿಂದ ಅದು ಕೇಳುಗರ ಮನಸೂರೆಗೊಳಿಸಬಹುದಾಗಿದೆ. ಈ ಕಥೆಗಳನ್ನು ಕೇಳಿದವರು ವಿದ್ಯೆ ದೊರಕಿಸಿಕೊಳ್ಳಬಹುದಾಗಿದೆ. ಲೋಕಾನುಭವವನ್ನು ಪಡೆದು ಮನರಂಜನೆಯೊಂದಿಗೆ ನೀತಿ ಬೋಧನೆಯನ್ನು ಪಡೆಯಬಹುದಾಗಿದೆ. ಬಾಳಿನ ಬವಣೆ, ಬದುಕಿನ ಕಷ್ಟಗಳನ್ನು, ಮಾನಸಿಕ ಯಾತನೆಗಳನ್ನು ಕಳೆದುಕೊಂಡು ಉಲ್ಲಾಸಿತರಾಗಲು ಈ ಕಥೆಗಳು ಜನಪದರ ಬದುಕಿನಲ್ಲಿ ಅತ್ಯವಶ್ಯಕವಾಗಿವೆ.

೩.೧. ಜನಪದ ಕಥೆಗಳ ವೈಶಿಷ್ಟ್ಯ

ಜಗತ್ತಿನ ಎಲ್ಲಾ ಜನಪದ ಕಥೆಗಳು ತಮ್ಮದೇ ಆದ ವೈಶಿಷ್ಟ್ಯತೆಗಳನ್ನು ಹೊಂದಿರುವಂತೆ ಜೀ.ಶಂ.ಪ. ಅವರ ಕನ್ನಡ ಜನಪದ ಕಥೆಗಳು ಹಲವು ವಿಶಿಷ್ಟತೆಗಳಿಂದ ಕೂಡಿದವುಗಳಾಗಿವೆ. ಮೈಸೂರು ಭಾಗದ ಸುತ್ತ ಮುತ್ತಲಿನ ಬಯಲು ಸೀಮೆಯ ಕೆಲವು ನಿರ್ದಿಷ್ಟ ನೆಲೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕಥಾ ಸಂಕಲನದ ಸಂಗ್ರಹಕಾರ್ಯವನ್ನು ನಡೆಸಲಾಗಿದೆ. ವಿಶ್ವ ಜನಪದ ಕಥೆಗಳ ವರ್ಗೀಕರಣದ ಎಲ್ಲ ಪ್ರಮುಖ ಭಾಗಗಳಿಗೂ, ಕರ್ನಾಟಕದ ಕಥೆಗಳಲ್ಲಿಯೂ ಕೂಡ ಭಿನ್ನ ರೂಪಗಳು ಲಭ್ಯವಾಗುತ್ತವೆ ಎಂಬುದನ್ನು ಈ ಕಥೆಗಳ ವೈಶಿಷ್ಟ್ಯದಿಂದ ಅರಿಯಬಹುದಾಗಿದೆ.

ಪ್ರಸ್ತುತ ಸಂಕಲನದ ಕಥೆಗಳನ್ನು ದಕ್ಷಿಣ ಕರ್ನಾಟಕದ (ಹಳೆಯ ಮೈಸೂರು ಭಾಗ) ಬಯಲುನಾಡಿನ ವಿವಿಧ ಭಾಗಗಳಲ್ಲಿ ಸಂಗ್ರಹಿಸಲಾಗಿದೆ. ಕಳೆದ ಎಪ್ಪತ್ತು ಎಂಬತ್ತರ ದಶಕದ ಸಂಗ್ರಹದಿಂದ ಆಯ್ದ ಕಥೆಗಳಿವಾದುದರಿಂದ ಕಾಲದೃಷ್ಟಿಯಿಂದಲೂ ಸಾಕಷ್ಟು ಅಂತರವನ್ನು ಇಲ್ಲಿ ಗುರುತಿಸಬಹುದಾಗಿದೆ. ಕಥೆಗಾರರ ವಯಸ್ಸು, ಮತ, ಅನುಭವ, ವಿದ್ಯಾಮಟ್ಟ, ಪರಿಸರಗಳಲ್ಲೂ ಸಾಕಷ್ಟು ವ್ಯತ್ಯಾಸವನ್ನು ಇಲ್ಲಿ ಕಾಣಬಹುದು. ಜೀ.ಶಂ.ಪ. ಅವರು ಈ ಕಥೆಗಳ ಸಂಗ್ರಹಣೆಯಲ್ಲಿ ಸ್ವತಃ ಕ್ಷೇತ್ರಕಾರ್ಯಮಾಡಿ ಈ ಕಥೆಗಳನ್ನು ಸಂಗ್ರಹಿಸಿರುವುದು ಈ ಕಥಾಸಂಕಲನದ ಒಂದು ಬಹುಮುಖ್ಯವಾದ ವೈಶಿಷ್ಟ್ಯವಾಗಿದೆ. ಪ್ರಾದೇಶಿಕ ರೂಪ, ಭಾಷೆ, ಆಚರಣೆಗಳು, ನಡೆ, ನುಡಿಗೆ ಸಂಬಂಧಿಸಿದಂತೆ ವಿಶೇಷವಾಗಿ ಅಭಿವ್ಯಕ್ತಿಸುವುದು ಈ ಕಥೆಗಳ ವೈಶಿಷ್ಟ್ಯವಾಗಿದೆ.

ಕನ್ನಡ ಜನಪದ ಕಥೆಗಳು ಆಯಾ ಪ್ರದೇಶದ ಅಂದಂದಿನ ಸಂಸ್ಕೃತಿಯ ಪ್ರತೀಕಗಳಾಗಿವೆ. ಸಮಾಜದ ಎಲ್ಲ ವರ್ಗದ ಜನರನ್ನು ಈ ಕಥೆಗಳಲ್ಲಿ ಪಾತ್ರಗಳನ್ನಾಗಿ ಚಿತ್ರಿಸಿದ್ದಾರೆ. ಅತ್ತೆ-ಸೊಸೆ, ಗಂಡ-ಹೆಂಡತಿ, ಅತ್ತೆ-ಅಳಿಯ, ಗುರು-ಶಿಷ್ಯ, ಅಣ್ಣ-ತಮ್ಮ, ಅತ್ತಿಗೆ-ನಾದಿನಿ, ಗೆಳೆಯ-ಗೆಳತಿ, ಒಡೆಯ-ಆಳು, ಸೈನಿಕರು, ವ್ಯಾಪಾರಿಗಳು ಮುಂತಾದ ಸಾಮಾಜಿಕ ಪಾತ್ರಗಳು ಈ ಕಥೆಗಳಲ್ಲಿ ಚಿತ್ರಣಗೊಂಡಿವೆ. ಅದೇ ರೀತಿ ರಾಕ್ಷಸ, ದೆವ್ವ, ಸಾಧು, ಸಂನ್ಯಾಸಿ, ರಾಜ-ಮಂತ್ರಿ ಹೀಗೆ ಮೊದಲಾದ ಪಾತ್ರಗಳನ್ನು ಇಲ್ಲಿ ಗುರುತಿಸಿದ್ದೇವೆ.

ದೈನಂದಿನ ಜೀವನದಲ್ಲಿ ಮಾನವನು ಅನುಭವಿಸುತ್ತಾ ಬಂದಿರುವ ಸುಖ-ದುಃಖ, ಅಳು-ನಗು, ಕಷ್ಟ, ತಾಪತ್ರೆ, ಅಸಹನೆ, ಪ್ರೀತಿ, ವಾತ್ಸಲ್ಯ, ಕೋಪ, ದ್ವೇಷ, ಅಪಾಯ ಇವುಗಳಿಂದ ಪಾರಾಗುವ ಬಗೆಯನ್ನು ಈ ಕಥೆಗಳಲ್ಲಿ ಅಭಿವ್ಯಕ್ತಗೊಂಡಿದೆ. ಇದರಿಂದ ಹಾಸ್ಯ, ಶೋಕ, ಭಯ, ಅದ್ಭುತ, ವೀರ, ಶೃಂಗಾರರಸಗಳು ಈ ಕಥೆಗಳಲ್ಲಿ ಹಾಸುಹೊಕ್ಕಾಗಿರುತ್ತವೆ.

ಕನ್ನಡ ಜನಪದ ಕಥೆಗಳು ಪ್ರಾರಂಭವಾಗುವುದೇ ಒಂದು ಕುತೂಹಲಕಾರಿಯಾಗಿದೆ. ಒಂದೂರಿನಲ್ಲಿ ಒಬ್ಬ ದೊರೆ ಇದ್ದ. ಒಂದು ಪಟ್ಟಣದಲ್ಲಿ ಒಬ್ಬ ದೊರೆ. ಒಂದೂರಲ್ಲಿ ಒಬ್ಬ ರಾಜ, ಒಂದೂರಲ್ಲಿ ಒಬ್ಬ ದೊರೆ ಅವನಿಗೆ ಏಳು ಜನ ಹೆಣ್ಣು ಮಕ್ಕಳು, ಒಬ್ಬ ರಾಜನಿಗೆ ಏಳು ಜನ ಗಂಡು ಮಕ್ಕಳು, ಒಬ್ಬಳೇ ಹೆಣ್ಣು ಮಗಳಿದ್ದಳು. ಹೀಗೆ ಪ್ರಾರಂಭವಾಗುವ ಕಥೆಗಳಲ್ಲಿ ಇಂಥಹ ಹಲವಾರು ವಾಕ್ಯಗಳನ್ನು ಕಥೆ

ಹೇಳುವವರು ಸಾಮಾನ್ಯವಾಗಿ ಬಳಸುವುದು ವಾಡಿಕೆ. ರಾಜ ಮಹಾರಾಜರ ಕತೆಗಳು ಒಂದಿನ ಕಾಲದ ರಾಜರ ಪ್ರಭಾವವನ್ನು ಬಿಂಬಿಸುತ್ತವೆ. ಜನಪದ ಕಥೆಗಳು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದವು ಎಂಬುದಕ್ಕೆ ಇವು ನಿದರ್ಶನವಾಗಿದೆ.

ಒಂದೂರಿನಲ್ಲಿ ಚೆನ್ನಿಗರಾಯ ಎಂಬ ಒಬ್ಬ ರಾಜಕುಮಾರ ಇದ್ದ ಹೇಮಾವತಿ ಅನ್ನೋದು ಒಂದು ಪಟ್ಟಣ, ಹೇಮಶೇಖರ ಅನ್ನೋನು ದೊರೆ. ವೀರಾವತಿ ಎನ್ನುವುದು ಒಂದು ಪಟ್ಟಣ. ಒಂದು ಪಟ್ಟಣ ಆ ಪಟ್ಟಣಕ್ಕೆ ಒಬ್ಬ ದೊರೆ. ಚಕ್ರಾವತಿ ಎನ್ನುವ ಪಟ್ಟಣದಲ್ಲಿ ಚಕ್ರಭೂತಿ ಎನ್ನುವ ದೊರೆ ಇದ್ದ. ಹೀಗೆ ಕಥೆ ಪ್ರಾರಂಭವಾಗುತ್ತಿವೆ. ಸಾಮಾನ್ಯವಾಗಿ ಜನಪದ ಕಥೆಗಳಲ್ಲಿ ಊರು ವ್ಯಕ್ತಿಗಳಿಗೆ ಹೆಸರಿರುವುದಿಲ್ಲ. ಇದ್ದರೂ ಅವು ಕಾಲ್ಪನಿಕವಾಗಿರುತ್ತವೆ. ಸಾಮಾನ್ಯವಾಗಿ ಕಥೆ ಹೇಳುವವರು ಪುರಾಣ ಮತ್ತು ಮಹಾಕಾವ್ಯಗಳನ್ನು ಓದಿಕೊಂಡವರು ಇಂತಹ ಹೆಸರುಗಳನ್ನು ಬಳಸುತ್ತಾರೆ.

ಪ್ರಸ್ತುತ ಕಥಾಸಂಕಲನದಲ್ಲಿ ಶ್ರೀಸಾಮಾನ್ಯರು ಸಹ ಜನಪದ ಕಥೆಯಲ್ಲಿ ಕಥಾನಾಯಕರಾಗಿರುವುದು ಮತ್ತೊಂದು ವೈಶಿಷ್ಟ್ಯ. ಒಂದೂರಿನಲ್ಲಿ ಒಬ್ಬ ರೈತ ಇದ್ದ. ಒಂದೂರಿನಲ್ಲಿ ಒಬ್ಬ ಬಡವನ ಮಗ ಇದ್ದ. ಒಂದೂರಲ್ಲಿ ತಿಮ್ಮ-ಬೊಮ್ಮ ಎಂಬ ಇಬ್ಬರು ಹುಡುಗರು ಇದ್ದರು, ಒಂದೂರು ಅಲ್ಲೊಬ್ಬ ಬಡವ ಆಬಡವನಿಗೆ ಒಬ್ಬನೇ ಮಗ. ಒಂದೂರಲಿ ಒಬ್ಬ ತಬ್ಬಲಿ ಹುಡುಗ ಇದ್ದ. ಒಂದೂರಲ್ಲಿ ಒಬ್ಬ ನೇಯ್ಗೆಯವನಿದ್ದ, ಒಂದೂರಲಿ ಒಬ್ಬ ಮುದುಕಿ ಇದ್ದಳು. ಕೊಂಗರ ಹಳ್ಳಿದಾಸಯ್ಯ, ಒಬ್ಬ ಕುಂಬಾರನಿದ್ದ. ಒಬ್ಬ ಗೌಡನಿದ್ದ, ಹೀಗೆ ರಾಜ-ಮಹಾರಾಜರಷ್ಟೇ ಸ್ಥಾನಮಾನವನ್ನು ಶ್ರೀಸಾಮಾನ್ಯರಿಗೂ ದೊರಕುವುದು ಈ ಕಥಾ ಸಂಕಲನದ ವಿಶೇಷವಾಗಿದೆ. ಹೀಗೆ ಶ್ರೀಸಾಮಾನ್ಯರು ತಮ್ಮ ದಿನ ನಿತ್ಯದ ಹಲವಾರು ಜೀವಂತ ಸಮಸ್ಯೆಗಳನ್ನು ಎತ್ತಿಕೊಂಡು ಬದುಕಿನ ರಹಸ್ಯವನ್ನು ಈ ಕಥೆಗಳ ಮೂಲಕ ಹರಿಯಬಿಟ್ಟಿದ್ದಾರೆ. ಇವು ಮನರಂಜನೆಯ ಜೊತೆಗೆ ನೀತಿಬೋಧನೆಯನ್ನು ಸಾರುತ್ತವೆ.

ಸಾಮಾಜಿಕ ಕಳಕಳಿ ಹಾಗೂ ತುಡಿತವನ್ನು ಅನಾವರಣಗೊಳಿಸುವುದು ಜಾನಪದ ಕಥೆಗಳ ವಿಶೇಷ. ಪ್ರಸ್ತುತ ಅಧ್ಯಯನದಲ್ಲಿನ ಕಥೆಗಳನ್ನು ಜಗತ್ತಿನ ಜನಪದ ಕತೆಗಳ ಜೊತೆ ತಾಳೆ ಹಿಡಿದು ನೋಡಿದಾಗ ಅವುಗಳಲ್ಲಿ ಕಾಣುವ ಸಾದೃಶ್ಯಗಳು ಓದುಗರನ್ನು ಸಂಶೋಧಕರನ್ನು ಚಕಿತಗೊಳಿಸುತ್ತವೆ. ಬೇರೆ ಬೇರೆ ಭೌಗೋಳಿಕ ಪರಿಸರದಲ್ಲಿ ಭಿನ್ನ ಭಿನ್ನ ನಾಗರೀಕತೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಕಥೆಗಳಲ್ಲಿ ಪ್ರತಿಬಿಂಬಿತವಾಗುವ ಮನೋಧರ್ಮ ಒಂದೇ ಎಂಬುದು ಸ್ಪಷ್ಟವಾಗುತ್ತದೆ. ಒಂದೇ ಬಗೆಯ ಕಥಾವರ್ಗಗಳು ಮತ್ತು ಒಂದೇ ತೆರನಾದ ಆಶಯಗಳು ಆ ಕಥೆಗಳಲ್ಲಿ ಸಮಾವೇಶಗೊಂಡಿರುವುದು ಸೋಜಿಗದ ಸಂಗತಿಯಾಗಿದೆ. ಅವುಗಳ ವ್ಯವಸ್ಥಿತವಾದ ಅಧ್ಯಯನದಿಂದ ಮಾನವನ ಮೂಲ ಸ್ವರೂಪವನ್ನು ತಿಳಿಯಬಹುದು.

ಈ ಸಂಕಲನದ ಹೆಚ್ಚು ಕಥೆಗಳನ್ನು ಹೇಳಿದವರು ಮಧುಗಿರಿಯ ಕಡೆಯ ತಿಮ್ಮಕ್ಕನವರು. ಕಥೆ ಹೇಳುವುದರಲ್ಲಿ ಉತ್ತಮ ಸಿದ್ದಿಯನ್ನು ಪಡೆದ ಇವರು ಮೂವತ್ತಕ್ಕೂ ಹೆಚ್ಚು ಕಥೆಗಳನ್ನು ಹೇಳಿದ್ದಾರೆ.

ಕನ್ನಡ ಜನಪದ ಕಥೆಗಳ ಶ್ರೇಷ್ಠ ಮಾದರಿಗಳನ್ನು ದೊರಕಿಸಿಕೊಟ್ಟ ಈ ಪ್ರತಿಭಾನ್ವಿತ ಕಥೆಗಾರ್ತಿ ನಿರೂಪಣೆಯಲ್ಲಿ ತೋರುವ ಅಚ್ಚುಕಟ್ಟು, ಕ್ರಮಬದ್ಧತೆ, ನಾಟಕೀಯತೆಗಳು ಎಂಥವರನ್ನೂ ಮುಗ್ಧಗೊಳಿಸುತ್ತವೆ. 'ಹೂ ಕೊಟ್ಟ ಚದುರೆ' ಈ ಕತೆಗಾರ್ತಿಯ ಸ್ಮರಣಶಕ್ತಿಗೆ, ಕಲ್ಪನಾ ರಮ್ಯತೆಗೆ, ನಿರೂಪಣಾ ವೈಖರಿಗೆ ಒಂದು ಅತ್ಯುತ್ತಮ ನಿದರ್ಶನ. ಇಲ್ಲಿ ರಾಜಕುಮಾರ ಮತ್ತು ಮಂತ್ರಿಕುಮಾರರು ತಮ್ಮ ಪತ್ನಿಯರನ್ನು ಹುಡುಕುವಲ್ಲಿ ಸಾಹಸಯಾತ್ರೆ ಕೈಗೊಳ್ಳುವುದು ಈ ಕಥೆಯ ಮುಖ್ಯ ವಿಷಯವಾಗಿದೆ. ಇಲ್ಲಿ ರಾಜಕುಮಾರ ಇದ್ದರೂ ಮಂತ್ರಿಕುಮಾರನೇ ಈ ಕಥೆಯ ನಾಯಕನಾಗಿರುವುದು ತಿಳಿಯುತ್ತದೆ. ಮಂತ್ರಿಕುಮಾರ, ರಾಜಕುಮಾರನ ಪ್ರಿಯತಮೆಯನ್ನು ಹಲವು ಸಾಹಸಯಾತ್ರೆಗಳನ್ನು ಮಾಡಿ, ಇಂದ್ರನೊಡ್ಡಿದ ಹಲವು ಪವಾಡಗಳನ್ನು ಗೆದ್ದು ನವರಂಗಿ ಹೂ ಎಂಬ ನಾಗಕನ್ನೆಯನ್ನು ಕರೆದು ತರುತ್ತಾನೆ.

ಇಲ್ಲಿ ದೇವಮಾನವರು ಮತ್ತು ರಾಕ್ಷಸರು ಹಾಗು ಮಾನವರ ನಡುವೆ ಯಾವುದೇ ಅಂತರವಿರದೆ ನೇರ ಸಂಬಂಧಗಳನ್ನು ಕಟ್ಟುಕೊಟ್ಟಿದೆ. ಆದರೆ ಶಿಷ್ಟ ಕತೆಗಳಲ್ಲಿ ಇವರ ನಡುವೆ ಅಂತರ ವಿರುವುದನ್ನು ಕಾಣುತ್ತೇವೆ. ಇಲ್ಲಿ ದುಷ್ಟಶಕ್ತಿಗಳು ಎಂದು ಕರೆಯಲಾಗುವ ರಾಕ್ಷಸರು ಮಂತ್ರಿಕುಮಾರನಿಗೆ ಸಹಾಯಮಾಡಿ, ದುಷ್ಟ ಶಕ್ತಿಗಳಲ್ಲಿಯು ಒಳ್ಳೆಯ ಮಾನವೀಯತೆ ಇರುತ್ತದೆ. ಹುಟ್ಟಿನಿಂದ ಯಾರೂ ದುಷ್ಟರಲ್ಲ ಎಂದು ಈ ಕತೆಯಲ್ಲಿ ತಿಳಿಯಬಹುದಾಗಿದೆ.

ಪ್ರಸ್ತುತ ಅಧ್ಯಯನದ ಕಥೆಗಳಲ್ಲಿ ಶುದ್ಧ ಪ್ರಾಣಿ ಕಥೆಗಳು ತುಂಬ ವಿರಳವೆಂದೇ ಹೇಳಬೇಕು. ಮಾನವ ಪಾತ್ರಗಳು ಪ್ರಾಣಿಪಾತ್ರಗಳು ಬೆರೆತು ಬರುವುದೇ ಬಹುಪಾಲು ಕಥೆಗಳ ವೈಶಿಷ್ಟ್ಯ. ಆದರೂ ಪ್ರಾಣಿಪಾತ್ರಗಳ ಪ್ರಾಮುಖ್ಯತೆಯನ್ನು ಗಮನಿಸಿ ಪ್ರಾಣಿ ಕಥೆಗಳೆಂಬ ಪ್ರತ್ಯೇಕ ವಿಭಾಗವನ್ನು ಮಾಡಿಕೊಳ್ಳಲಾಗಿದೆ. ಪ್ರಾಣಿಗಳಲ್ಲಿ ನರಿ, ಹುಲಿ, ಗಿಣಿ, ಕೋತಿ, ಕಾಗೆ, ಗೂಬೆ ಮುಂತಾದವುಗಳ ಪಾತ್ರಗಳನ್ನು ಕಾಣುತ್ತೇವೆ.

ಕನ್ನಡ ಕಥೆಗಳಲ್ಲಿ ತಂತ್ರಿ (Trickster) ಪಟ್ಟ ನರಿಗೆ ಮೀಸಲಾಗಿರುತ್ತದೆ. 'ಕುಂಟನರಿ', 'ಗುಳ್ಳೆನರಿ' ಕಥೆಗಳನ್ನು ಅಧ್ಯಯನ ಮಾಡಿದಾಗ ನರಿಯ ತಂತ್ರ-ಕುತಂತ್ರಗಳೇ ಆ ಕಥೆಗಳ ಜೀವಾಳವಾಗಿದೆ. ಇದನ್ನು 'ಕುಂಟನರಿ'ಯ ಕತೆಯೊಳಗೆ ನೋಡಬಹುದು. ನರಿಯು ಕುಂಟಾಗಿದ್ದರು ಕೂಡ ತನ್ನ ಬುದ್ಧಿ ಶಕ್ತಿಯಿಂದ ತನ್ನ ಯುಕ್ತಿಯಿಂದ ತನಗಿಂತಲೂ ಮಿಗಿಲಾದ ದೈತ್ಯಪ್ರಾಣಿಗಳಾದ ಕಿರುಬ, ಹುಲಿಗಳನ್ನು ಎದುರಿಸುವ ತಂತ್ರಗಾರಿಕೆ ಕುಂಟನರಿಯಲ್ಲಿ ಪ್ರತಿಬಿಂಬಿತವಾಗಿದೆ. ಈ ಕಥೆಯಲ್ಲಿ ನರಿಯಿಂದ ನರಿಯೇ ಮೋಸಗೊಳಪಟ್ಟಿರುವುದು ಶಕ್ತಿಗಿಂತಲು ಯುಕ್ತಿ ಮೇಲು ಎಂಬುದು ಗೋಚರವಾಗುತ್ತದೆ. ಕುಂಟನರಿಗೆ ನೇರಳೆಹಣ್ಣುಗಳನ್ನು ಕೊಡದೆ, ಚೆನ್ನಾಗಿರುವುದನ್ನು ತಾನು ತಿಂದು ಉಳಿದ ಕಾಯಿಗಳನ್ನು ಕುಂಟನರಿಗೆ ಕೊಟ್ಟ, ಒಳ್ಳೆಯ ನರಿ ತಾನು ಮಾಡಿದ ಮೋಸಕ್ಕೆ ಪ್ರತಿಯಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡಿತು. ಇದು ಇಂದಿಗೂ ಕೂಡ ಸಮಾಜದಲ್ಲಿ ನಡೆಯುವ ಒಂದು ಘಟನೆಯನ್ನು ಪ್ರತಿಬಿಂಬಿಸುತ್ತದೆ.

ನಾನು ಕಾಡೆಮ್ಮೆ ಕೋಡು ಮುರಿಯೋನು

ಮಾರಾಯನ ದಂಡ ಮುಂದಕ್ಕೆ ಬರೋದ

ಹಿಂದಕ್ಕೆ ಮಾಡೋನು

ಹುಲಿ ಉಗುರು ಕೀಳೋನು !

ಕಿರುಬನ ಕಣ್ಣು ಕೀಳೋನು

ಇಲ್ಲಿ ಭಾಷಾ ವೈವಿಧ್ಯತೆಯ ಜೊತೆಗೆ ಕಥೆ ಹೇಳುವ ದಾಟಿ ಮುಖ್ಯವಾಗುತ್ತದೆ. ಇದು ಕಥೆ ಹೇಳುವ ಕಥೆಗಾರನ ನೈಪುಣ್ಯತೆ, ಕಲೆಗಾರಿಕೆಯ ಮೇಲೆ ಸಾಧ್ಯವಾಗುತ್ತದೆ. ನಿಧಾನವಾಗಿ ರಾಜಗಂಭೀರ ಧ್ವನಿಯಲ್ಲಿ ಶತ್ರುಗಳು ತನ್ನ ಆಸ್ಥಾನಕ್ಕೆ ಬಂದಾಗ ಪೂರ್ವದಿಂದ ಹೇಳುವ ದಾಟಿಯಲ್ಲಿರುತ್ತದೆ. ಇಲ್ಲಿ ಧ್ವನಿಯ ಏರಿಳಿತ ಮುಖ್ಯವಾಗುತ್ತದೆ.

ಪ್ರಾಣಿಕತೆಗಳಲ್ಲಿ 'ಗುಳ್ಳೆನರಿ' ಕಥೆಯ ತಂತ್ರಗಾರಿಕೆ ಮತ್ತು ನಯವಂಚಕತನ ಎಲ್ಲರನ್ನೂ ಚಕಿತಗೊಳಿಸದೆ ಇರಲಾರದು. ಗುಳ್ಳೆಯನರಿ ತಾನು ಸಿಲುಕಿಕೊಂಡ ಕಷ್ಟಗಳಲ್ಲಿ ಪಾರಾಗಲು ಪ್ರಾಣಾಪಾಯದಿಂದ ತಪ್ಪಿಸಿಕೊಳ್ಳಲು ಮಾಡುವ ಉಪಾಯ ಎಲ್ಲರನ್ನು ಕುತೂಹಲಚಕಿತರನ್ನಾಗಿಸಿ ನಗೆಗೀಡುಮಾಡಿಸುತ್ತದೆ. ಗುಳ್ಳೆನರಿಯು ನಳ್ಳಿಯ ಮೊಟ್ಟೆಗಳನ್ನು ತಿಂದು ನಳ್ಳಿಕೈಯಲ್ಲಿ ಸಿಕ್ಕಿಕೊಂಡಾಗ, "ಎಲಾ ನಳ್ಳಿ ನೀನೊಂದು ಪೆದ್ದು! ಅಲ್ಲಾ ನನ್ನ ಕಾಲು ಹಿಡಿಯೋದ್ಬಿಟ್ಟು, ನನ್ನ ಕೋಲು ಹಿಡಿದಿದ್ದೀಯಾ!" ಎಂದಾಗ ನಳ್ಳಿ ಕಾಲನ್ನು ಬಿಟ್ಟು ಪಕ್ಕದಲ್ಲಿದ್ದ ಬೇರನ್ನು ಹಿಡಿಯುವುದು. ನರಿ 'ಗೆದ್ದೆ' ಎಂದು ನುಣುಚಿಕೊಂಡು ಓಡುವುದು. ಬೇಟೆಗಾರನ ಕೈಯಲ್ಲಿ ಸಿಕ್ಕಿಕೊಂಡಾಗ "ಅಯ್ಯೋ ಪೆದ್ದ ನೀನೆಂಥ ಬೆಪ್ಪ! ನನ್ನ ಬಾಲ ಹಿಡಿಯೋದ್‌ಬಿಟ್ಟು ಈ ಹೊಂಗೆ ಮರದ ಬೇರು ಹಿಡಿದ್ದೀಯಲ್ಲ" ಎಂದು ಬೇಟೆಗಾರನಿಂದ 'ಪಾರಾದೆ' ಎಂದು ಪೇರಿ ಕೀಳುವುದು.

ಬಾಳೆ ತೋಟ ಕಾಯುವ ಹುಡುಗನನ್ನು ಹೆದರಿಸಿ ಅವನಿಂದ ಬಾಳೆಹಣ್ಣು ತಿನ್ನುವುದು, ಆ ಹುಡುಗನ ತಂದೆಯಿಂದ ಹಾರೆಯಿಂದ ತಿವಿಸಿಕೊಂಡು 'ಕುಂಯ್ಯೋ ಮರ್ರೋ' ಎಂದು ಓಡಿಹೋಗುವುದು. ಇಲ್ಲಿ ಗುಳ್ಳೆನರಿಯು ಕೇವಲ ಪ್ರಾಣಿಗಳಿಗೆ ಮೋಸ ಮಾಡುವುದಿಲ್ಲ. ಮನುಷ್ಯರು ಕೂಡ ಇದರ ತಂತ್ರಕ್ಕೆ ಮೋಸ ಹೋದವರೇ ಆಗಿದ್ದಾರೆ. ಇಲ್ಲಿ ಪ್ರಾಣಿ ಮತ್ತು ಮನುಷ್ಯರ ಸಂಬಂಧಗಳನ್ನು ತಿಳಿಸುವುದು ಈ ಪ್ರಾಣಿಕತೆಗಳ ವೈಶಿಷ್ಟ್ಯವಾಗಿದೆ. ಸಾಮಾನ್ಯವಾಗಿ ಮನುಷ್ಯರು ತಮ್ಮ ದಿನನಿತ್ಯದ ಜೀವನದಲ್ಲಿ ಅತಿಯಾಗಿ ಬುದ್ಧಿವಂತಿಕೆಯನ್ನು ತೋರಿಸುವ ಮನುಷ್ಯರಿಗೆ ಗುಳ್ಳೆನರಿ ಎಂದೇ ಸಂಬೋಧಿಸಿ ಕರೆಯುವುದು ವಾಡಿಕೆಯಾಗಿರುವ ಈ ಕಥೆಗಳಲ್ಲಿನ ವೈಶಿಷ್ಟ್ಯವಾಗಿದೆ.

ಪಕ್ಷಿ ವಿವಿಷಯಕ್ಕೆ ಸಂಬಂಧಿಸಿದ ಕಥೆಗಳಲ್ಲಿ 'ಕಾಗಕ್ಕ ಗುಬ್ಬಕ್ಕ'ನ ಕಥೆ ಹೆಚ್ಚು ಜನಪ್ರಿಯವಾದುದು. ಮಾನವ ಪಾತ್ರಗಳಾವುವು ಈ ಕಥೆಯಲ್ಲಿ ಸುಳಿಯದಿರುವುದು ಗಮನಾರ್ಹ ಅಂಶವಾಗಿದೆ. ಕಾಗಕ್ಕ ಮತ್ತು

ಗುಬ್ಬಕ್ಕ ಇಬ್ಬರು ಸ್ನೇಹಿತರಾಗಿದ್ದು ಇವು ಜೊತೆಯಲ್ಲೇ ಎಲ್ಲಾ ಕೆಲಸಗಳಿಗೆ ಹೋಗುವುದು, ಬರುವುದು ಸಂತೆಗೆ ಹೋಗುವುದು ಮತ್ತು ಮನುಷ್ಯರಂತೆ ಇವುಗಳಿಗೆ ಸಂಸಾರದ ಹೊಣೆಗಾರಿಕೆ ಇದೆ. ಮನುಷ್ಯರಂತೆ ಸಂಭಾಷಣೆ, ಮಾತಿನ ವೈಖರಿ ಈ ಕಥೆಯಲ್ಲಿನ ವೈಶಿಷ್ಟ್ಯವಾಗಿದೆ. ಕಾಗಕ್ಕನ ತೊಪ್ಪೆಯ ಮನೆ ಮಳೆಯಲ್ಲಿ ಕೊಚ್ಚಿಹೋಗಿ ಗುಬ್ಬಕ್ಕನ ಮನೆಯಲ್ಲಿ ಆಶ್ರಯ ಪಡೆದು ಅಲ್ಲಿದ್ದ ಕಡಲೆಯನ್ನೆಲ್ಲಾ ತಿಂದು ಅಲ್ಲೇ ಉಬ್ಬಿ ಹೋಗುವುದು ಕಥೆಯನ್ನು ಕೇಳುವವರಲ್ಲಿ ನಗೆಯನ್ನು ತರುತ್ತದೆ. ಆದರೂ ಪಕ್ಷಿಗಳಲ್ಲಿನ ಸಂಬಂಧ ಸಹಾಯ ಸಹಕಾರಗಳನ್ನು ಮನುಷ್ಯರನ್ನು ನಾಚಿಸುವಂತೆ ಮಾಡುತ್ತದೆ. ಈ ಮೂಲಕ ಮಾನವರಿಗೆ ನೀತಿಗಳನ್ನು ಹೇಳುವ ಪರಿಪಾಠ ಈ ಜನಪದ ಕಥೆಗಳಲ್ಲಿನ ವೈಶಿಷ್ಟ್ಯವಾಗಿದೆ.

ಜನಪದ ಸಂಸ್ಕೃತಿಯನ್ನು ತಿಳಿಯಲು ಭಾಷೆ, ಸಂಸ್ಕೃತಿ ಮತ್ತು ಭೌಗೋಳಿಕ ವೈಶಿಷ್ಟ್ಯಗಳನ್ನು ಗ್ರಹಿಸುವುದು ಅಗತ್ಯ. ಸಂಸ್ಕೃತಿಯ ಮತ್ತು ಭಾಷಾವಿಜ್ಞಾನಿಗಳು ಈ ದೃಷ್ಟಿಯಿಂದಲೆ Cultural area ಮತ್ತು Lingvistic area ದಂತಹ ಅನೇಕ ಪರಿಕಲ್ಪನೆಗಳನ್ನು ಮುಂದಿಟ್ಟಿದ್ದಾರೆ. ಜನಪದ ಕಥೆಗಳ ಅರಿವಿಗೂ ಈ ಅಂಶಗಳು ನೆರವಾಗುತ್ತವೆ. ವಿದೇಶಿ ಕಥೆಗಳ ರಚನೆ ಅರ್ಥ ಮತ್ತು ಪ್ರಾಯೋಗಿಕತೆಯ ಹಿನ್ನೆಲೆಯೂ ಭಾರತದ ಕನ್ನಡ ಜನಪದ ಕಥೆಗಳ ರಚನೆ, ಅರ್ಥ ಮತ್ತು ಪ್ರಾಯೋಗಿಕತೆಯೂ ಬೇರೆ ಬೇರೆಯಾಗಿರಲು ಸಾಧ್ಯ. ಅಮೇರಿಕನ್ ಇಂಡಿಯನ್ನರ ಜನಪದ ಕಥೆಗಳ ಬಗ್ಗೆ ಅಧ್ಯಯನ ನಡೆಸಿರುವ ಸ್ಮಿತ್‌ಥಾಮ್ಸನ್ ಮತ್ತು ಅಲನ್‌ಡೆಂಡಸ್ ಅವರ ಬರವಣಿಗೆಗಳನ್ನು, ಕನ್ನಡ ಜನಪದ ಕಥೆಗಳ ಬಗ್ಗೆ ನಡೆದಿರುವ ಅಧ್ಯಯನ ವಿವರಗಳನ್ನು ಗಮಿನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ.

ಕರ್ನಾಟಕದ ಪ್ರತಿಯೊಂದು ಜಿಲ್ಲೆಯೂ ಕೂಡ ಆಡಳಿತಾತ್ಮಕ ಘಟಕಗಳಾಗಿದ್ದು ಇವುಗಳೊಳಗೆ ಭೌಗೋಳಿಕ ವ್ಯತ್ಯಾಸಗಳು ಮತ್ತು ಭಾಷಿಕ ವ್ಯತ್ಯಾಸಗಳು ಕಾಣಬಹುದಾಗಿದೆ. ಹಾಸನ ಮತ್ತು ಶಿವಮೊಗ್ಗಗಳಂಥ ಜಿಲ್ಲೆಗಳು ಬಯಲು ನಾಡಿನ ಮತ್ತು ಮಲೆನಾಡಿನ ಪ್ರದೇಶಗಳನ್ನು ಹೊಂದಿದ್ದು ಈ ಮಧ್ಯೆ, ಅಲ್ಲಲ್ಲಿ ಬೆಟ್ಟಗುಡ್ಡಗಳನ್ನು ಹೊಂದಿವೆ. ಮೈಸೂರು, ಮಂಡ್ಯ, ತುಮಕೂರು, ತಿಪಟೂರು, ಮಧುಗಿರಿ, ಮದ್ದೂರು, ನಾಗಮಂಗಲ, ಚೆನ್ನರಾಯಪಟ್ಟಣ ಇಲ್ಲಿಯೂ ಕೂಡ ಬಯಲು ಸೀಮೆಯಿಂದ ಕೂಡಿದ್ದು ಇಲ್ಲಿಯೂ ಕೂಡ ಬೆಟ್ಟ ಗುಡ್ಡ ಬಯಲು ಪ್ರದೇಶಗಳನ್ನು ಹೊಂದಿದ್ದು ಬುಡಕಟ್ಟು ಮತ್ತು ಅಲೆಮಾರಿ ಜನಾಂಗಗಳಿವೆ. ಭೌಗೋಳಿಕವಾಗಿ, ಭಾಷಿಕವಾಗಿ ಈ ಪ್ರದೇಶವನ್ನು ಬಯಲು ನಾಡು ಅಥವಾ ಬಯಲು ಸೀಮೆ ಎಂದೇ ಹೇಳಲಾಗುತ್ತದೆ. ಈ ಪ್ರದೇಶಗಳಲ್ಲಿ ಮೈಸೂರು ಕನ್ನಡ ಭಾಷೆಯನ್ನೇ ಬಳಸುವುದನ್ನು ಈ ಕಥೆಗಳಲ್ಲಿಯೂ ಕಾಣುತ್ತೇವೆ. ಈ ಕಥೆಗಳು ಹಳೇ ಮೈಸೂರು ಬಯಲು ಸೀಮೆಯಲ್ಲಿನ ಕಥೆಗಳಾಗಿರುವುದರಿಂದ ಕೆಲವು ಪ್ರದೇಶದ ಕಥೆಗಳಲ್ಲಿ ತೆಲುಗಿನ ಪ್ರಭಾವದ ಶಬ್ದಗಳು ವಿರಳವಾಗಿ ಕಾಣಸಿಗುತ್ತವೆ. ಹಾಸ್ಯದ ಕಥೆಗಳಲ್ಲಿ ಬಳಸುವ ಶಬ್ದಗಳು ಮತ್ತು ಆ ಕಥೆಯ ನೈಜತೆಯನ್ನು ಅರಿಯಲು ಆ ಪ್ರದೇಶದ ಭಾಷೆಯ ಬಳಕೆಯ ಜ್ಞಾನ ಸ್ವಲ್ಪಮಟ್ಟಿಗಾದರೂ ಇರಬೇಕಾಗುತ್ತದೆ.

ಪ್ರಸ್ತುತ ಸಂಕಲನದ ಕಥೆಗಳನ್ನು ದಕ್ಷಿಣ ಕರ್ನಾಟಕದ ಹಳೆಯ ಮೈಸೂರು ಭಾಗದ ಬಯಲುನಾಡಿನ ವಿವಿಧ ಭಾಗಗಳಲ್ಲಿ ಸಂಗ್ರಹಿಸಲಾಗಿದೆ. ಕಳೆದ ಒಂದೂವರೆ ದಶಕದ ಸಂಗ್ರಹದಿಂದ ಆಯ್ದು

ಕಥೆಗಳಿವಾದುದರಿಂದ ಕಾಲದೃಷ್ಟಿಯಿಂದಲೂ ಸಾಕಷ್ಟು ಅಂತರವನ್ನು ಇಲ್ಲಿ ಗುರುತಿಸಬಹುದಾಗಿದೆ. ಕಥೆಗಾರರ ವಯಸ್ಸು, ಮತ, ಅನುಭವ, ವಿದ್ಯಾಮಟ್ಟ, ಪರಿಸರಗಳಲ್ಲೂ ಸಾಕಷ್ಟು ವ್ಯತ್ಯಾಸವನ್ನು ಇಲ್ಲಿ ಕಾಣಬಹುದು. ಕೆಲವು ಕಥೆಗಳಿಗೆ ಎರಡು ಮೂರು ಪಾಠಗಳನ್ನು ಜೀಶಂಪ ಅವರ ಸಂಗ್ರಹದಿಂದಲೇ ದೊರಕಿಸಿಕೊಟ್ಟಿರುವುದು ಇಲ್ಲಿ ಸಾಧ್ಯವಾಗಿದೆ. ಆದಷ್ಟು ಮಟ್ಟಿಗೆ ಉತ್ತಮ ಪಾಠಗಳನ್ನೇ ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

೩.೨. ಕನ್ನಡ ಜನಪದ ಕಥೆಗಳ ಸ್ವರೂಪ ಮತ್ತು ಲಕ್ಷಣ

ಮಾನವನ ಪುರಾತನ ಸಂಸ್ಕೃತಿಯ ಹಾಗೂ ಸಂಪ್ರದಾಯದ ಮೇಲೆ ಹೆಚ್ಚು ಬೆಳಕನ್ನು ಬೀರಬಲ್ಲ ಜಾನಪದ ಪ್ರಕಾರಗಳಲ್ಲಿ ಕಥೆ ಪ್ರಮುಖವಾದುದು. ಬಾಯಿಂದ ಬಾಯಿಗೆ ಹರಿದು ಬಂದಿರುವ ಈ ಕಥೆಗಳ ಉಗಮ, ವಿಕಾಸ ಮತ್ತು ಪ್ರಸಾರಗಳನ್ನು ಅಧ್ಯಯನ ಮಾಡಿದವರಿಗೆ ಇದು ಸತ್ಯವೆನಿಸುತ್ತದೆ. ಮಾನವ, ಅವನ ಸಮಾಜದ ಮತ್ತು ಸಂಸ್ಕೃತಿ ನಾಗರೀಕತೆಗಳ ಬಗ್ಗೆ ಅಧಿಕ ಪುರಾವೆಗಳನ್ನು ಒದಗಿಸಿಬಲ್ಲ ಈ ಕಥೆಗಳು ಕೇವಲ ಸಾಹಿತ್ಯಿಕ ಪ್ರಕಾರವಾಗಿರದೇ, ಪ್ರಾಮಾಣಿಕ ವಿಜ್ಞಾನವೂ ಆಗಿದೆ. ಆದ್ದರಿಂದ ಇಂಥ ಪರಂಪರಾಗತ ಕಥೆಗಳಿಗೆ ಮನೋರಂಜನೆ ಒಂದು ಮುಖವಾದರೆ ಸಾಮಾಜಿಕ, ಭಾಷಿಕ, ಚಾರಿತ್ರಿಕ, ಮನಶಾಸ್ತ್ರೀಯ ಹಾಗೂ ಮಾನವಶಾಸ್ತ್ರೀಯ ದೃಷ್ಟಿಕೋನಗಳ ಮೂಲಕ ಮನುಷ್ಯ ವರ್ಗದ ತಿಳುವಳಿಕೆ ಮತ್ತೊಂದು ಮುಖವಾಗುತ್ತದೆ. ಜನಪದ ಕಥೆಯ ಬಗ್ಗೆ ಎದ್ದಿರುವಷ್ಟು ವಾದ ವಿವಾದಗಳು, ಸಿದ್ಧಾಂತ ಪ್ರತಿಸಿದ್ಧಾಂತಗಳು ಮತ್ತಾವುದೇ ಪ್ರಕಾರದ ಬಗ್ಗೆ ಎದ್ದ ಹಾಗೆ ಕಾಣುವುದಿಲ್ಲ.

ತಲೆಮಾರಿನಿಂದ ತಲೆಮಾರಿಗೆ ಬಾಯಿಮಾತಿನ ಮೂಲಕ ಹರಿದು ಬಂದಿರುವ ಕಥೆಯನ್ನು ಸ್ಥೂಲವಾಗಿ ಜನಪದ ಕಥೆ ಎಂದು ಕರೆಯಬಹುದು. ಇದನ್ನು ಇಂಗ್ಲೀಷಿನಲ್ಲಿ Folk tale ಎಂದು ಕರೆದಿದ್ದಾರೆ. ಈ ಮಾತು ವ್ಯಾಪಕವಾದ ಅರ್ಥದಲ್ಲಿ ಎಲ್ಲ ಸಾಂಪ್ರದಾಯಿಕ ಕಥನ ರೂಪಗಳನ್ನು ಒಳಗೊಳ್ಳುತ್ತದೆ. ಜನಪದ ಕಥೆಗಳು ನಮ್ಮಲ್ಲಿ 'ಅಜ್ಜಿಯ ಕಥೆಗಳು' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಕಥೆ ತಲೆಮಾರಿನಿಂದ ತಲೆಮಾರಿಗೆ ಸಾಗುತ್ತದೆ. ಅಜ್ಜಿಯರು ಕಥಾಭಂಡಾರಗಳಿದ್ದ ಹಾಗೆ. ಕಥೆಗಾಗಿ ಅವರನ್ನು ಪೀಡಿಸದ ಎಳೆಯರಿಲ್ಲ. ಬಂಗಾಳಿ, ಅಸ್ಸಾಮಿ ಭಾಷೆಗಳಲ್ಲಿ ಸುತ್ತುವ ವರ್ತಕ ಅಲ್ಲಿ ನಮ್ಮ ಅಜ್ಜಿಯ ಪಾತ್ರವಹಿಸಿದ್ದಾನೆ.

ಕಥೆಯನ್ನು ಮುಖ್ಯವಾಗಿ ವಾಚಿಕ ಮತ್ತು ಗ್ರಾಂಥಿಕ ಎಂದು ಎರಡು ಭಾಗವಾಗಿ ಮಾಡಿಕೊಳ್ಳಬಹುದು. ಪ್ರಸ್ತುತ ಅಧ್ಯಯನದ ಸಂಕಲನದ ಕಥೆಗಳು ಸಂಪೂರ್ಣವಾಗಿ ಕಂಠಸ್ಥ ಸಂಪ್ರದಾಯದ ವಾಚಿಕ ಕಥೆಗಳೇ ಆಗಿವೆ. ಕಥೆಗಳಲ್ಲಿ ಮೂಲವಸ್ತುವಿನ ಸಾಂಪ್ರದಾಯಿಕ ಸ್ವಭಾವ ಇಲ್ಲಿ ಮುಖ್ಯವಾಗುತ್ತದೆ. ಪ್ರಸಿದ್ಧ ಜಾನಪದ ವಿದ್ವಾಂಸ ಸ್ಟಿತ್ ಥಾಮ್ಸನ್ ಹೇಳುವ ಹಾಗೆ, ಗ್ರಾಂಥಿಕ ಮತ್ತು ವಾಚಿಕ ಕಥೆಗಳು ತಮ್ಮ ನಡವಳಿಕೆಯಲ್ಲಿ ಬೇರೆಯಾದರೂ ತಮ್ಮ ವಸ್ತುವಿನ ಮೂಲ ಹಾಗೂ ಕರ್ತೃತ್ವದ ನಿರಾಕರಣೆಯಲ್ಲಿ ಅವೆರಡೂ ಒಂದೇ ಆಗುತ್ತವೆ. ಅನೇಕ ವೇಳೆ ಜನಪದ ಕಥೆಯೊಂದು ಸಾಹಿತ್ಯಿಕ ದಾಖಲೆಗೆ ಇಳಿಯಬಹುದು. ಅದು ಕಾಲದ ಮೂಲಕ ಉಳಿದು ಬರುವಾಗ ಮತ್ತೆ ಜನಪದ ಶ್ರೋತೃವಿಗೆ ಹೇಳಲ್ಪಡಬಹುದು. ಆ ಶ್ರೋತೃ ಇದಕ್ಕೆ ಏನಾದರೂ ಸೇರಿಸಬಹುದು. ಹೀಗೆ ಬದಲಾಗುವುದು ಮತ್ತು ಬೆಳೆಯುವುದು ಇಲ್ಲಿ ಸಾಮಾನ್ಯ.

ಆದ್ದರಿಂದ ಪ್ರಸ್ತುತ ಸಂಕಲನದ ಕೆಲವು ಕಥೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಾಷಿಕವಾಗಿ ಕೆಲವು ಬದಲಾವಣೆಯಾಗಿರುವುದನ್ನು ಕಾಣಬಹುದಾಗಿದೆ. 'ದೊಂಬರ ಹುಡುಗ' ಕಥೆಯು 'The magician and his pupil (Type 325) ಎಂಬ ಮಾದರಿಯಲ್ಲಿ ಯೂರೋಪಿನಾದ್ಯಂತ ದೊರೆಯುತ್ತದೆ. ಮಾಂತ್ರಿಕ ಜನಪದ ಕಥೆಗಳ ಸಾಲಿನಲ್ಲಿ, ವಿದ್ವಾಂಸರ ಆಸಕ್ತಿಯನ್ನು ಸೆಳೆದ ರಚನೆಯನ್ನು ವಿಶ್ವದ ಜನಪದ ಕಥೆಗಳಿಗೆ ಅವರ ಶಿಷ್ಯ Emmanuel cosquin ಈ ಕಥೆಯನ್ನು ಉತ್ತಮ ಮಾದರಿಯನ್ನಾಗಿಟ್ಟುಕೊಂಡು ಚರ್ಚಿಸಿದ್ದಾರೆ.

ಈ ಕಥಾ ಸಂಕಲನದ ಸಾಲಿನಲ್ಲಿ ಮತ್ತೊಂದು ಗಮನಾರ್ಹವಾದ ಕಥೆ ತಿಮ್ಮಕ್ಕ ಹೇಳಿದ 'ನಾಗಮಾಣಿಕ್ಯ' The magic ring (Type 560) ಎಂಬ ಸುಪ್ರಸಿದ್ಧ ಕಥೆಯು ಕನ್ನಡದ ಈ ರೂಪ ಸಾಕಷ್ಟು ವಿಸ್ತಾರವಾಗಿದೆ. ಉಂಗುರಕ್ಕೆ ಬದಲಾಗಿ 'ಮಾಣಿಕ್ಯ'ವನ್ನು ಬಳಸಿಕೊಂಡಿರುವುದು ಈ ಕತೆಯ ಸ್ವಾರಸ್ಯಗಳಲ್ಲಿ ಒಂದು.

ಚಾರಿತ್ರಿಕ ಭೌಗೋಳಿಕ ಕ್ರಮದಲ್ಲಿ ಅತ್ಯುತ್ತಮವಾದ ಪ್ರಯೋಗ The Magic ring ಕಥೆಗೆ ಲಭ್ಯವಾಯಿತು. ಆರ್ನೆ ಆಂಟಿಯವರು ನೂರಾರು ಪಾಠಗಳ ಆಧಾರದ ಮೇಲೆ ಮೇಲಿನಂತೆ ಈ ಕಥೆಯ ಮೂಲರೂಪವೊಂದನ್ನು ಸಿದ್ಧಪಡಿಸಿದರು. ಆದರೆ ಯುರೋಪಿನ ಪಾಠಗಳಲ್ಲೆಲ್ಲ ಮಾಂತ್ರಿಕ ಶಿಲೆಗೆ ಬದಲಾಗಿ ಉಂಗುರ ಹೆಚ್ಚು ಜನಪ್ರಿಯವಾಗಿದೆ. ಇದೂ ಸಹ ಭಾರತೀಯ ಕಥೆಯೇ ಇರಬೇಕೆಂದು ಪ್ರಸಿದ್ಧ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಹೀಗೆ ಕಥೆಗಳು ತಮ್ಮ ವಸ್ತುವಿನಲ್ಲಿ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗೊಳ್ಳಬಹುದು. ಕಥೆ ಹೇಳುವ ಪರಿಸ್ಥಿತಿಗಳು ಮತ್ತು ಉದ್ದೇಶಗಳು ದೇಶದಿಂದ ದೇಶಕ್ಕೆ ಹೋದಂತೆಲ್ಲಾ ಬದಲಾಗಬಹುದು. ಆದರೆ ಒಂದು ಬಗೆಯ ಸಾಮಾಜಿಕ ಮತ್ತು ವೈಯಕ್ತಿಕ ಅಗತ್ಯಗಳು ಇದ್ದೇ ತೀರುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಕಥೆಗಳನ್ನು ಹೇಳುವುದಾಗಲಿ ಕೇಳುವುದಾಗಲಿ ನಿನ್ನೆ ಮೊನ್ನೆಯದಲ್ಲ. ಸಮಾಜದಷ್ಟು ಪುರಾತನವಾದುದು. ಮಾನವ ಕಥೆಹೇಳುವುದನ್ನು ಕಲೆಯಾಗಿ ಬೆಳೆಸಿಕೊಂಡ. ಕಥೆ ಹೇಳುವುದರ ಬಗೆಗೆ ಗೌರವಾದರಗಳಿದ್ದುದರಿಂದಲೇ ತಲೆಮಾರಿನಿಂದ ತಲೆಮಾರಿಗೆ ದಾಟಿ ಬರುವುದು ಸಾಧ್ಯವಾಯಿತು. ಶ್ರಮದ ಉಪಶಮನಕ್ಕಾಗಿ ಕಲೆ ಜನ್ಮತಾಳಿತು ಎಂಬುದನ್ನು ನಂಬಿಕೊಳ್ಳುವುದಾದರೆ, ಕತೆ ಹುಟ್ಟಿದ್ದು ಈ ಅನಿವಾರ್ಯದ ಫಲವಾಗಿ ಎಂದು ಹೇಳುವುದು ಸಾಧ್ಯ. ಜನಪದರು ಕಥೆಗಳನ್ನು ಕೆಲವು ವಿಶೇಷ ಸಂದರ್ಭದಲ್ಲಿ ಹೇಳುತ್ತಿದ್ದಂತೆ ಕಾಣುತ್ತದೆ. ಕೆಲವು ಚಳಿಗಾಲದಲ್ಲೂ, ಕೆಲವು ಬೇಸಿಗೆ ಕಾಲದಲ್ಲೂ ಹೇಳಲಾಗುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಕಥೆ Functional ಆಗುವುದನ್ನು ಗುರುತಿಸಬಹುದು. ಮಕ್ಕಳನ್ನು ಮಲಗಿಸಲು ಕಥೆ ದೊಡ್ಡ ಸಾಧನವಾಗಿ ಬಳಕೆಯಾಗುತ್ತದೆ. ರಾಜಮಹಾರಾಜರು ಕಥೆ ಹೇಳುವವರನ್ನು ನೇಮಿಸಿಕೊಳ್ಳುತ್ತಿದ್ದರು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಇಂಥ ಸಮಯದಲ್ಲಿ ಇದೊಂದು ಉದ್ಯೋಗವಾಗಿತ್ತೆಂದು ತಿಳಿಯಬಹುದು. ಅಕ್ಬರ್-ಬೀರಬಲ್ಲ, ಕೃಷ್ಣದೇವರಾಯ, ತೆನಾಲಿ ರಾಮಕೃಷ್ಣ ಮುಂತಾದವರನ್ನು ಹೆಸರಿಸಬಹುದು. ಹಳ್ಳಿಯ ಕಡೆಗಳಲ್ಲಿ ಇವೊತ್ತಿಗೂ ಕೂಡ ಊಟ ಮುಗಿದ ಮೇಲೆ ಮನೆಯ ಮುಂದಿನ ಪಡಸಾಲೆಯಲ್ಲೋ ಅಥವಾ ರಂಗೋಲಿ ಬಿಡುವ ಮುಂದಿನ ಜಾಗದಲ್ಲಿ ಕುಳಿತು ಬೆಳದಿಂಗಳಿನಲ್ಲಿ ಕಥೆ ಹೇಳುವವರನ್ನು ಅವರ ಸುತ್ತ ಕುಳಿತು ಕೇಳುವವರನ್ನು ನೋಡುತ್ತೇವೆ. ಹಾಗೆಯೇ ಶೀತವಲಯದಲ್ಲಾದರೆ

ಅಥವಾ ಚಳಿಗಾಲದಲ್ಲಿಯಾದರೆ ಬೆಂಕಿ ಕಾಯಿಸುತ್ತಾ ಸಂಜೆಯಲ್ಲಿ ಕಥೆ ಹೇಳುವ ಮತ್ತು ಕೇಳುವ ಕ್ರಿಯೆಗಳಲ್ಲಿ ತೊಡಗಿರುವುದನ್ನು ಕಾಣಬಹುದು. ಈ ಕತೆಗಳನ್ನು ಹೇಳಲು ಹಾಗೂ ಕೇಳಲು ಗಂಡಸರು, ಹೆಂಗಸರು, ಬಾಲಕರು ಯಾರಾದರೂ ಆಗಿರಬಹುದು. ಒಟ್ಟಾರೆ ಕಥೆ ಹೇಳುವ ಮತ್ತು ಕೇಳುವ ಈ ಕಂಠಸ್ಥ ಕಲೆ ಇತಿಹಾಸಕ್ಕಿಂತಲೂ ಪ್ರಾಚೀನವಾದುದು. ಅದು ಯಾವುದೇ ಒಂದು ಪ್ರದೇಶಕ್ಕೆ ಸಮೀತವಾದುದಲ್ಲ.

ಜನಪದ ಕಥೆಗಳ ಅಧ್ಯಯನವನ್ನು ವೈಜ್ಞಾನಿಕವಾಗಿ ಕೈಗೊಂಡವರಲ್ಲಿ ಕೆಲವರನ್ನು ಮಾತ್ರ ಹೆಸರಿಸುವ ಪರಿಸ್ಥಿತಿ ಇನ್ನೂ ಉಳಿದಿದೆ. ಇದರಲ್ಲಿ ಎರಡು ಬಗೆಯ ಅಧ್ಯಯನಕಾರರಿದ್ದಾರೆ. ಜನಪದ ಕಥೆಗಳನ್ನು ಸಾಹಿತ್ಯಕ ದೃಷ್ಟಿಯಿಂದ ನೋಡಿ ಅಧ್ಯಯನ ನಡೆಸುವವರು ಒಂದು ಗುಂಪು. ಮತ್ತು ಅವುಗಳನ್ನು ಒಟ್ಟು ಜಾನಪದ ಸಂದರ್ಭದಲ್ಲಿ ನೋಡುವುದು ಇನ್ನೊಂದು ಗುಂಪು. ಜನಪದ ಕಥೆಗಳನ್ನು ಜಾನಪದದ ಸಮಗ್ರ ದೃಷ್ಠಿಯಿಂದ ನೋಡಿದವರಲ್ಲಿ ಮೊದಲಿಗರೆಂದರೆ ಜೀ.ಶಂ. ಪರಮಶಿವಯ್ಯನವರು.

ಅವರ 'ಕನ್ನಡ ಜನಪದ ಕಥೆಗಳು', 'ಆಯ್ದ ಜನಪದ ಕಥೆಗಳು', ಮತ್ತು 'ದಕ್ಷಿಣ ಕರ್ನಾಟಕದ ಜನಪದ ಕಥೆಗಳು', ಇವುಗಳಿಗೆ ಬರೆದಿರುವ ಪ್ರಸ್ತಾವನೆಯನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಕನ್ನಡ ಜನಪದ ಕಥೆಗಳು ಅಧ್ಯಯನ ಆರಂಭವಾಗಿ ಬಹಳ ವರ್ಷಗಳೇನೂ ಆಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಡಾ.ಜೀ.ಶಂ.ಪರಮಶಿವಯ್ಯನವರ 'ಕನ್ನಡ ಜನಪದ ಕಥೆಗಳು', ಸಂಗ್ರಹವೇ ಕನ್ನಡ ಜನಪದ ಕಥೆಗಳ ಅಧ್ಯಯನದ ಆರಂಭದ ಕೃತಿ. ಈ ಕೃತಿ ೧೯೭೦ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿದೆ. ಸ್ಮಿಥ್ ಥಾಮ್ಸನ್ ಅವರ ದೃಷ್ಟಿಯನ್ನು ಅನುಸರಿಸಿ ಇಲ್ಲಿನ ಕಥೆಗಳನ್ನು ಎಂಟು ಮುಖ್ಯ ವಿಭಾಗಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಒಟ್ಟು ೬೮ ಕಥೆಗಳನ್ನೊಳಗೊಂಡ ಈ ಸಂಕಲನದಲ್ಲಿ ಪ್ರಪಂಚದ ಕಥಾವರ್ಗಗಳಲ್ಲಿ ಪ್ರಾತಿನಿಧಿಕವೆನಿಸಿದ ಹೆಡ್ಡತಂದ ಜಾಣೆಯರು (೪೬೫), ಕುಂಟನ ಸಾಹಸ (೧೧೫೨), ಮಂಚದಮ್ಮ (೭೯ಎ), ಧೀರಕುಮಾರ (೪೬೨), ಪುಣ್ಯದ ಲಕ್ಷ್ಮಿ (೭೦೭), ಮಡಿದ ಗಂಡನ ಪಡೆದ ಚಲುವೆ (೪೩೭), ನಾಗಮಾಣಿಕ್ಯ (೫೬೦), ಅದೃಷ್ಟವಂತ ಬುದ್ದಿವಂತ (೯೪೫ಎ), ದೊಂಬರ ಹುಡುಗ (೩೨೫), ಮಂಜುಗಣ್ಣಿನ ಮಾಯಣ್ಣ (೧೬೮೫), ಕುರುಡನ ಮಡದಿ (೧೩೮೦), ಮುಂತಾದ ಅನೇಕ ಕಥೆಗಳಿವೆ. ಇತ್ತೀಚೆಗೆ ದೊರೆಯುತ್ತಿರುವ ಅನೇಕ ಭಿನ್ನ ಪಾಠಗಳು ರಮ್ಯಕಥೆಗಳ ಸಂಕಲನದಂತೆ ಈ ಕೃತಿ ಕನ್ನಡಕ್ಕೆ ಆದರ್ಶಪ್ರಾಯವಾದ ಕೃತಿ ಎನಿಸುತ್ತದೆ.

ಪ್ರಸ್ತಾವನೆಯಲ್ಲಿ ಪ್ರಪಂಚದ ಸುತ್ತಮುತ್ತ ಜನಪದ ಕಥೆಯ ಬಗ್ಗೆ ನಡೆದಿರುವ ವೈಜ್ಞಾನಿಕ ಅಧ್ಯಯನದ ಬಗ್ಗೆ ಸವಿವರವಾಗಿ ಚರ್ಚಿಸಲಾಗಿದೆ. ಕನ್ನಡ ಜನಪದ ಕಥೆಗಳ ಅಧ್ಯಯನದ ಸಂದರ್ಭಕ್ಕೆ ಈ ಬಗೆಯ ಅಧ್ಯಯನ ಯಾವ ಬಗೆಯಲ್ಲಿ ಆದರ್ಶವಾಗುತ್ತದೆ ಎಂಬುದನ್ನು ಸಹ ತೌಲನಿಕವಾಗಿ ಹೇಳಿದ್ದಾರೆ. ಜನಪದ ಕಥೆಗಳ ಅಧ್ಯಯನಕ್ಕೆ ತೊಡಗುವ ಯಾರಿಗೆ ಆಗಲಿ ಈ ಪ್ರಸ್ತಾವನೆ ಆರಂಭದ ಶಿಕ್ಷಣವಾಗಬಲ್ಲದು.

ಪ್ರಸ್ತುತ ಅಧ್ಯಯನದ ಕಥೆಗಳು ಸಾಮಾನ್ಯವಾಗಿ "ಒಂದಾನೊಂದು ಕಾಲದಲ್ಲಿ ಒಂದಾನೊಂದು ಊರಲ್ಲಿ, ಒಬ್ಬ ದೊರೆ. ಅವನಿಗೆ ಮಕ್ಕಳಿರಲಿಲ್ಲ. ಅಥವಾ ಅವನಿಗೆ ಏಳುಜನ ಗಂಡು ಮಕ್ಕಳು" ಎಂಬ ರೀತಿಯಲ್ಲಿ ಸಾಗುತ್ತವೆ. ಕೆಲವು ಕಥೆಗಳು ವ್ಯಕ್ತಿಗಳ ಮತ್ತು ಸ್ಥಳಗಳ ಹೆಸರಿನಿಂದ ಆರಂಭವಾಗುವುದುಂಟು.

ಚಂದ್ರಾಮತಿ ಪಟ್ಟಣ. ಚಂದ್ರಶೇಖರಾಯ ದೊರೆ... ಬೆಂಗಳೂರು ಅಂಥಾದ್ದು ಒಂದು ಪಟ್ಟಣ; ಮೈಸೂರು ಅಂಥಾದ್ದು ಇನ್ನೊಂದು ಪಟ್ಟಣ, ಮೈಸೂರು ರಾಜ ಬೆಂಗಳೂರಿನ ರಾಜನಿಗೆ ತಂಗಿಯನ್ನು ಕೊಟ್ಟು ಮದುವೆ ಮಾಡಿದ" ಇತ್ಯಾದಿ. ಗ್ರಾಂಥಿಕ ಕಥೆಗಳಲ್ಲಿನ ಹೆಸರುಗಳಿಂದ ಪ್ರಾರಂಭವಾಗುವುದು ಸಹಜವಾದರೂ, ಜನಪದ ಕಥೆಯ ಜಾಯಮಾನವಲ್ಲ. ಒಂದು ಪಕ್ಷ ಬಂದರೆ ಅದು ಸಾಹಿತ್ಯಿಕ ಕಥೆಯ ಸಂಪರ್ಕ ಮತ್ತು ಪ್ರಭಾವಗಳಿಂದ ಆದುದೆಂದು ನಿರ್ಧರಿಸಬೇಕಾಗುತ್ತದೆ. ಕೆಲವು ಸಾರಿ ಕಥೆ ಹೇಳುವವರು ಕಥೆಯ ಆರಂಭವನ್ನು ಅಲ್ಲಿನ ಪರಿಸರಕ್ಕೆ ಹೊಂದಿಸಿಕೊಂಡು, ತಮ್ಮ ವೈಯಕ್ತಿಕ ಪರಿಸರಕ್ಕೆ ಹೊಂದಿಸಿಕೊಂಡು ಹೇಳುವುದು ಈ ಕಥಾಸಂಕಲನದಲ್ಲಿ ಕಾಣಬಹುದು. ಇಂಥ ಸಂದರ್ಭದಲ್ಲಿ ಕಥಾ ವಕ್ತೃ ತನ್ನನ್ನೇ ತನ್ನ ಸಮಕಾಲೀನರಾದ ಮತ್ತಾರನ್ನೊ ಬಳಸಿಕೊಂಡು ಕಥೆ ಹೇಳುವುದು ವಾಡಿಕೆಯಾಗಿದೆ. ಇದಕ್ಕೆ ಕಾರಣ ಊರು, ರಾಜ, ರಾಣಿ ಮುಂತಾದ ಹೆಸರುಗಳು ಸಾರ್ವತ್ರಿಕವಾಗಿ ಬಳಕೆಯಾಗುವುದರಿಂದ ಅವುಗಳ ಬದಲು ಇನ್ನಾವ ಹೆಸರನ್ನು ಸೇರಿಸಿದರೂ ಕಥೆಯ ಮೂಲರಚನೆಯಲ್ಲಿ ವ್ಯತ್ಯಾಸವೇನೂ ಸಂಭವಿಸುವುದಿಲ್ಲ. ಕಥನ ಪರಿಣಾಮವನ್ನು ತೀವ್ರಗೊಳಿಸುವುದಕ್ಕೂ ಈ ಬಗೆಯ ವಿಧಾನ ಬಳಕೆಯಾಗಬಹುದು. ಹೀಗೆ ಮಾಡುವುದು ಕಥೆಯನ್ನು ಕೇಳುವವರು ಅಲ್ಲಿನ ಪರಿಚಿತ ಪರಿಸರದವರಾಗಿದ್ದಾಗ ಮಾತ್ರ ಸಾಧ್ಯ. ಆದ್ದರಿಂದ ಕಥೆ ಹೇಳುವವರು ಹೇಳುವ ಧಾಟಿಯಲ್ಲಿ ಮಾಡಿಕೊಳ್ಳುವ ಒಂದು ಸಣ್ಣ ಬದಲಾವಣೆ ಇದಾಗಿರುತ್ತದೆ.

ಕಥಾರಂಭದಂತೆಯೇ ಮುಕ್ತಾಯವೂ ಗಮನಾರ್ಹವಾದುದೇ. "ಆಮೇಲೆ ಅವರು ಸುಖವಾಗಿದ್ದರು, ಸುಖವಾಗಿ ಬಾಳಿಕೊಂಡು ಹೋದರು, ಅವರು ಅಲ್ಲಿ ಬಾಳ್ತಾ ಇದ್ರೆ, ನಾವು ಇಲ್ಲಿದ್ದೇವೆ" ಎಂಬಂತಹ ಸೂತ್ರಬದ್ಧ ಮುಕ್ತಾಯ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಈ ಸಂಕಲನದ ಕಥೆಗಳು ಸುಖಾಂತವಾಗಿ ಅದರಲ್ಲಿಯು ರಾಣಿಯನ್ನು ಗೆದ್ದು ಮದುವೆಯಾದ ಉತ್ಸವದಲ್ಲಿ ಮುಕ್ತಾಯ ಪಡೆಯುತ್ತದೆ.

ಪ್ರಸ್ತುತ ಸಂಕಲನದ ಕಥೆಗಳು ಆ ಪ್ರದೇಶದ ಅಲ್ಲಿನ ಜನತೆಯ ಸಾಂಸ್ಕೃತಿಕ ಇತಿಹಾಸದ ಮುಖಗಳನ್ನು ಪರಿಚಯಿಸುವ ಬಹುಮುಖ್ಯವಾದ ಭಾಗವಾಗಿ ಕಾಣಿಸಿಕೊಳ್ಳುತ್ತವೆ. ಇವುಗಳು ಒಂದು ಕಲಾತ್ಮಕ ಸೃಷ್ಟಿಯೂ ಆಗಿವೆ. ಮನುಷ್ಯನ ಸಮಸ್ತ ಬೌದ್ಧಿಕ ಮತ್ತು ರಸಾನುಭವದ ತಿಳುವಳಿಕೆಯನ್ನು ನೀಡುತ್ತವೆ. ಇಲ್ಲಿ ಅದ್ಭುತವಾದ ರಂಜಕತೆಯೇ ಇವುಗಳ ವಿಶಿಷ್ಟತೆಯಾಗಿದೆ. ಅಲ್ಲಿನ ಪರಿಸರ, ಗ್ರಾಮಗಳು ಅದರ ಸೊಗಸು, ನಾಟಕೀಯತೆ ಅದರ ಉಸಿರು. ಕೆಲವು ಕಥೆಗಳಲ್ಲಿ ಪ್ರಮುಖ ಘಟನೆಗಳು ಮನಶಾಸ್ತ್ರೀಯ ಹಿನ್ನೆಲೆಯಲ್ಲಿ ರೂಪಿತವಾಗಿವೆ. ಆಗಾಗೆ ಭಾವನಾತ್ಮಕವಾಗುವ ಸಂದರ್ಭಗಳೂ ಬರುತ್ತವೆ. ಜನತೆಯ ಆಚಾರ ವಿಚಾರಗಳ, ನಂಬಿಕೆ ನಡಾವಳಿಗಳ, ವಿವೇಕ ಬುದ್ಧಿವಂತಿಕೆಗಳ ಪ್ರತಿನಿಧಿಗಳು ಈ ಕಥೆಗಳಲ್ಲಿ ಕಾಣುತ್ತೇವೆ. ಕಥೆಗಳಲ್ಲಿ ವಸ್ತುವಿನ ದೃಷ್ಟಿಯಿಂದ ಕೆಲವು ಕಾಲ್ಪನಿಕ, ಮತ್ತೆ ಕೆಲವು ಸಾಮಾಜಿಕತೆಯಿಂದ ಕೂಡಿದ್ದವಾಗಿವೆ. ಇಂದಿಗೂ ಸಮಾಜದ ಎಲ್ಲ ವಯಸ್ಸಿನವರಿಗೂ ಮನರಂಜನೆಯನ್ನು ನೀಡುವ ಪ್ರಮುಖವಾದ ಪ್ರಕಾರಗಳಾಗಿವೆ. ಈ ಕಥೆಗಳಿಂದ ಕೇಳುಗನಿಗಾಗುವ ಕಲಾನುಭವದ ಪರಿಣಾಮವನ್ನು ಕುರಿತು ಆಲೋಚಿಸಿದಾಗ ಕಥೆಗಳು ಸಾಹಸ ಕಾರ್ಯಗಳಿಗೆ ಪ್ರಚೋದಕವೂ, ಜ್ಞಾನಸಾಧನೆಯ ಸಂಕೇತವೂ ಆಗಿರುವುದನ್ನು ಕಾಣುತ್ತೇವೆ. ಇದರಿಂದ

ಪ್ರಯೋಜನವಾಗುವುದು ಏನೆಂದರೆ ಬೇಸರ ತರುವಂಥ ಏಕಾಂತ ತನದಿಂದ ಬಿಡುಗಡೆ ಹೊಂದುವುದು. ಒಂದು ರೀತಿಯ ಮಾನಸಿಕ ಸುಖ ಮತ್ತು ವಿಶ್ರಾಂತಿ ದೊರೆಯುತ್ತದೆ. ಅನಕ್ಷರಸ್ಥ ಸ್ತ್ರೀ ಪುರುಷರಿಗೆ ದುಃಖ ಮತ್ತು ಕೋಪಗಳ ಶಮನ ಹಾಗೂ ಶಿಕ್ಷಣ ಕೊಡುವ ಪ್ರಮುಖ ಸಾಧನವಾಗಿ ಇವುಗಳು ಬಹುಕಾಲ ಮುಂದುವರೆಯುತ್ತವೆ.

ಪ್ರಸ್ತುತ ಸಂಕಲನದ ಜನಪದ ಕಥೆಗಳು ಗದ್ಯಕಥೆಯ ಒಂದು ಪ್ರಕಾರವಾಗಿದೆ. ಕಥನ ಘಟನೆಗಳು, ಸಂವಿಧಾನ, ಸನ್ನಿವೇಶಗಳು ಭಾರತದ ಇತರ ಜನಪದ ಕಥೆಗಳು ಮತ್ತು ಜಗತ್ತಿನ ಇತರ ಜನಪದ ಕಥೆಗಳಲ್ಲಿ ಹೇರಳವಾದ ಸಾಮ್ಯವಿರುವುದು ಕಂಡುಬರುತ್ತದೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ಪ್ರಚಲಿತವಿರುವ ಕಥೆಗಳನ್ನು ಅವುಗಳ ವಸ್ತು ಹಾಗೂ ರಚನೆಯ ದೃಷ್ಟಿಯಿಂದ ಕೆಲವು ಪ್ರಕಾರಗಳಾಗಿ ವಿಂಗಡಿಸಬಹುದಾಗಿದೆ.

ಇವುಗಳಲ್ಲಿ ಮುಖ್ಯವಾಗಿ ಕಟ್ಟುಕಥೆ, ಸರಳ ಕಥೆಗಳು, ಸಂಕೀರ್ಣ ಕಥೆಗಳು ಹಾಗೂ ನೀತಿಕಥೆಗಳು ಎಂದು ವಿಂಗಡಿಸಬಹುದು. ಈ ಪ್ರಕಾರಗಳನ್ನು ಒಂದು ನಿರ್ದಿಷ್ಟ ಪ್ರದೇಶದ ಸೀಮಿತ ಹಿನ್ನೆಲೆಯಲ್ಲಿ ಮಾತ್ರ ಗುರುತಿಸಬಹುದಾಗಿದೆ.

ಕಟ್ಟುಕಥೆ ಜನಪದ ಕಥೆಗಳಲ್ಲಿ ಹೆಚ್ಚಿನ ಚರ್ಚೆಗೆ ಒಳಗಾಗಿರುವ ಕಥಾವರ್ಗವಾಗಿದೆ. ಇದನ್ನು ಜರ್ಮನ್ ಭಾಷೆಯಲ್ಲಿ Marchen ಎಂದು ಕರೆಯಲಾಗುತ್ತದೆ. ಮೊದಲಿಗೆ ಇದನ್ನು ಬಳಸಿ ಚಾಲ್ತಿಗೆ ತಂದವರು ಗ್ರೀಮ್‌ಸಹೋದರರು. ಅವರ ಜನಪದ ಕಥೆಗಳು ಎಂಬ ಅರ್ಥದಲ್ಲಿ ಬಳಸಿದ್ದಾರೆ. ಅವರ Kinder undhansmarchen ಸಂಕಲನದಲ್ಲಿ ಒಂದು ನಿರ್ದಿಷ್ಟ ಶೈಲಿಗೆ ಹೆಸರಾದ ಮಾರ್ಷೆನ್ ಪ್ರಕಾರವೇ ಅಲ್ಲದೆ ಐತಿಹ್ಯ, ಧಾರ್ಮಿಕ ಕಥೆ, ಹಾಸ್ಯ ಕಥೆ ಇತ್ಯಾದಿಗಳೆಲ್ಲವೂ ಸೇರಿಹೋಗಿವೆ.

ಕಟ್ಟುಕಥಾಪ್ರಕಾರ ಪ್ರಪಂಚದಾದ್ಯಂತ ಆಸಕ್ತಿಯನ್ನು ಕೆರಳಿಸಿದೆ. ವಾಸ್ತವ, ರಮ್ಯಾದ್ಭುತ ಜಗತ್ತಿನ ಚಿತ್ರವನ್ನು ಕೊಡುವಲ್ಲಿ ಈ ಪದ ಸಮಗ್ರವಾಗಿದೆ. ಇಂಗ್ಲೀಷ್ ಭಾಷೆಯಲ್ಲಿ ಈ ಪದಕ್ಕೆ ಸಂವಾದಿಯಾಗಿ Fainytale ಎಂಬ ಪದವನ್ನು ಬಳಸುವಂತೆ ಫ್ರೆಂಚ್ ಭಾಷೆಯಲ್ಲಿ Coute popular ಎಂಬ ಪದವನ್ನು ಬಳಸಲಾಗಿದೆ. ಈ ವರ್ಗದ ಕಥೆಗಳಲ್ಲಿ ಕಿನ್ನರ-ಕಿನ್ನರಿಯರು ಇರಬೇಕೆಂದು ಒಂದು ನಿಯತಿ ಕೂಡ ಇದೆ. ಆದರೆ ಈಗ ಇದು ಅತಿಮುಖ್ಯ ವಿಷಯವಾಗದೆ ಇರುವುದು ಕಂಡುಬರುತ್ತದೆ. ಇತ್ತೀಚಿಗಿನ ಎಲ್ಲ ಬಗೆಯ ಕಥೆಗಳಿಗೂ ಈ ಪದ ಅನ್ವಯಿಸುತ್ತದೆ. ಆದ ಕಾರಣ Folktaleಗೆ ಬದಲಾಗಿ marchan ಪದವನ್ನೇ ಏಕೆ ಬಳಸಬಾರದು ಎಂಬ ಅಭಿಪ್ರಾಯವೂ ಇದೆ. ಕಟ್ಟು ಕಥೆಯ ಬಗ್ಗೆಯಾದ ಎಲ್ಲಾ ಸಮಸ್ಯೆಗಳನ್ನು ಸ್ಮಿಥ್ ಥಾಮ್ಸನ್ ಮನಗಂಡು ಸಂಕೀರ್ಣ ಜನಪದ ಕಥೆಗಳಿಗೆ ಅನ್ವಯಿಸುವಂತೆ ಈ ಕಥೆಗಳು ಜಗತ್ತು ಒಂದು ರೀತಿಯ ರಮ್ಯ ಆಹ್ಲಾದವನ್ನುಂಟುಮಾಡುವಂಥದ್ದು ಎಂದು ಕಟ್ಟು ಕಥೆಯ ನಿರೂಪಣೆಯನ್ನು ಕೊಡುವುದರ ಮೂಲಕ ಅದರ ವಾಸ್ತವ ಸ್ಥಿತಿಯನ್ನು ತಿಳಿಸುತ್ತಾರೆ.

ಇತ್ತೀಚಿಗೆ ಸಂಗ್ರಹವಾಗುತ್ತಿರುವ ಕಟ್ಟುಕಥಾ ವರ್ಗವೆನ್ನಬಹುದಾದ ಕಥೆಗಳನ್ನು ಗಮನಿಸಿದರೆ ಅವುಗಳಲ್ಲಿ ಅಲೌಖಿಕ, ಅತಿರಂಜಕತೆ ಬಹಳ ಕಡಿಮೆಯಾಗಿರುವುದು ಕಂಡುಬರುತ್ತದೆ. ಇಂತಹ

ಸಂದರ್ಭದಲ್ಲಿ, ಕಟ್ಟುಕಥೆಗಳು ಯೂರೋಪಿನ ಕೆಲವು ಸಂಕೀರ್ಣ ಜನಪದ ಕಥೆಗಳಿಗೆ ಮಾತ್ರ ಅನ್ವಯಿಸುವಂಥವು ಎಂಬ ಅಭಿಪ್ರಾಯವೂ ಇರುವ ಸಂದರ್ಭದಲ್ಲಿ, ಕನ್ನಡದಲ್ಲಿ, ಸಂಗ್ರಹವಾಗಿರುವ ಅದರಲ್ಲೂ ಜೀ.ಶಂ.ಪರಮಶಿವಯ್ಯ ಅವರು ಸಂಗ್ರಹಿಸಿರುವ 'ಕನ್ನಡ ಜನಪದ ಕಥೆಗಳು' ಸಂಕಲನದಲ್ಲಿ ಒಳ್ಳೆಯ ಕಟ್ಟು ಕಥಾ ವರ್ಗದ ಕಥೆಗಳು ಇರುವುದು ನಮಗೆ ಸಮಾಧಾನಕರ ಸಂಗತಿಯಾಗಿದೆ.

ಈ ಕಥಾಸಂಕಲನದಲ್ಲಿ ಸಂಗ್ರಹವಾಗಿರುವ ಕಥೆಗಳಲ್ಲಿ ಕಟ್ಟುಕಥೆಗಳು ಮುಖ್ಯವಾಗಿ ಬರುತ್ತವೆ. ಈ ಕಥೆಗಳ ಮುಖ್ಯ ಉದ್ದೇಶ ಕಾಲ್ಪನಿಕ ಕಥೆಗಳನ್ನು ಹೇಳುವುದಾಗಿದೆ. ಈ ಮೇಲಿನ ಕಥಾವರ್ಗಗಳಲ್ಲಿ ಅತಿಮಾನುಷ ವಿರೋಧಿ ಕಥೆಗಳು, ಅತಿಮಾನುಷ ಸಹಾಯಕ ಕಥೆಗಳು, ಮಾಂತ್ರಿಕ ಮತ್ತು ಅದ್ಭುತ ಕಥೆಗಳು, ಪ್ರೇಮಿಗಳು ಮತ್ತು ದಂಪತಿ ಕಥೆಗಳು, ಪರೀಕ್ಷಿಸುವ, ಪರೀಕ್ಷೆಗೊಳಪಡಿಸುವ ಮತ್ತು ಶೋಧನೆಮಾಡುವ ಕಥೆಗಳು ಒಳ್ಳೆಯ ಹಾಗೂ ಕೆಟ್ಟಬಂಧುಗಳ ಕಥೆಗಳು, ಉನ್ನತ ಶಕ್ತಿಗಳು ಹೀಗೆ ಇನ್ನೂ ಮುಂತಾದ ಕಥೆಗಳನ್ನು ಒಳಗೊಂಡಿದೆ.

'ಕನ್ನಡ ಜನಪದ ಕಥೆಗಳು' ಕಥಾ ಸಂಕಲನದ ಸಾಲಿನಲ್ಲಿ ಕಟ್ಟುಕಥೆಗಳು ಪ್ರಮುಖ ಅಂಗವಾಗಿ ನಿಲ್ಲುತ್ತವೆ. ನಾಗರೀಕ ಸಂಸ್ಕೃತಿಗಳೆಲ್ಲೆಲ್ಲ ಕಟ್ಟು ಕಥೆ ಅತ್ಯಂತ ಜನಪ್ರಿಯ ಪ್ರಕಾರವಾಗಿದೆ. ಜೀ.ಶಂ.ಪ. ಅವರ ಕಥಾ ಸಂಕಲನದಲ್ಲಿ ಒಂದು ನಿರ್ದಿಷ್ಟ ಶೈಲಿಗೆ ಹೆಸರಾಗಿರುವ ಈ ಕಟ್ಟು ಕಥೆಗಳಲ್ಲಿ ಧಾರ್ಮಿಕ, ಹಾಸ್ಯ ಕಥೆ, ವಿನೋದ ಕಥೆಗಳೆಲ್ಲವೂ ಸೇರಿಹೋಗಿವೆ. ಇಂಗ್ಲೀಷ್‌ನಲ್ಲಿ ಇದಕ್ಕೆ ಕಿನ್ನರಕಥೆ, ಸಾಹಸಕಥೆ, ವಿನೋದ ಕಥೆಗಳೆಲ್ಲವೂ ಸೇರಿಹೋಗಿವೆ. ಇಂಗ್ಲೀಷ್‌ನಲ್ಲಿ ಇದನ್ನು ಕಿನ್ನರ ಕಥೆ, ಸಾಹಸಕಥೆ, ಅದ್ಭುತ ಕಥೆ ಮುಂತಾದ ಹೆಸರುಗಳಿಂದ ಕರೆಯುತ್ತಾರಾದರೂ ಮಾರ್ಶನ್ ಪದದ ಅರ್ಥ ವ್ಯಾಪ್ತಿ ಇವೆಲ್ಲವುಗಳಿಗಿಂತ ವಿಸ್ತಾರವಾದದ್ದು. ಕನ್ನಡದಲ್ಲಿ ಇದನ್ನು ಕಟ್ಟು ಕಥೆ ಎಂದು ಕರೆದಿದ್ದಾರೆ. ಆಧುನಿಕ ವಿದ್ವಾಂಸರು ಅದರತ್ತ ಗಮನ ಹರಿಸಿ ಅದನ್ನು ಹೆಚ್ಚಾಗಿ ಬಳಸುತ್ತಿರುವುದನ್ನು ಕಾಣಬಹುದು. ಸ್ಮಿತ್ ಥಾಮಸನ್ ಅವರು ಇದಕ್ಕೆ 'ಚಿಮಿರಾತ್' ಎಂಬ ಪದವನ್ನು ಸೂಚಿಸಿದ್ದರೂ ಅದು ಹೆಚ್ಚು ಬಳಕೆ ಬರಲಿಲ್ಲ.

ಪ್ರಸ್ತುತ ಅಧ್ಯಯನದ ಕಥೆಗಳು ಹಲವಾರು ಆಶಯಗಳಿಂದ ರಚಿತವಾಗಿರುವುದರಿಂದ ಇವುಗಳ ನಿರೂಪಣೆ ಕೆಲವು ಕಥೆಗಳಲ್ಲಿ ಸಾಕಷ್ಟು ದೀರ್ಘವಾಗಿಯೂ ಮತ್ತೆ ಕೆಲವು ಮಿತವಾಗಿಯೂ ನಿರೂಪಿತವಾಗಿವೆ. ಈ ಕಥೆಗಳ ಆರಂಭದಲ್ಲಿ ಮತ್ತು ಅಂತ್ಯಗಳಲ್ಲಿ ವಾಸ್ತವಿಕ ನೆಲೆಯನ್ನು ಗುರುತಿಸಬಹುದಾದರೂ ಇಡೀ ಕಥೆ ಅದ್ಭುತ ಕಲ್ಪನೆಗಳಿಂದ ಕೂಡಿರುತ್ತದೆ. ಕುಂಟನ ಸಾಹಸ ಕಥೆಯಲ್ಲಿ ಕಥೆ ಆರಂಭವು ಒಂದೂರಿನಲ್ಲಿ ಒಬ್ಬ ರೈತ ಇದ್ದ. ಅವನಿಗೆ ಐದು ಜನ ಗಂಡುಮಕ್ಕಳು. ಒಬ್ಬಳೆ ಹೆಣ್ಣು ಮಗಳು. ಐದು ಜನ ಗಂಡುಮಕ್ಕಳಲ್ಲಿ ಕೊನೆಯವನು ಕುಂಟ. ಅವನನ್ನು ಕಂಡರೆ ಮನೆಯಲ್ಲಿ ತಾಯಿ-ತಂದೆ, ಅಣ್ಣಂದಿರು ಯಾರಿಗೂ ಆಗುತ್ತಿರಲಿಲ್ಲ. ತಂಗಿಗೆ ಮಾತ್ರ ಕುಂಟಣ್ಣನ ಮೇಲೆ ಬಹಳ ಪ್ರೀತಿ. ಅವನೂ ತಂಗಿಯನ್ನು ಪ್ರೀತಿಸುತ್ತಿದ್ದ. ಇದು ಇಂದಿಗೂ ಕೂಡ ನಮ್ಮ ಸಮಾಜದಲ್ಲಿ ಹಲವಾರು ಕುಟುಂಬಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಒಬ್ಬ ವ್ಯಕ್ತಿಯು ದೈಹಿಕವಾಗಿ ಊನವಾಗಿದ್ದಾಗ ಸಮಾಜದಲ್ಲಿ ಯಾವರೀತಿ ಅವಹೇಳನಕ್ಕೆ

ಒಳಗಾಗುತ್ತಾನೆ ಎಂಬುದನ್ನು ಈ ಕಥೆಯಲ್ಲಿ ಹೇಳುತ್ತದೆ. ಮತ್ತು ಕಥೆಯ ಅಂತ್ಯದಲ್ಲಿ ಬಲಹೀನರು, ಚಿಕ್ಕವಯಸ್ಸಿನವರೇ ಗೆಲ್ಲುವುದನ್ನು ಕಾಣಬಹುದು. ಇದು ಜನಪದ ಕಥೆಯ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿದೆ.

ಈ ಕಥೆಯಲ್ಲಿ ಅದ್ಭುತವಾದ ಕಲ್ಪನೆಯೊಂದಿಗೆ ಎಣೆದಿರುವುದನ್ನು ಕಾಣುತ್ತೇವೆ. ಅಣ್ಣ ತಂಗಿಯರ ಮಧ್ಯೆ ರಾಕ್ಷಸ ಎದುರಾಗುವುದು. ತಂಗಿಯನ್ನು ರಾಕ್ಷಸ ಅಪಹರಿಸಿದಾಗ ಕುಂಟನೇ ಅವಳನ್ನು ಕರೆತರಲು ಹೋಗುವುದು ಮತ್ತು ರಾಕ್ಷಸನನ್ನು ಎದುರಿಸಲು ಹೋಗುವ ದಾರಿಯಲ್ಲೇ ಅನೇಕ ವಸ್ತುಗಳನ್ನು ಜೊತೆಗೆ ತೆಗೆದುಕೊಂಡು ಹೋಗುವುದು (ಕತ್ತೆ, ಕಡಜ, ಹಲುಬೆ, ಬಾನಿ ಮುಂತಾದ ವಸ್ತುಗಳನ್ನು ತಂದಿರುವುದು) ಕಥೆಯ ಮುಂದಾಲೋಚನೆಯ ಸಂಕೇತವಾಗಿದೆ. ರಾಕ್ಷಸನನ್ನು ದೊಡ್ಡದೇಹದವನೆಂದು ಕಲ್ಪಿಸಿಕೊಂಡಿರುವುದು, ಅದರ ಸರಿಸಮಾನವಾಗಿ ರಾಕ್ಷಸನನ್ನು ಎದುರಿಸಲು ವಸ್ತುಗಳನ್ನು ತಂದಿರುವುದು ಅದ್ಭುತವಾದ ಕಲ್ಪನೆಯಾಗಿದೆ.

ಮಂಚದಮ್ಮನ ಕಥೆಯನ್ನು ರಾಜ ತನ್ನ ಹೆಂಡತಿಗೆ ಗಂಡು ಮಗುವಿಗೆ ಜನ್ಮ ನೀಡದಿದ್ದರೆ ಸಾವಿನ ಬೆದರಿಕೆಯ ಷರತ್ತು ಒಡ್ಡಿದಾಗ ಅವನ ಹೆಂಡತಿ ಕೊನೆಗೂ ಹೆಣ್ಣುಮಗುವಿಗೆ ಜನ್ಮನೀಡಿ ಬಾಳೆತೋಟದಲ್ಲಿ ಇಡುವುದು ಗಿಣಿಗಳು ಆ ಮಗುವನ್ನು ಸಾಕುವುದು, ಮತ್ತೆ ರಾಕ್ಷಸಿಯ ಪ್ರವೇಶವಾಗುವುದು, ಇಲ್ಲಿ ಪತಿವ್ರತೆಯ ಮತ್ತು ಸತ್ಯವಂತರ ಸನ್ನಿವೇಶಗಳು ಅದ್ಭುತವಾದ ಕಲ್ಪನೆಯನ್ನು ನೀಡುತ್ತವೆ. ತೂತು ಮಡಕೆಯಲ್ಲಿ ನೀರು ತುಂಬುವುದು, ಎಳ್ಳು-ಜೀರಿಗೆಯನ್ನು ಬೇರೆಮಾಡುವುದು, ಈ ಬಗೆಯ ಅಸಾಧ್ಯವಾದ ಕೆಲಸಗಳು ಕೂಡ ಸಾಧ್ಯವಾಗುತ್ತವೆ. ಜನಪದರಲ್ಲಿ ಅನೈತಿಕತೆಗೆ ಆಸ್ಪದವಿಲ್ಲ. ಪತಿವ್ರತೆಯರು, ಸತ್ಯವಂತರು ಮೊದಲು ಸೋತ ನಂತರ ಗೆಲುವು ಪಡೆಯುವುದು ಈ ಕಥೆಗಳ ಸ್ವರೂಪವಾಗಿದೆ.

ಈ ಕಥೆಗಳು ತುಂಬಾ ಕಲಾತ್ಮಕವಾಗಿದ್ದು, ನಿರೂಪಣೆ ಲಯಬದ್ಧವಾಗಿ ಮಿಡಿಯುತ್ತಿರುತ್ತದೆ. ಧೀರಕುಮಾರ ಕಥೆಯಲ್ಲಿ, ರಾಜನು ಕಾಡಿನಲ್ಲಿ ರಾಕ್ಷಸಿಯೊಬ್ಬಳ ಪ್ರಭಾವಕ್ಕೆ ಒಳಗಾಗುವುದು ಅವಳು ಸುಂದರ ಹೆಣ್ಣಾಗಿ ರಾಜನು ಅವಳನ್ನು ವಿವಾಹವಾಗಿ ರಾತ್ರಿಯಲ್ಲಿ ರಾಕ್ಷಸಿ ಅರಮನೆಯ ಕುದುರೆಗಳನ್ನು ತಿಂದು ಹಾಕುವುದು. ರಾಜನ ಹೆಂಡತಿಯರ ಏಳುಜನರ ಕಣ್ಣನ್ನು ಕೀಳಿಸುವುದು. ರಾಣಿಯರು ತಮ್ಮ ಮಕ್ಕಳನ್ನೇ ಆಹಾರವಾಗಿ ತಿನ್ನುವುದು, ಕೊನೆಯರಾಣಿಯು ಮಗನನ್ನು ತಿನ್ನದೆ ಉಳಿಸಿಕೊಂಡು ಅವನಿಂದ ಎಲ್ಲರೂ ಆಹಾರ ಪಡೆಯವರು. ರಾಕ್ಷಸಿಗೆ ರಾಜಕುಮಾರ ಕಾಣಿಸಿಕೊಂಡು ಅವನನ್ನು ಕೊಲ್ಲಲು ಅನೇಕ ಸಾಹಸ ಕಾರ್ಯಗಳನ್ನು ಅವನಿಗೆ ಹೇಳುವುದು. ಹುಲಿಯ ಹಾಲನ್ನು ತರುವಂತೆ ಹೇಳುವುದು, ರಾಕ್ಷಸಿಯು ರಾಜಕುಮಾರನನ್ನು ಕೊಂದು ಬಿಡುವಂತೆ ಒಂದು ಪತ್ರವನ್ನು ಬರೆದು ರಾಕ್ಷಸನಾಡಿಗೆ ಕಳುಹಿಸುವುದು ಹೀಗೆ ಕಲಾತ್ಮಕವಾಗಿ ಕಥೆ ಎಣೆಯಲ್ಪಟ್ಟಿದೆ.

ರಾಕ್ಷಸಿ ಏಳಂತಸ್ತಿನ ಮಹಡಿ ಮೇಲೆ ಕೇಳಿದಳು

"ಬಂದೇನೋ ಮುಲ್ಲ?"

"ಬಂದೇ ಕಣೇ ಕತ್ತೆರಂಡೆ !"

"ಸಂಪಿಗೆ ಹೂವಿನ ಹೆಣ್ಣು ತಂದೇನೋ ಮುಲ್ಲಾ ?"

"ತಂದೇ ಕಣೆ ಕತ್ತೆರಂಡೆ !"

"ಇವೆಲ್ಲ ಒಂದು ಗಂಡಸ್ತನವಲ್ಲ. ನಾನೊಂದು ಕಾಗದ ಬರೆದುಕೊಡುತ್ತೀನಿ ನಮ್ಮ ಅಕ್ಕನ ಹತ್ತಿರ ಹೋಗಿ ನಾನು ಹೇಳಿದ್ದ ತೆಗೊಂಡು ಬಾ"

ಈ ಮೇಲಿನ ಮಾತುಗಳು ಲಯಬದ್ಧವಾಗಿ ಮಿಡಿಯುವ ನಿರೂಪಣೆಯನ್ನು ತಿಳಿಸುತ್ತದೆ. ಈ ಕಥೆಗಳಲ್ಲೆಲ್ಲ ಸಾಮಾನ್ಯ ವೀರನೊಬ್ಬ ಅನೇಕ ಅತಿಮಾನುಷ ಅಡಚಣೆಗಳನ್ನು ಎದುರಿಸಿ, ಕಲ್ಪನೆಯ ಜಗತ್ತಿನಲ್ಲಿ ಸಾಹಸಗಳನ್ನು ಮಾಡಿ, ರಾಜ್ಯಗಳನ್ನು ಗೆದ್ದು ರಾಜಕುಮಾರಿಯನ್ನು ವರಿಸುತ್ತಾನೆ. ಇವು ದೇಶದಿಂದ ದೇಶಕ್ಕೆ ಬಹು ಸಂಖ್ಯೆಯಲ್ಲಿ ಪ್ರಯಾಣ ಮಾಡಿವೆ. ಇವುಗಳಲ್ಲಿ ಪ್ರಾಚೀನ, ಮಧ್ಯಕಾಲೀನ ಮತ್ತು ಸಮಕಾಲೀನ ಸಂಸ್ಕೃತಿಯ ಅನೇಕ ವಿಷಯಗಳನ್ನು ಕಾಣುತ್ತೇವೆ. ಆದ್ದರಿಂದ ಇವುಗಳು ಸಂಸ್ಕೃತಿಯ ಅಧ್ಯಯನಕ್ಕೆ ಉತ್ತಮ ದಾಖಲೆಯಾಗಿವೆ. ಜನಪದ ಕಥೆಯ ಸಮಸ್ತ ಲಕ್ಷಣಗಳನ್ನು ಅತ್ಯಂತ ಸಮರ್ಥವಾಗಿ ಪ್ರತಿಬಿಂಬಿಸುವಲ್ಲಿ ಕಟ್ಟುಕತೆಗಳು ಬಹುಮುಖ್ಯವೆನಿಸುತ್ತವೆ.

ಪ್ರಸ್ತುತ ಅಧ್ಯಯನದಲ್ಲಿ ಸರಳ ಕಥೆಗಳ ಪಾತ್ರವೂ ಬಹಳ ದೊಡ್ಡದಾಗಿದೆ. ವಿಶ್ವದ ಎಲ್ಲ ದೇಶಗಳ ಕಥಾಸಾಗರದಲ್ಲಿ ಅಪಾರ ಸಂಖ್ಯೆಯ ಸರಳ ಕಥೆಗಳು ಲಭ್ಯವಾಗುತ್ತವೆ. ಹಾಗೆಯೇ ಜೀ.ಶಂ.ಪ. ಅವರ ಕನ್ನಡ ಜನಪದ ಕಥೆಗಳು ಸಂಕಲನದಲ್ಲಿ ಸರಳ ಕಥೆಗಳು ಬಹುಮುಖ್ಯವಾಗುತ್ತವೆ. ಬಹುಮಟ್ಟಿಗೆ ಕಡಿಮೆ ಆಶಯಗಳ ಪಟ್ಟಿಯಲ್ಲಿ ಒಂದೋ ಎರಡೊ ಅಥವಾ ಮೂರೋ ಆಶಯಗಳ ಮೇಲೆ ಈ ಕಥೆಗಳು ನಿಲ್ಲುತ್ತವೆ. ಬಹುಪಾಲು ಪ್ರಾಣಿಕಥೆಗಳು, ವಿನೋದ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ನೀತಿಕಥೆಗಳು ಈ ಗುಂಪಿನಲ್ಲಿ ಬರುತ್ತವೆ. ಮೋಸ ವಂಚನೆಗೆ ಸಂಬಂಧಿಸಿದ ಲೈಂಗಿಕ ವಿಷಯಗಳಿಗೆ ಸಂಬಂಧಿಸಿದ, ಆಂಗಿಕ ದೋಷಗಳಿಗೆ ಸಂಬಂಧಿಸಿದ ವಿಷಯಗಳೂ ಸರಳ ಕಥೆಗಳ ವಸ್ತುವಾಗಬಹುದು.

ಈ ಸಂಕಲನದ 'ಕಾಗಕ್ಕ ಗುಬ್ಬಕ್ಕ ಕಥೆ', 'ಹುಲಿಯನ್ನು ಹೆದರಿಸಿದ ಕತ್ತೆ' 'ಘಟ್ಟಕ್ಕೋತಾವು', 'ನಾಮದ ಮಹಿಮೆ', 'ಎಲ್ಲರಿಗೂ ತೋಟ ದೂರ' ಮತ್ತು ಗುಳ್ಳೆನರಿ ಕಥೆಗಳು ಸರಳ ಕಥೆಗಳಿಗೆ ಅತ್ಯುತ್ತಮ ಉದಾಹರಣೆಯಾಗಿವೆ. ಗುಳ್ಳೆನರಿ ಕಥೆಯಲ್ಲಿ ಎರಡು ಸರಳ ಕಥೆಗಳು ಬೆರೆತು ಒಂದೇ ಕಥೆಯ ಸ್ವರೂಪವನ್ನು ಪಡೆದುದನ್ನು ಕಾಣಬಹುದು. ನಳ್ಳಿಯ ಮೊಟ್ಟೆಯನ್ನು ತಿನ್ನುತ್ತಿದ್ದ ನರಿ, ನಳ್ಳಿಗೆ ಮೊದಲ ಬೇಟೆಗಾರನಿಗೆ ಸಿಕ್ಕಿಯೂ ಹೇಗೆ ಕೈಕೊಟ್ಟು ತಪ್ಪಿಸಿಕೊಂಡಿತು ಎಂಬುದು ಒಂದು ಸ್ವತಂತ್ರ ಕಥೆ, ತೋಟದ ಹುಡುಗನ ಬಳಿ ಹೋಗಿ ಅವನನ್ನು ಎದುರಿಸಿ ತೋಟಗಾರನ ದಂಡನೆಗೆ ತುತ್ತಾಗಿ, ಕಾಳಗಟ್ಟಮ್ಮನ

ಪರವನ್ನು ಮಾಡಿ ನರಿಗಳನ್ನೆಲ್ಲ ಮೋಸಗೊಳಿಸಿದ ನರಿಯ ಕಥೆಯು ಬಯಲು ಸೀಮೆಯಲ್ಲಿ ವಿಶೇಷವಾಗಿ ಪ್ರಚಾರದಲ್ಲಿರುವ ಸುಂದರವಾದ ಕಥೆಯಾಗಿದೆ. ಈ ಎರಡೂ ಕಥೆಯನ್ನು ಅತ್ಯಂತ ಜಾಣ್ಮೆಯಿಂದ ಕಥೆಗಾರ ಬೆಸೆದು ಒಂದು ಸಂಕೀರ್ಣ ಕಥೆಯ ವ್ಯಾಪ್ತಿಯನ್ನು ತಂದಿದ್ದಾನೆ.

ನಾಮದ ಮಹಿಮೆ ಕಥೆಯಲ್ಲಿ ಬಡವನೊಬ್ಬ ತನ್ನ ಬಡತನವನ್ನು ನೀಗಿಕೊಳ್ಳಲು ಹರಿಕಥೆಯವನ ಮಾತುಕೇಳಿ ನಾಮನೋಡುವುದು, ಕುಂಬಾರನು ಮಣ್ಣು ತೆಗೆಯುವಾಗ ಹಣಸಿಕ್ಕಿ ಅದನ್ನು ತೆಗೆಯುವಾಗ ಬಡವ ಬಂದು ಅವನ ನಾಮ ನೋಡಿ, ನೋಡಿದೆ! ಎಂದು ಕೂಗಿದಾಗ ನನ್ನ ಗುಟ್ಟು ಬಯಲಾಯಿತಲ್ಲಾ ಎಂದು ತಿಳಿದು ನಾಮನೋಡಿದರೂ ನಮ್ಮ ಹಣ ನೋಡಿದ್ದಾನೆ ಎಂದು ಅವನಿಗೂ ಅರ್ಧಭಾಗ ಕೊಡುವುದು ಇದರಿಂದ ಬಡವ ತನ್ನ ಕಷ್ಟವನ್ನೆಲ್ಲ ತೀರಿಸಿಕೊಳ್ಳುತ್ತಾನೆ.

'ಎಲ್ಲರಿಗೂ ತೋಟ ದೂರ' ಕಥೆಯಲ್ಲಿ ಒಬ್ಬ ರೈತ ಆತನ ತಾಯಿ ಅವನ ಹೆಂಡತಿ, ಅವನ ಮಗಳು ಈ ನಾಲ್ಕು ಜನರನ್ನು ಮತ್ತು ಆಸೆಗಳನ್ನು ಒಬ್ಬರಿಗೊಬ್ಬರು ಹೇಗೆ ಹೇಳಿಕೊಳ್ಳುತ್ತಾರೆ ಎಂಬುದನ್ನು ಬುದ್ಧಿವಂತಿಕೆಯಿಂದ ಸರಳವಾಗಿ ಕಥೆಗಾರ ಹೆಣೆದಿದ್ದಾನೆ. ರೈತ ತನ್ನ ಆಸೆಯನ್ನು ಹೆಂಡತಿಯ ಹತ್ತಿರ ಹೆಂಡತಿ ತನ್ನ ಮಗಳ ಹತ್ತಿರ, ಮಗಳು ತನ್ನ ಅಜ್ಜಿಯ ಹತ್ತಿರ ಹೇಳಿಕೊಳ್ಳುವುದರಲ್ಲಿ ಕಥೆ ಮುಕ್ತಾಯವಾಗುತ್ತದೆ. ಇಲ್ಲಿ ಕಥೆಯು ಅತಿ ಸರಳವಾಗಿ ಮುಕ್ತಾಯವಾಗುತ್ತದೆ.

ಸರಳ ಕಥೆಗಳ ವಸ್ತು ಸರಳವಾದುದು. ವಿನೋದಾತ್ಮಕವಾದುದು ತಂತ್ರವು ನೇರವಾದುದು ಎಂದು ಹೇಳಿದರೂ ಅನೇಕ ಸಂದರ್ಭದಲ್ಲಿ ಸರಳ ಕಥೆಗಳಿಗೂ, ಸಂಕೀರ್ಣ ಕತೆಗಳಿಗೂ ಗೆರೆ ಎಳೆದಂತೆ ವ್ಯತ್ಯಾಸವನ್ನು ಗುರುತಿಸುವುದು ಕಷ್ಟವಾಗುತ್ತದೆ. ಏಕಮುಖವಾದ ಆಶಯಗಳು ಎಷ್ಟು ಉದ್ದಕ್ಕಾದರೂ ಬೆಳೆಯುವ ಸಾಧ್ಯತೆ ಇರುತ್ತದೆ. ಹೆಡ್ಡರ ಕತೆಗಳು ಹೀಗೆ ಎಷ್ಟು ದೀರ್ಘವಾದರೂ ಬೆಳೆದು ನಿಲ್ಲಬಹುದು. ಇತರರನ್ನು ಮೋಸಗೊಳಿಸುವ, ಅಥವಾ ದಡ್ಡತನವನ್ನು ಪ್ರದರ್ಶಿಸುವ ಅನೇಕ ಘಟನೆಗಳು ಒಂದಕ್ಕೊಂದು ಕೊಂಡಿಯಾಗಿ ಸೇರಿಕೊಳ್ಳಬಹುದು. ಜಾತ್ರೆಗೆ ಹೋದ ಶೂರರು. ಕೊಂಗನಹಳ್ಳಿ ದಾಸಯ್ಯ, ಅಳ್ಳಣ್ಣ ಬುಳ್ಳಣ್ಣ ಸುಳ್ಳಣ್ಣ, ಮಂಜುಗಣ್ಣಿನ ಮಾಯಣ್ಣ ಮುಂತಾದ ಕಥೆಗಳು ಸರಳ ಕಥೆಗಳಾದರೂ ಸಂಕೀರ್ಣ ಕಥೆಗಳ ವ್ಯಾಪ್ತಿಯನ್ನೇ ಪಡೆದುಕೊಳ್ಳುತ್ತವೆ.

ಸರಳ ಕಥೆಗಳಲ್ಲಿ ಸೂತ್ರಕಥೆಗಳು ಮತ್ತೊಂದು ವಿಶಿಷ್ಟ ಅಂಗವಾಗಿ ಬರುತ್ತವೆ. ಇಲ್ಲಿ ಕಥಾ ರೂಪ ಮಾತ್ರ ಮುಖ್ಯವಾದುದು. ವಸ್ತು ಸರಳವಾಗಿದ್ದು ಅತ್ಯಂತ ಜಾಣ್ಮೆಯಿಂದ ಬೆಳೆಸಿಕೊಂಡು ಹೋಗುವುದು ಈ ಕಥೆಗಳ ಮುಖ್ಯ ತಂತ್ರ. ಕಥೆಯಲ್ಲಿ ಏನಾಗುತ್ತದೆ ಎನ್ನುವುದಕ್ಕಿಂತ ಕಥೆಗಾರ ಮೆರೆಯುವ ಚಮತ್ಕಾರವೇ ಗಮನಾರ್ಹವಾದುದು. ಒಂದೇ ಬಗೆಯ ಘಟನೆಗಳನ್ನೋ ಕೆಲವು ಪದ್ಯಗಳನ್ನೋ ಮಾತ್ರ ಬದಲಿಸುತ್ತ ಒಂದೇ ಬಗೆಯ ಘಟನಾವಳಿಗಳನ್ನು ಚಿತ್ರಿಸುತ್ತ ಕಥೆ ಅಂತ್ಯವನ್ನು ತಲುಪುತ್ತದೆ. ಅನೇಕ ವೇಳೆ ನಿರ್ದಿಷ್ಟ ನೆಲೆಯಿಂದ ಆರಂಭವಾದ ಕ್ರಿಯೆ ಒಂದು ಗುರಿಯನ್ನು ಮುಟ್ಟಿ ಮತ್ತೆ ಹೊರಟ ಸ್ಥಳವನ್ನೇ ಎಂದಿನಂತೆಯೇ ಬಂದು ಸೇರಿ ಅಲ್ಲಿ ಐಕ್ಯವಾಗುತ್ತದೆ. ಪ್ರಸ್ತುತ ಸಂಕಲನ 'ಗಿಳಿಯ ಮರಿ' ಹೊರಟ ನೆಲೆಗೆ ಬಂದು ಸೇರುವ ಕಥೆಗಳಲ್ಲಿ ಉತ್ತಮವಾದುದು.

ಹಲವಾರು ಆಶಯಗಳಿಂದ ಕೂಡಿರುವ ಸಂಕೀರ್ಣ ಕಥೆಗಳು ಸಾಕಷ್ಟು ದೀರ್ಘವಾಗಿರುತ್ತವೆ. ಪ್ರಸ್ತುತ ಅಧ್ಯಯನ ಸಂಕಲನದ ಸಂಕೀರ್ಣ ಕಥೆಗಳಲ್ಲಿ ಒಂದಲ್ಲ ಒಂದು ಬಗೆಯ ಕಷ್ಟ ಪರಂಪರೆ ನಾಯಕ ಅಥವಾ ನಾಯಕಿಯ ಪಾಲಿಗೆ ಮೀಸಲಾದುದು. ತನ್ನ ಗುರಿಯನ್ನು ಸಾಧಿಸಿಕೊಳ್ಳಲು ಅನೇಕ ವಿರುದ್ಧ ಶಕ್ತಿಗಳನ್ನು ಅವರು ಎದುರಿಸಬೇಕಾಗುತ್ತದೆ. ಬಹುತೇಕ ಎಲ್ಲ ಕಡೆಗಳಲ್ಲೂ ಅತಿಮಾನುಷ ವಿರೋಧಿಗಳು, ನಾಯಕ ಅಥವಾ ನಾಯಕಿಗೆ ಎದುರಾಗುತ್ತಾರೆ. ಅಂಥ ಅತಿಮಾನುಷ ಶಕ್ತಿಗಳು ರಾಕ್ಷಸರಾಗಿರಬಹುದು. ಯಾವುದೋ ದುಷ್ಟ ಜಂತುಗಳಾಗಿರಬಹುದು. ದೆವ್ವಗಳಾಗಿರಬಹುದು. ಮಾಟಗಾತಿಯರು ಈ ಗುಂಪಿಗೆ ಸೇರುತ್ತಾರೆ. ನಾಯಕ ಅಥವಾ ನಾಯಕಿ ಈ ವಿರೋಧಿಗಳ ನೆಲೆಗೆ ಹೋಗಿ ಅವರಲ್ಲಿನ ಯಾವುದೋ ಅಪೂರ್ವ ವಸ್ತುವನ್ನು ತರಬೇಕಾಗಬಹುದು. ಆ ಸಂದರ್ಭದಲ್ಲಿ ಅನೇಕ ಪ್ರಾಣಿಗಳೂ, ಪಕ್ಷಿಗಳೂ ಸಹಾಯಕರಾಗಿ ನಿಲ್ಲುತ್ತಾರೆ. ನಾಯಕನ ಪಾಲಿಗೆ ವಿರೋಧಿಯ ಸಾಕುಮಗಳೋ, ನಿಜವಾದ ಮಗಳೋ ತಾನೇ ನೇರವಾಗಿ ವಿರೋಧಿಯ ಜೊತೆ ಹೋಗಿ ಗೆಲ್ಲುವ ಪ್ರಸಂಗಗಳು ವಿರಳ. ಆದರೆ ತಂತ್ರದಿಂದಲೋ ಇತರ ಸಹಾಯಕರ ನೆರವಿನಿಂದಲೋ ಅವನು ಗೆದ್ದು ಬರುತ್ತಾನೆ. ಸಾಹಸವನ್ನು ಮೆರೆದ ಪ್ರಸಂಗಗಳು ಬರುತ್ತವೆ. ಅತಿಮಾನುಷ ವಿರೋಧಿಗಳು ಒಂದೇ ಕಥೆಯಲ್ಲಿ ಹಲವು ಮಂದಿ ಕಾಣಿಸಿಕೊಳ್ಳಬಹುದು. ಅಥವಾ ಒಬ್ಬನೇ ವಿರೋಧಿ ನಾಯಕನಿಗೆ ದೊಡ್ಡ ಸವಾಲಾಗಿ ನಿಲ್ಲಬಹುದು. ಇಂಥ ಸಂದರ್ಭಗಳಲ್ಲಿ ನಾಯಕ ತಾನೆಸಗಿದ ಉಪಚಾರದಿಂದಲೋ, ಪಡೆದ ಮಾಂತ್ರಿಕ ವಸ್ತುವಿನಿಂದಲೋ, ತಾನು ಸಹಾಯಕರಾಗಿ ಪಡೆದ ಪ್ರಾಣಿ ವಿಶೇಷಗಳಿಂದಲೋ ಅನೇಕ ಅದ್ಭುತಗಳನ್ನು ಮೆರೆದು ಅತಿಮಾನುಷ ಶಕ್ತಿಗಳನ್ನು ಮಣಿಸುವುದು ಜನಪದ ಕಥೆಯಲ್ಲಿ ಹೇರಳವಾಗಿ ಬರುತ್ತವೆ.

ಅತಿಮಾನುಷ ಕಥೆಗಳಲ್ಲಿ ವಿರೋಧಿಗಳಂತೆಯೇ ಅತಿಮಾನುಷ ಸಹಾಯಕರು ಹೆಚ್ಚಾಗಿಯೇ ಇರುತ್ತಾರೆ. ನಾಯಕ ಅಥವಾ ನಾಯಕಿಯ ಕಷ್ಟದ ಸಂದರ್ಭಗಳಲ್ಲಿ ಯಾವುದೋ ಅಗೋಚರ ಶಕ್ತಿಯೋ, ದೇವಕನ್ಯೆಯರೋ, ತೀರಿಕೊಂಡ ಕೃತಜ್ಞ ವ್ಯಕ್ತಿಗಳೋ, ಅತಿಶಯದ ಜೊತೆಗಾರರೋ, ಸಹಾಯಕ ಪ್ರಾಣಿಗಳೋ, ರಾಕ್ಷಸರೋ, ದೆವ್ವಗಳೋ ನೆರವಾಗಬಹುದು.

ಪ್ರೇಮಿಗಳು ಮತ್ತು ದಂಪತಿಗಳಿಗೆ ಸಂಬಂಧಿಸಿದ ಕತೆಗಳು ಒಂದು ಪ್ರತ್ಯೇಕ ವಿಭಾಗವಾಗಿ ಈ ವರ್ಗದಲ್ಲಿಯೇ ಪರಿಗಣಿಸಲ್ಪಡುತ್ತವೆ. ನಾಯಕ ಅತಿಮಾನುಷ ಸುಂದರಿಯನ್ನು ಮೋಹಿಸಿ ಅವಳನ್ನು ಪಡೆಯಲು ಅನೇಕ ರೀತಿಯಲ್ಲಿ ಹೆಣಗಬೇಕಾಗುತ್ತದೆ. ನಾಯಕಿ ಅತಿಮಾನುಷ ಪತಿಯನ್ನು ವರಿಸಿ ಅವನನ್ನು ಉಳಿಸಿಕೊಳ್ಳಲು ಅನೇಕ ಬಗೆಯಲ್ಲಿ ಪ್ರಯತ್ನಶೀಲಳಾಗುತ್ತಾಳೆ. ಪತಿ ಪತ್ನಿಯರು ಪರಸ್ಪರ ಅಗಲಿ ಎಷ್ಟೋ ಕಷ್ಟಪರಂಪರೆಗಳನ್ನು ಅನುಭವಿಸಿ ಮತ್ತೆ ಜೊತೆಗೆ ಸೇರುವ ಸಂದರ್ಭಗಳು ಈ ಮಾಲೆಯಲ್ಲಿ ಕಾಣಬರುತ್ತವೆ.

ನಾಯಕ ಅಥವಾ ನಾಯಕಿ ಕಷ್ಟವಾದ ಅನೇಕ ಕಾರ್ಯಗಳನ್ನು ಗೆದ್ದು ಜಯವನ್ನು ಪಡೆಯುವ ಕತೆಗಳು ಸಾಹಸ ಕತೆಗಳ ಗುಂಪಿನಲ್ಲಿ ಬರುತ್ತವೆ. ಅನೇಕ ಸಂದರ್ಭಗಳಲ್ಲಿ ನಾಯಕ ನಿಶ್ಚಿತ ಗುರಿಯಿಲ್ಲದೆಯೇ ಸಾಹಸಗಳಲ್ಲಿ ತೊಡಗಬಹುದು. ತನ್ನ ನೆಚ್ಚಿನ ರಾಜಕುಮಾರಿಯನ್ನು ಪಡೆಯುವುದೊಂದೇ ಅವನ

ಉದ್ದೇಶವಲ್ಲದಿರಬಹುದು. 'ಹೂ ಕೊಟ್ಟ ಚದುರೆ' ಕತೆಯಲ್ಲಿ ನಾಯಕಿಯನ್ನು ಪಡೆಯಲು ಅನೇಕ ಸಾಹಸಮಯ ಕಾರ್ಯಗಳನ್ನು ಮಾಡುವುದು ತನ್ನ ಪ್ರೇಯಸಿಗಾಗಿ ಎಂಬುದು ಸತ್ಯವಾದರೂ ಧೀರಕುಮಾರ ಕತೆಯಲ್ಲಿ ನಾಯಕ ತನ್ನ ತಾಯಿಗಾದ ಅನ್ಯಾಯವನ್ನು ಸರಿಪಡಿಸಲು ಹಲವು ಸಾಹಸಕಾರ್ಯಗಳಲ್ಲಿ ತೊಡಗುತ್ತಾನೆ. ನಂತರ ತನ್ನ ಪ್ರಿಯತಮೆಯನ್ನು ಪಡೆಯುತ್ತಾನೆ.

ಭಯ ಎಂದರೇನು? ಎಂದು ಅರಿಯಲು ಹೊರಟ ಯುವಕನೊಬ್ಬ ಕೆಲವು ಭಯಂಕರ ಅನುಭವಗಳನ್ನು ಪಡೆದ ಕತೆ ಅಪೂರ್ವವಾದುದು. ನಾಯಕ ಭಯ ಎಂದರೇನು ಎಂಬುದನ್ನು ಕೇಳಿದ್ದ. ಆದರೆ ಅದನ್ನು ಅನುಭವಿಸಿರಲಿಲ್ಲ. ಭಯದ ಅನುಭವವನ್ನು ಪಡೆಯಲು ಅದನ್ನು ಅರಸಿಕೊಂಡೇ ಅವನು ಹೊರಟ. ಅನೇಕ ಅಪಾಯಕಾರಿ ಕಾರ್ಯಗಳಲ್ಲಿ ಅವನು ವಿಚಿತ್ರ ಅನುಭವಗಳನ್ನು ಪಡೆದ. ದೆವ್ವದ ಜೊತೆಯಲ್ಲಿ ಇಸ್ಪೀಟು ಆಟ ಆಡುವುದು ಇತ್ಯಾದಿಗಳಿಂದ ತನ್ನ ಸಾಹಸಕಾರ್ಯ ಮುಗಿಸಿ ಕೊನೆಗೆ ಪ್ರೇಯಸಿಯನ್ನು ಪಡೆಯುವುದು ಅಂತ್ಯವಾಗುತ್ತದೆ. ಇಂಥ ಕಥೆಗಳ ಜೊತೆಗೆ ಅತಿಮಾನುಷ ಪ್ರಭಾವವಿಲ್ಲ. ಅನೇಕ ಕಥೆಗಳು ಈ ಗುಂಪಿನಲ್ಲಿ ಬರುತ್ತವೆ. ಇತರರು ಒಡ್ಡುವ ಪರೀಕ್ಷೆಗಳಲ್ಲಿ ಅನೇಕ ಸಾಹಸಗಳನ್ನು ನೆರೆದು ಗೆದ್ದು ಬರುತ್ತಾರೆ.

ನೀತಿಕತೆಗಳು ಪ್ರಸ್ತುತ ಕಥಾಸಂಕಲನದಲ್ಲಿ ಬಹುಮುಖ್ಯವಾದ ಸ್ಥಾನಪಡೆಯುತ್ತವೆ. ಇವು ಜನಪದ ಕಥೆಗಳ ಬಹುಮುಖ್ಯ ಉದ್ದೇಶ ಮತ್ತು ಗುರಿಯಾಗಿವೆ. ನೀತಿಕಥೆಗಳು ಎಂಬ ಮತ್ತೊಂದು ವರ್ಗದ ಕಥೆಗಳನ್ನು ಪ್ರತ್ಯೇಕವಾಗಿ ವಿಂಗಡಿಸದಿದ್ದರೂ ಈ ಸಂಕಲನದ ಬಹುಭಾಗ ಕಥೆಗಳು ನೀತಿಕಥೆಗಳೇ ಆಗಿವೆ. ಬಾಗ್ಸ್ ಅವರ ವಿಭಜನೆಯಲ್ಲಿ ನೀತಿಕಥೆಗಳಿಗೆ ಪ್ರತ್ಯೇಕವಾದ ಸ್ಥಾನವಿಲ್ಲ. ಜನಪದ ಕಥೆಗಳಲ್ಲಿ ಇವುಗಳ ಸಂಖ್ಯೆ ಕಡಿಮೆಯಾದುದರಿಂದ ಕಟ್ಟು ಕಥೆಗಳಲ್ಲಿಯೇ ಅವನ್ನು ಸೇರಿಸುವುದು ಸಾಧ್ಯವಾಗಿದೆ. ಸಾಮಾನ್ಯವಾಗಿ ನೀತಿಕಥೆಗಳಲ್ಲಿ ಪ್ರಾಣಿಪಾತ್ರ ಪ್ರಾಚುರ್ಯವೇ ಹೆಚ್ಚು. ಮಾನವರಂತೆ ವರ್ತಿಸುವ ಪ್ರಾಣಿಪಾತ್ರಗಳು ಯಾವುದೋ ಕ್ರಿಯೆಯಲ್ಲಿ ಭಾಗವಹಿಸಿದರು ನೀತಿಯ ಕಡೆ ಯೋಜಿಸಲ್ಪಟ್ಟಿರುತ್ತವೆ. ಕಥನಕ್ರಿಯೆ ನೀತಿಯತ್ತ ಸಾಗುವುದು ಕೊನೆಯಲ್ಲಿ ಸೂತ್ರಪ್ರಾಯ ವಾಸ್ಯವೊಂದರಲ್ಲಿ ನೀತಿ ನಿಲ್ಲುವುದು ಈ ಕಥೆಯ ಎರಡು ಪ್ರಧಾನ ಅಂಶಗಳಾಗಿವೆ. ನೀತಿಕಥೆಗಳೆಲ್ಲ ಮೊದಲಿಗೆ ಪ್ರಾಣಿಕತೆಗಳೇ ಆಗಿದ್ದವು. ಪ್ರಾಣಿಗಳ ಗುಣವಿಶೇಷಗಳನ್ನು ವಿವರಿಸುವ ಹಿನ್ನೆಲೆಯಲ್ಲಿ ಸೃಷ್ಟಿಯಾದ ಅವುಗಳನ್ನು ಕ್ರಮೇಣ ಮಾನವರಿಗೆ ನೀತಿಬೋಧಕ ಸಾಧನವನ್ನಾಗಿ ಮಾರ್ಪಡಿಸಿಕೊಳ್ಳಲಾಯಿತು.

ನೀತಿಯನ್ನೊಳಗೊಂಡ ಪ್ರಾಣಿಕಥೆ ನೀತಿಕಥೆ ಎನಿಸುತ್ತದೆ. ನೀತಿ ಕಥೆ ಸಂಪೂರ್ಣವಾಗಿ ಪ್ರಾಣಿಕಥೆಯೇ ಆಗಿದ್ದು ಅದರ ಸಾರವಾದ ನೀತಿಯನ್ನು, ಕೊನೆಯ ಒಂದೆರಡು ವಾಕ್ಯಗಳಲ್ಲಿ ನಿರೂಪಿಸುವುದು ಇವುಗಳ ವಿಶೇಷ. ಈ ಕಥೆಗಳ ಮುಖ್ಯ ಉದ್ದೇಶ ನೀತಿರೂಪಣೆ. ಪ್ರಾಣಿ ಕಥೆಗಳಲ್ಲಿರುವ ಪ್ರಾಣಿಪಾತ್ರಗಳು ಮಾನವನ ವಿಡಂಬನೆಗೆ ಹಾಗೂ ಆದರ್ಶ ಗುಣಗಳಿಗೆ ಮಾದರಿಯಾಗಿ ನಿಲ್ಲುವುದರಿಂದ ಇವು ನೀತಿಕಥಾ ಸಾಹಿತ್ಯ ರಚಕರಿಗೆ ಬಹು ಉಪಯುಕ್ತ ಸಾಮಗ್ರಿಯಾಗುತ್ತವೆ.

ನೀತಿ ಬೋಧೆಗಾಗಿಯೇ ಕೆಲವು ನೀತಿಕಥೆಗಳು ಜನಪದರಲ್ಲಿ ಸೃಷ್ಟಿಯಾಗಿವೆ. ಆದರೆ ಅವು ಪ್ರಾಣಿಕತೆಗಳಲ್ಲಿ ಜನಪದ ಜೀವನದ ಮೌಲ್ಯಗಳನ್ನು ನಿರೂಪಿಸುವುದಕ್ಕಾಗಲಿ ಇರುವ ಅವು, ತುಂಬ ಸಂಕ್ಷಿಪ್ತ ಹಾಗೂ ಸರಳವಾಗಿದ್ದು ದೈನಂದಿನ ಮಾನವ ಸ್ವಭಾವಗಳ ವರ್ತನೆಗಳ ಹಿನ್ನೆಲೆಯಲ್ಲೇ ನೀತಿಯನ್ನು ನಿರೂಪಿಸುತ್ತವೆ.

೩.೩.ಲಕ್ಷಣಗಳು

ಜಗತ್ತಿನಾದ್ಯಂತ ಕಥೆಗಳನ್ನು ಹೇಳುವ ಪರಿಪಾಠವಿದೆ. ಇದೊಂದು ಪ್ರಜ್ಞಾಪೂರ್ವಕ ಮನರಂಜನಾ ಕಲೆ. ಸಾಮಾಜಿಕವಾಗಿ, ಧಾರ್ಮಿಕವಾಗಿ ಕಥೆ ಕೆಲವೊಮ್ಮೆ ಪಾತ್ರವಹಿಸಿದರೂ ಅಪ್ಪಟ ಮನರಂಜನೆಯೇ ಇದರ ಮುಖ್ಯ ಉದ್ದೇಶ. ವಯಸ್ಸಿನ ಸ್ಥಾನದ ಪರಿವೇ ಇಲ್ಲದೆ ಕಥೆಗಳು ಎಲ್ಲರಿಗೂ ಬೇಕಾದ, ಕುತೂಹಲ ಕೆರಳಿಸುವ ಸಾಧನಗಳಾಗಿವೆ. ಕಥೆಗಳು ಮಕ್ಕಳಿಗೆ ಮಾತ್ರ ಎಂಬುದು ತಪ್ಪು ತಿಳುವಳಿಕೆ. ಅಡಗಿಕೊಂಡು ಕಥೆ ಕೇಳುವ ಮಕ್ಕಳನ್ನು ಹಾಲೆಂಡ್ ದೇಶದ 'ಸಾರಾ' ಎಂಬಲ್ಲಿ ಹಿರಿಯರು ಹೊರಗೆ ಓಡಿಸುತ್ತಾರಂತೆ. ಕೆಲವು ದೇಶಗಳಲ್ಲಿ ಒಂದು ಕರ್ತವ್ಯ ಎಂಬ ದೃಷ್ಟಿಯಿಂದ ತಾಯಂದಿರು ಮಕ್ಕಳಿಗೆ ಕಥೆ ಹೇಳುತ್ತಾರೆ. ಅಂತಹ ಕಡೆ ಕಥಾ ಪರಂಪರೆ ಉಳಿಯಲು ತಾಯಿ ಕಾರಣಳಾಗುತ್ತಾಳೆ. ನಮ್ಮಲ್ಲಿ ಜನಪದ ಕಥೆಗಳು 'ಅಜ್ಜಿ ಕಥೆಗಳು' ಕಟ್ಟು ಕಥೆಗಳು ಎಂಬ ಹೆಸರಿನಿಂದ ಹೆಚ್ಚಾಗಿ ಪ್ರಚಲಿತವಿದೆ. ಕಥೆ ಹೇಳುವಾಗ 'ಹೂಂ'ಗುಟ್ಟುವುದು ಸಾಮಾನ್ಯ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದಕ್ಕೆ 'ಹೂಂ ಗುಟ್ಟುವ' ಕಥೆ ಎಂತಲೇ ಹೇಳುತ್ತಾರೆ.

ಪ್ರಸ್ತುತ ಜನಪದ ಕತೆಗಳು ತಲೆಮಾರಿನಿಂದ ತಲೆಮಾರಿಗೆ, ಬಾಯಿಂದ ಬಾಯಿಗೆ ಕಂಠಸ್ಥ ರೂಪದಲ್ಲಿ ಬದುಕಿಕೊಂಡು ಬಂದಿರುತ್ತವೆ. ಇಲ್ಲಿ ವಸ್ತುವಿನ ಜಟಿಲತೆಯಿಲ್ಲ. ಪಾತ್ರಗಳ ತೊಡಕಿಲ್ಲ, ಕತೆ ತನ್ನ ಚಾಕಚಕ್ಯತೆ ಮತ್ತು ಹೇಳುವವನ ಶೈಲಿಯಿಂದ ಅದು ಕೇಳುಗರ ಮನಸೂರೆಗೊಳಿಸಬಹುದಾಗಿದೆ. ಕಥೆ ಕೇಳಿದವರು ವಿದ್ಯೆ ದೊರಕಿಸಿಕೊಳ್ಳಬಹುದಾಗಿದೆ. ಲೋಕಾನುಭವ ಪಡೆದು ಮನರಂಜನೆಯೊಂದಿಗೆ ನೀತಿ ಬೋಧೆಯನ್ನು ಪಡೆಯಬಹುದಾಗಿದೆ. ಬಾಳಿನ ಬವಣೆ, ಮಾನಸಿಕ ಯಾತನೆಗಳನ್ನು ಕಳೆದುಕೊಂಡು ಆನಂದವಾಗಿರಬಹುದಾಗಿದೆ.

ಪ್ರಸ್ತುತ ಅಧ್ಯಯನದ ಸಂಕಲನದಲ್ಲಿ ಜನಪದ ಕಥೆಗಳು ಮೌಖಿಕವಾಗಿರುತ್ತವೆ. ಅವುಗಳ ಭಾಷೆ ಸರಳ, ಸಹಜ, ಸುಲಭ ಅದೂ ಆಡುಭಾಷೆಯಲ್ಲಿ ಹೇಳಲ್ಪಡುತ್ತವೆ. ದುಃಖದ ಘಟನೆಗಳಿಂದ ಕತೆಗಳು ತುಂಬಿದ್ದರೂ ಸುಖಾಂತಕ್ಕೆ ತಿರುಗುತ್ತವೆ. ಜನಪದ ಕಥೆಗಳು ವಿಶ್ವವ್ಯಾಪಕಗುಣವಿರುವುದರಿಂದ ಈ ಜನಪದ ಕಥೆಗಳು ಬೇಕಾದಾಗ ಹಿಗ್ಗಬಹುದಾಗಿದೆ. ಬೇಡವಾದಾಗ ಕುಗ್ಗಬಹುದಾಗಿದೆ. ಆ ಕಾಲದ, ದೇಶದ ಸಂಸ್ಕೃತಿಯ ಅಧ್ಯಯನಕ್ಕೆ ಇವು ಸಹಕಾರಿಯಾಗಿರುತ್ತವೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಕತೆಗಳು ಆರಂಭದಲ್ಲಿ ಯಾವುದೇ ಸುತ್ತು ಬಳಸಿಲ್ಲದೆ ನೇರವಾಗಿ ಪ್ರಾರಂಭವಾಗುತ್ತವೆ. ಯಾವುದೇ ಅನಾವಶ್ಯಕವಾದ ವರ್ಣನೆಗೆ ಇಲ್ಲಿ ಅವಕಾಶವಿರುವುದಿಲ್ಲ. ಪ್ರಾಣಿಗಳ ಸ್ವಭಾವದಲ್ಲಿನ ಚಿತ್ರಣದಲ್ಲಿ ಮಾನವನ ಗುಣ

ಸ್ವಭಾವಗಳನ್ನು ಕೆತ್ತುವ ಕಲಾವಂತಿಕೆ ಈ ಕತೆಗಳಲ್ಲಿ ಪ್ರಮುಖವಾಗಿ ಎದ್ದುಕಾಣುವ ಗುಣವಾಗಿದೆ. ಸಮಕಾಲೀನ ಬದುಕಿನ ಬಿಂಬವೂ ಇಲ್ಲಿ ಚಿತ್ರಿತಗೊಂಡಿರುತ್ತದೆ. ಸಮಕಾಲೀನ ಸಮಾಜದ ಅಂದಿನ ಕಾಲದ ಜನರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಆಶಯ ಮತ್ತು ವರ್ಗ ಹಾಗೂ ಮಾದರಿಯಿಂದ ಈ ಸಂಕಲನದ ಕಥೆಗಳು ಹೆಚ್ಚು ಆಕರ್ಷಕವೂ ಆಗಿರುತ್ತದೆ. ಕೇಳುಗರ ಕುತೂಹಲವನ್ನು ಕೆರಳಿಸುತ್ತವೆ.

ಪ್ರಸ್ತುತ ಜನಪದ ಕಥಾಸಂಕಲನದಲ್ಲಿ ಸಲೀಸಾಗಿ ಅಲ್ಲಲ್ಲಿ ಗಾದೆ, ಒಗಟು, ಪಡೆನುಡಿ, ಬಳಿಸಿಕೊಳ್ಳುವುದು ಉಂಟು. ಆಡುಭಾಷೆಯಲ್ಲಿ ಅಶ್ಲೀಲ ಪದಗಳು ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತವೆ.

ಧೀರಕುಮಾರ ಕಥೆಯಲ್ಲಿ ನಾಯಕ ಮತ್ತು ಪ್ರತಿನಾಯಕನ ನಡುವೆ ನಡೆಯುವ ಸಂಭಾಷಣೆಯಲ್ಲಿ ಅಶ್ಲೀಲ ಪದಗಳ ಬಳಕೆಯನ್ನು ಅದನ್ನು ಬಳಸಿದ ರೀತಿಗಳನ್ನು ಕಾಣಬಹುದು.

"ಬಂದೇನೋ ಮುಲ್ಲಾ ಎಂದಳು

ಅವನು ಬಂದೇ ಕಣೇ ಕತ್ತೆರಂಡೆ" ಎಂದನು

ಅವಳು "ಇದಲ್ಲ ಗಂಡಸ್ತನ ಅಲ್ಲ !" ಎಂದಳು

"ಏನು ಮಾಡಬೇಕೆ ಕತ್ತೆರಂಡೆ !" ಎಂದನು

"ಸಂಪಿಗೆ ಹೂವಿನ ಹೆಣ್ಣು ತಂದೇನೋ ಮುಲ್ಲಾ ?"

"ತಂದೆಕಣೆ ಕತ್ತೆರಂಡೆ !"

ಇಂತಹ ಪದಗಳ ವಾಚ್ಯಾರ್ಥಕ್ಕಿಳಿಯದೆ ಅವುಗಳ ಒಳಾರ್ಥವನ್ನು ಒಳಧ್ವನಿಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಪ್ರಾದೇಶಿಕ ಭಾಷೆಯ ಅರಿವು ಇದ್ದವರಿಗೆ ಕಥೆಗಳ ಒಳತಿರುಳು ಬೇಗ ಅರ್ಥವಾಗುತ್ತದೆ. ಪುನರಾವರ್ತನೆಯು ಕಥೆಗಳಲ್ಲಿ ಸಾಮಾನ್ಯವಾಗಿ ಅಲ್ಲಲ್ಲಿ ಇದ್ದೇ ಇರುತ್ತದೆ. ಕಥೆಯನ್ನು ದೊಡ್ಡದು ಮಾಡುವಲ್ಲಿ ಮತ್ತೆ ಕಿರಿದು ಮಾಡುವಲ್ಲಿ ಈ ಪುನರಾವರ್ತನೆ ಸಹಕಾರಿಯಾಗುತ್ತದೆ. ಕಥೆ ಹೇಳುವವರ ಶೈಲಿಯ ಮತ್ತು ತಂತ್ರದ ಮೇಲೆ ಕಥೆಯ ಅಂತಸ್ತು ನಿಲ್ಲುತ್ತದೆ.

ಜನಪದರು ದುಡಿದು, ದಣಿವು ಆರಿಸಿಕೊಳ್ಳುವುದಕ್ಕಾಗಿ ಇಲ್ಲವೆ ತಮ್ಮನ್ನು ಆಳುವವರನ್ನು ರಮಿಸುವುದಕ್ಕಾಗಿ ಈ ಕಥೆಗಳು ಹುಟ್ಟಿಕೊಂಡಿವೆ ಎಂದೆನಿಸುತ್ತದೆ. ಪ್ರಯಾಣ ಕಾಲದ ಪಥ ಪರಿಶ್ರಮವನ್ನು ನಿವಾರಿಸಲು ಅಂದರೆ ಮೊದಲು ಜನಪದರು ತಮ್ಮ ಪ್ರಯಾಣವನ್ನು ಕಾಲು ನಡಿಗೆಯಲ್ಲಿ ಅಥವಾ ಎತ್ತಿನಗಾಡಿಗಳಲ್ಲಿ ಹೋಗುವಾಗ ಹೇಳುತ್ತಿದ್ದರು ಎನಿಸುತ್ತದೆ. ಕಥೆಯು ಮುಖ್ಯಕ್ರಿಯೆಯೊಂದಿಗೆ ಪ್ರಾರಂಭವಾಗುವುದು ಇಲ್ಲಿವೆ ಮುಕ್ತಾಯ ಆಗುವುದಿಲ್ಲ. ಇಲ್ಲಿನ ಕಥೆಗಳು ಪುನರಾವರ್ತನೆ ಹೊಂದುತ್ತಿರುತ್ತವೆ. ಇಲ್ಲನ ಕಥೆಗಳಲ್ಲಿ ಪ್ರತಿಯೊಂದು ದೃಶ್ಯದಲ್ಲಿಯೂ ಕೂಡ ಕನಿಷ್ಠ ಇಬ್ಬರು ವ್ಯಕ್ತಿಗಳು ಕ್ರಿಯಾಶೀಲರಾಗಿರುತ್ತಾರೆ. ನಾಯಕ ಮತ್ತು ಪ್ರತಿನಾಯಕರುಗಳ ಸಮಾಗಮ ಎಲ್ಲ ಕಥೆಗಳಲ್ಲೂ

ಕಂಡುಬರುತ್ತದೆ. ಒಂದೇ ಪಾತ್ರದಲ್ಲಿ ಇಬ್ಬರು ಕಾಣಿಸಿಕೊಂಡರೆ ಅವರು ಚಿಕ್ಕವರು ಇಲ್ಲವೆ ಅಶಕ್ತರಾಗಿರುತ್ತಾರೆ. ದುರ್ಬಲರು, ಶಕ್ತಿ ಹೀನರು ಕಥೆಗಳಲ್ಲಿ ಉತ್ತಮರಾಗುವುದು ಇಲ್ಲಿನ ಕಥೆಗಳ ಲಕ್ಷಣಗಳಲ್ಲಿ ಮುಖ್ಯವಾಗಿದೆ. ಪಾತ್ರಗಳ ಚಿತ್ರಣ ಸರಳವಾಗಿದ್ದು, ಕಥೆಗೆ ಹೊರತಾದದ್ದು ಯಾವುದು ಇಲ್ಲ. ಕಥಾವಸ್ತುವೂಕೂಡ ಸರಳವಾಗಿರುತ್ತದೆ. ಇಲ್ಲಿ ಸಮಾನ ವಿಷಯಗಳು ಪೂರಕವಾಗಿರುತ್ತವೆ. ನಿಜ ಜೀವನದಲ್ಲಿ ಇಲ್ಲದ ಅಂಶಗಳನ್ನು ಕಥೆಗಳಲ್ಲಿ ಕಾಣಬಹುದಾಗಿದೆ.

ಉದಾಹರಣೆಗೆ ನಾಯಿಯಾದರೂ ತಾಯಿ ಕಥೆಯಲ್ಲಿ ನಾಯಿಯ ಹೊಟ್ಟೆಯಲ್ಲಿ ಮಾನವರ ಮಕ್ಕಳು ಜನಿಸುವುದು. ಮಕ್ಕಳು ಮಾತಾಡುವುದು. ತಾಯಿಯ ಹೊಟ್ಟೆಯಲ್ಲಿ ನಾಯಿ ಮರಿ ಹುಟ್ಟುವುದು. ನಾಯಿ ತನ್ನ ಮಕ್ಕಳಿಗೆ ಊಟ, ಬಟ್ಟೆ ತಂದು ಸಾಕುವುದು, ಹಾಲು ಕದ್ದು ತಂದು ಸಾಕುವುದು. ಅದಷ್ಟೆ ಅಲ್ಲದೇ ತನ್ನ ಮಕ್ಕಳಿಗೆ ಮದುವೆ ಮಾಡಿ ಕಳುಹಿಸಿಕೊಡುವುದು. ಹೀಗೆ ಮನುಷ್ಯರನ್ನು ನಾಚಿಸುವಂತೆ ನಾಯಿಯಾದರೂ ತಾಯಿಯಾಗಿ ತನ್ನ ಕೆಲಸವನ್ನು ಶಿರಸಾವಹಿಸಿ ಮಾಡುವುದು ಪ್ರಾಣಿಗಳಲ್ಲಿ ಕಾಣುತ್ತೇವೆ.

'ಪುಣ್ಯದ ಲಕ್ಷ್ಮಿ' ಕಥೆಯಲ್ಲಿ ಮೂರು ಇಟ್ಟಿಗೆ ಕಲ್ಲನ್ನು ಹೆರುವುದನ್ನು ದೊರೆ ನಂಬುವುದು, ಮೂರು ಮಕ್ಕಳನ್ನು ಮಗೇವು, ಹಸುವು, ಆನೆ, ತಿಪ್ಪೆಗಳು ಸ್ವಲ್ಪ ದಿನಗಳು ಆ ಮಕ್ಕಳನ್ನು ಸಾಕುವುದು, ಇದು ಜನಪದರ ಕಲ್ಪನೆಯನ್ನು ತಿಳಿಸುತ್ತದೆ. 'ಹೂವಿನ ಸುಪ್ಪತ್ತಿಗೆ ರಾಣಿ' ಕಥೆಯಲ್ಲಿ ಚಿತ್ರಪಟದೊಳಗಿಂದ ಗಿಣಿ ಹಾರಿಬರುವುದು. 'ತಾವರೆಯ ಹೂವು' ಕಥೆಯಲ್ಲಿ ಅಣ್ಣ ತಂಗಿಯ ತಲೆ ಕತ್ತರಿಸಿದಾಗ, ತಲೆಯು ತಾವರೆಯ ಹೂವಾಗಿ ಹುಟ್ಟುವುದು ಇವೆಲ್ಲವೂ ಕೂಡ ಕೇವಲ ಶಬ್ದಗಳ ಜೋಡಣೆಯಲ್ಲ ಅದು ಜೀವಂತ ನಿರೂಪಣೆಯಾಗಿದೆ. ಹೀಗೆ ಕನ್ನಡ ಜನಪದ ಕಥೆಗಳು ಮಾನವನ ಒಳಹೊರಗಣ ಸಂಸ್ಕೃತಿ, ನಾಗರೀಕತೆಯನ್ನು ಪ್ರತಿಬಿಂಬಿಸುತ್ತದೆ.

ಪ್ರಸ್ತುತ ಅಧ್ಯಯನದ ಪ್ರತಿಯೊಂದು ಕಥೆಯೂ ಕೆಲವು ಆಶಯಗಳ ಕ್ರಮವಾದ ಸರಣಿಯಿಂದ ರಚಿತವಾಗಿರುತ್ತವೆ. ಕಥೆಯನ್ನು ನಿರೂಪಣೆ ಮಾಡುವ ಒಂದು ಕನಿಷ್ಠ ಚಿಕ್ಕ ಘಟಕಗಳೆಂದು ಆಶಯಗಳನ್ನು ಕರೆಯಬಹುದಾಗಿದೆ. ಈ ಆಶಯಗಳು ಕಥೆಯ ವಸ್ತುವನ್ನು ನಿರೂಪಿಸುವಂತಹವು. ಕಥೆಗಳು ಮೌಖಿಕ ರೂಪದಲ್ಲಿ ಇರುವುದರಿಂದ ಕಥೆಗಾರನ ಮರೆವಿನಿಂದಾಗಿ ಕಥೆಯಲ್ಲಿ ಬರುವ ಆಶಯಗಳು ಹಿಂದು ಮುಂದಾಗಬಹುದು. ಕೆಲವು ಆಶಯಗಳು ಕಳಚಿಹೋಗಬಹುದು. ಒಂದು ಕಥೆಗೆ ಮತ್ತೊಂದು ಕಥೆಯ ಆಶಯಗಳು ಬಂದು ಸೇರಿಕೊಳ್ಳಬಹುದು. ಈ ತಪ್ಪನ್ನು ತಿದ್ದಿಕೊಳ್ಳುವ ಯಾವೊಂದು ಲಿಖಿತ ಅಥವಾ ಶಿಷ್ಟ ಆಧಾರವಿಲ್ಲದಿರುವುದರಿಂದ ಕಥೆ ಹಾಗೆ ಮುಂದುವರೆಯುತ್ತದೆ. ಹೀಗೆ ಕಥೆಗಳಲ್ಲಿ ಅನೇಕ ಭಿನ್ನಪಾಠಗಳುಂಟಾಗಿ ಅವೇ ಸ್ಥಿರವಾಗಿಬಿಡುತ್ತವೆ. ಜನಪದ ಕಥೆಗಳ ವಾಗ್ರೂಪದಿಂದಲೂ ಇದು ಇಲ್ಲಿ ಮಾತ್ರವೇ ಕಾಣುವ ಪ್ರಕ್ರಿಯೆ. ಕಥೆಗಳು ಪ್ರಚಲಿತವಿರುವ ಆ ನೆಲದ ಸಂಸ್ಕೃತಿ, ಕಾಲ, ಚರಿತ್ರೆ, ಭೌಗೋಳಿಕ ವಿಷಯಗಳಿಂದಲೂ ಪ್ರಭಾವಿತವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕೆಲವು ಮೇಲಿನ ಬದಲಾವಣೆಗಳನ್ನು ಪಡೆದುಕೊಳ್ಳುತ್ತದೆ.

ಪ್ರಸ್ತುತ ಅಧ್ಯಯನದ ಕಥೆಗಳನ್ನು ಅದರ ಜೀವಂತ ಪರಿಸರದಲ್ಲಿ ಅಧ್ಯಯನ ನಡೆಸಿದಾಗ ಅದು ಸಮಾಜ ಮತ್ತು ಅಲ್ಲಿನ ವ್ಯಕ್ತಿಗಳ ಆಂತರಿಕ ಸಂಬಂಧಗಳ ಸಮಾಗಮದ ಫಲವಾಗಿದೆ ಎಂಬ ಅಂಶವನ್ನು ಗಮನಿಸಬಹುದು. ಇಲ್ಲಿನ ಕಥೆಗಳ ಸ್ವರೂಪದಲ್ಲಿ ಕೇಳುಗ ಅಪ್ರಜ್ಞಾಪೂರ್ವಕವಾಗಿ ಭಾಗಿಯಾಗುತ್ತಾನೆ. ಕಥೆಯನ್ನು ಹೇಳುತ್ತಿರುವಾಗಿನ ಕಾಲ, ಸಂದರ್ಭ, ಕೇಳುಗ ಸಮುದಾಯ ಅದರ ಮನಸ್ಥಿತಿ ಇವುಗಳೆಲ್ಲ ಕಥೆಯ ಸ್ವರೂಪವನ್ನು ಎಷ್ಟರ ಮಟ್ಟಿಗೆ ನಿರ್ಧರಿಸುತ್ತವೆ ಎಂದರೆ ಅದೇ ಕಥೆ ಬೇರೊಂದು ಪರಿಸರ, ಸಂದರ್ಭದಲ್ಲಿ ಗಮನಾರ್ಹವಾಗಿ ಬದಲಾಗಬಹುದು. ಕಥೆ ಈ ಅನೇಕ ಪ್ರಭಾವಗಳಿಂದ ನಾನಾರೂಪ ತಾಳಿದರೂ ಅವುಗಳ ಕ್ರಿಯಾಗತಿಯಲ್ಲಿ ಹೆಚ್ಚಿನ ಬದಲಾವಣೆಯಾಗುವುದಿಲ್ಲ.

ಉದಾಹರಣೆಗೆ 'ಕುಂಟನ ಸಹಾಸ' ಕಥೆಯಲ್ಲಿ ತಂಗಿಯನ್ನು ಹುಡುಕಲು ಮೂವರು ಸೋದರರು ಹೊರಡುವರು. ತಾಯಿ ಇಬ್ಬರಿಗೆ ಒಳ್ಳೆಯ ಊಟ ಕಟ್ಟಿ ಕೊಡುವಳು. ಕುಂಟನಿಗೆ ಸೀಕು. ಕಲ್ಯಾಣಿಯ ಬಳಿ ಊಟ ಮಾಡುವಾಗ ಇಬ್ಬರ ಊಟ ಹಳಸಿ ಕುಂಟನ ಊಟ ರುಚಿಯಾಗಿತ್ತು. ತಾನುಹೇಳಿದಂತೆ ಕೇಳಿದರೆ ಮಾತ್ರ ಊಟವನ್ನು ಹಂಚಿಕೊಡಲು ಕುಂಟ ಷರತ್ತು ಹಾಕುತ್ತಾನೆ. ಅದಕ್ಕೆ ಇಬ್ಬರು ಅಣ್ಣಂದಿರು ಒಪ್ಪಿಗೆ ನೀಡುತ್ತಾರೆ. ದಾರಿಯಲ್ಲಿ ಒಂದು ಒನಕೆ ಸಿಗುತ್ತದೆ. ಅಣ್ಣಂದಿರು ಹೊತ್ತುಕೊಳ್ಳಲು ಕುಂಟನ ಆಜ್ಞೆ ನಿರಾಕರಿಸಿದಾಗ "ನನ್ನ ಗಂಟು ಮೂಳೆ ಕಕ್ಕಿ" ಎನ್ನುವನು. ಅವರು ಅದನ್ನು ಹೊತ್ತುಕೊಳ್ಳುವರು. ಇದು ಮೂಲ ನಾಗಮಂಗಲ ತಾಲ್ಲೂಕಿನ, ಮಂಡ್ಯಜಿಲ್ಲೆ, ಶ್ರೀರಂಗಪುರದ ರಂಗಮ್ಮ ಎಂಬಾಕೆ ಹೇಳಿದ ಕಥೆಯಾಗಿದೆ. ಅದೇ ಕಥೆ ತುಮಕೂರು ಜಿಲ್ಲೆಯ ತುರುವವೇಕೆರೆಯಲ್ಲಿ ಈ ಕಥೆ ಕೆಲವು ಬೇರೆ ಬೇರೆ ರೂಪಗಳನ್ನು ಪಡೆದುಕೊಂಡಿದೆ.

ಇಲ್ಲಿ ಕುಂಟ ಒಬ್ಬನೇ ತಂಗಿಯನ್ನು ಕರೆತರಲು ಹೊರಡುತ್ತಾನೆ. ಒಬ್ಬನೇ ಆ ಎಲ್ಲಾ ವಸ್ತುಗಳನ್ನು ಹೊತ್ತುಕೊಂಡು ಹೋಗುತ್ತಾನೆ. ಇಲ್ಲಿ ಒಂದು ಹಲುಬೆ, ಒಂದು ಬಾನಿ, ಕತ್ತೆ, ಕಡಜಗಳು ವಸ್ತುವಾಗಿ ಬಂದರೆ ಮತ್ತೊಂದು ಕಥೆಯಲ್ಲಿ ಕುಂಟನ ಜೊತೆಗೆ ಅವನ ಅಣ್ಣಂದಿರೂ ಬರುತ್ತಾರೆ. ಒನಕೆ ಬದಲಿಗೆ ಹಲುಬೆ ಬರುತ್ತದೆ. ಮತ್ತು ಊಟದಲ್ಲಿ ಕೂಡ ಕುಂಟನಿಗೆ ಚಿರಕುಳ್ಳಿ ಉರಿದ ಹಿಟ್ಟು ಕೊಡುವುದು ಕಾಣುತ್ತೇವೆ. ಹೀಗೆ ಈ ಕಥೆಯ ಉದ್ದೇಶ ಗುರಿ ಒಂದೇ ಆದರೂ ಅದರಲ್ಲಿರುವ ಸಂದರ್ಭ, ಪರಿಸರ, ವಸ್ತುಗಳಲ್ಲಿ ರೂಪಾಂತರ ಹೊಂದುವುದನ್ನು ಇಲ್ಲಿ ಕಾಣಬಹುದಾಗಿದೆ.

'ಪುಣ್ಯದ ಲಕ್ಷ್ಮಿ'ಯ ಕಥೆಯಲ್ಲಿ ಒಂದುಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕೆಲವು ರೂಪಾಂತರಗಳಾಗಿ, ಕೆಲವು ಭಿನ್ನರೂಪಗಳುಂಟಾಗಿವೆ. ಈ ಸಂಕಲನದ ಮೂಲಕಥೆ ಮಧುಗಿರಿಯ ತಾಲ್ಲೂಕಿನದಾದರೆ, ಮತ್ತೊಂದು ಹಿರಿಯೂರು ತಾಲ್ಲೂಕಿನದಾಗಿದೆ. ಇವೆರೆಡು ಒಂದೇ ಕಥೆಯಾಗಿದೆ. ಆದರೂ ಕೆಲವು ಆಶಯ ಮತ್ತು ಕ್ರಿಯಾಗತಿಯಲ್ಲಿ ಮತ್ತು ವಸ್ತುವಿನಲ್ಲಿ ಕೆಲವು ಬದಲಾವಣೆಯನ್ನು ಕಾಣುತ್ತೇವೆ. ಇಲ್ಲಿ ರಾಜನು ತನ್ನ ಕಿರಿಯ ಹೆಂಡತಿಯನ್ನು 'ಕಡೇ ಕೊಟ್ಟಿಗೆಗೆ' ಹಾಕಿದರೆ, ಮತ್ತೊಂದು ಕಥೆಯಲ್ಲಿ ಅವಳನ್ನು ಕಾಡಿನಲ್ಲಿ ರಾಣಿಯ ತಲೆಯನ್ನು ಕಡಿಯಲು ಹೇಳುತ್ತಾನೆ. ಒಂದರಲ್ಲಿ ಮೂರು

ಇಟ್ಟೇಕಲ್ಲು ಹೆತ್ತರೆ, ಮತ್ತೊಂದರಲ್ಲಿ ಕಸಪೊರಕೆಗಳನ್ನು ಹಡೆಯುವಳು. ಒಂದರಲ್ಲಿ ತನ್ನ ಮಗುವನ್ನು ತಾನೇ ಸಾಯಿಸಿದಳೆಂದು ಹೇಳುತ್ತಾರೆ. ಮತ್ತೊಂದುರಲ್ಲಿ ಇದು ಬರುವುದಿಲ್ಲ. ಇಲ್ಲಿ ತೋಟಗಾರ ಶಿವಣ್ಣ ಮಕ್ಕಳನ್ನು ಸಾಕಿದರೆ ಮತ್ತೊಂದರಲ್ಲಿ ಹೂವಾಡಿಗ ಮಕ್ಕಳನ್ನು ಸಾಕುತ್ತಾನೆ. ಹೀಗೆ ಹಲವು ವ್ಯತ್ಯಾಸಗಳು ಬಂದಿದ್ದರೂ ಅಂತ್ಯ ಎರಡೂ ಕಥೆಗಳಲ್ಲೂ ಒಂದೇ ಉದ್ದೇಶದಿಂದ ಮುಕ್ತಾಯವಾಗುತ್ತದೆ.

ಹೀಗೆ ಈ ಕಥಾ ಸಂಕಲನದ ಹಲವು ಕಥೆಗಳಲ್ಲಿ 'ಬಡತಂಗಿ' 'ದೊಂಬರ ಹುಡುಗ', 'ಗುಲಗಂಜಮ್ಮ', 'ಕೊಂಗನಹಳ್ಳಿ ದಾಸಯ್ಯ' 'ಹೆಡ್ಡ ತಂದ ಜಾಣೆಯರು' ಕಥೆಗಳಲ್ಲಿ ಹಲವು ರೂಪಾಂತರದಿಂದ ಕೂಡಿದ್ದು ಇವುಗಳ ಉದ್ದೇಶ ಅಂತ್ಯಗಳು ಎರಡೂ ಕಥೆಗಳಲ್ಲಿ ಒಂದೇಯಾಗಿ ಕಾಣಿಸುತ್ತದೆ. ಈ ಕಥೆಗಳ ವಸ್ತುವೈವಿಧ್ಯ ಅಮಿತವಾಗಿದ್ದರೂ ಅವುಗಳ ರಚನಾತಂತ್ರ ಮಾತ್ರ ಸೀಮಿತವಾದುದು ಎಂದೆನಿಸುತ್ತದೆ. ಈ ಕಥಾಸಂಕಲನದ ಕಥೆಗಳ ವ್ಯಕ್ತಿ ಪಾತ್ರಗಳಲ್ಲಿ ವೈವಿಧ್ಯ ಇದ್ದರೂ ಸಾಮಾನ್ಯವಾಗಿ ಧೃಡವಾಗಿದೆ. ಕ್ರಿಯೆಗಳು ಕಥೆಗಳಲ್ಲಿ ಸಾಮಾನ್ಯವಾಗಿ ಒಂದೇ ಗತ್ತಿಯಲ್ಲಿರುತ್ತವೆ. ಪ್ರಸ್ತುತ ಅಧ್ಯಯನದ ಕಥೆಯ ಯಾವುದೇ ಪ್ರಕಾರವನ್ನು ತೆಗೆದುಕೊಂಡರು ಕಲ್ಪನೆಯಿಂದ ಹೆಣೆದ ಸಂಗತಿಗಳೇ ಹೆಚ್ಚಾಗಿ ಕಂಡುಬರುತ್ತವೆ. ಈ ಎಲ್ಲಾ ಕಥೆಗಳ ಸ್ವಾರಸ್ಯವಿರುವುದೇ ಆ ಕಾಲ್ಪನಿಕ ಸೃಷ್ಟಿಯಲ್ಲಿ.

ವಾಸ್ತವ ಅಂಶಗಳೊಂದಿಗೆ ಈ ಕಾಲ್ಪನಿಕ ಅಂಶಗಳು ಯಾವುದೇ ಭೇದವಿಲ್ಲದೆ ಒಂದನ್ನೊಂದು ಬೆರೆತುಕೊಂಡು ಬರುತ್ತವೆ. ನಾಯಿಯು ಮಕ್ಕಳನ್ನು ಸಾಕುವುದು, ಹಸುಯೂ ಆನೆ ಕೂಡ ಮಕ್ಕಳನ್ನು ಸಾಕುವುದು, ತಿಪ್ಪೆಯೂ ಸಹ ಮಾತನಾಡುವ ಕಲ್ಪನೆ ತುಂಬ ಸೊಗಸಾಗಿದೆ. ಮಾನವ ಪ್ರಪಂಚದ ವಸ್ತು, ವಿಷಯ ವ್ಯಕ್ತಿಗಳ ಜೊತೆಯಲ್ಲಿ ಕಲ್ಪಿತ ಸೃಷ್ಟಿಯಾದ ಮಾತನಾಡುವ ಪ್ರಾಣಿಗಳು, ಜೀವಿಗಳಂತೆಯೆ ವರ್ತಿಸುವ ನಿರ್ಜೀವ ವಸ್ತುಗಳು. ದೇವತೆ, ರಾಕ್ಷಸ, ದೆವ್ವಗಳು, ಕಿನ್ನರ, ಯಕ್ಷಿಣೆ, ಮಾಟಗಾತಿಯರು, ಸಾಧುಸಂತರು ಪಾತ್ರವಹಿಸುತ್ತಾರೆ. ನಮಗೆ ಈ ಕಥೆಗಳನ್ನು ಓದಿದಾಗ ಅನಾಗರೀಕವೆನಿಸುವಂತ ನರಭಕ್ಷಕತನ, ಮಾಯ ಮಾಟಮಂತ್ರಗಳ, ಮೂಢ ನಂಬಿಕೆ, ಆಚರಣೆಗಳು ಬಹುವಾಗಿ ಕಾಣಿಸಿಕೊಳ್ಳುತ್ತವೆ. ಈ ಕಥೆಗಳ ವಸ್ತುವಿನಲ್ಲಿ ಹೆಚ್ಚಿನವು ಕಾಲ್ಪನಿಕತೆಯಿಂದ ಕೂಡಿದವುಗಳಾಗಿವೆ. ಚಾರಿತ್ರಿಕ ಮತ್ತು ಪೌರಾಣಿಕ ಕತೆಗಳು ತುಂಬಾ ವಿರಳವಾಗಿವೆ. ಹೆಚ್ಚಿನ ಕತೆಗಳು ಸಾಮಾಜಿಕತೆಯನ್ನು ಒಳಗೊಂಡವಾಗಿವೆ. ನಮ್ಮ ನೈತಿಕ ಪ್ರಜ್ಞೆಯನ್ನು ಚುಚ್ಚುವಂತಹ ಅದನ್ನು ಬಡಿದೆಬ್ಬಿಸುವಂತಹ ಸನ್ನಿವೇಶ, ಸಂದರ್ಭ ಮತ್ತು ವಸ್ತುವನ್ನು ಒಳಗೊಂಡ ಕಥೆಗಳು ಬಹುಸಂಖ್ಯೆಯಲ್ಲಿವೆ. ಮೇಲಿನ ಈ ಯಾವುದೇ ಅಂಶಗಳು ಕಥೆಯಲ್ಲಿ ಅಸಂಗತವೆನಿಸದಂತೆ ಬೆರೆತು ಅವುಗಳು ಕೇಳುಗನ ನಂಬಿಕೆಯನ್ನು ಹುಸಿಗೊಳಿಸದೆ ಸಾವಕಾಶವಾಗಿ ಸಾಗಿ ಬರುತ್ತವೆ.

ಸಾಮಾನ್ಯವಾಗಿ ಕಥೆ ಹೇಳುವ ಹಾಗೂ ಕೇಳುವ ಈ ಕ್ರಿಯೆ ಮಾನವ ಇರುವ ಕಡೆಯಲೆಲ್ಲಾ ನಿರಂತರವಾಗಿ ಸಾಗುತ್ತಾ ಬರುವಂತದ್ದು. ಆದ್ದರಿಂದ ಪ್ರಪಂಚದ ಎಲ್ಲ ಕಥೆಗಳಲ್ಲಿಯೂ ಕಾಣಬರುವ ಒಂದು ಸರ್ವೇಸಾಮಾನ್ಯ ಲಕ್ಷಣವೆಂದರೆ 'ಸಮರೂಪತೆ' ಇದಕ್ಕೆ ಕಥೆಗಳು ಒಂದು ಕಡೆಯಿಂದ ಮತ್ತೊಂದು

ಕಡೆಗೆ ಪ್ರಯಾಣ ಮಾಡುವುದು ಕಾರಣವಿರಬಹುದು. ಜನಪದ ಕಥೆಗಳು ಎಲ್ಲ ಕಡೆಯೂ ರಚನೆಯ ಸಾದೃಶ್ಯವನ್ನು ಹೊಂದಿರುವುದಕ್ಕೆ ಸ್ಮಿತ್ ಥಾಮ್ಸನ್ ಹೀಗೆ ಕಾರಣ ಕೊಡುತ್ತಾರೆ.

"The Limitations of human life and the similarity of its basic situations necessarity produce tales everywhere which are much alike in all important strutural respects.

ಪ್ರಸ್ತುತ ಅಧ್ಯಯನದ ಕಥೆಗಳಲ್ಲಿ ಹೀಗೆ ಸಮರೂಪಕ ಕಂಡುಬಂದರೂ, ವ್ಯತ್ಯಾಸಗಳು ಇದ್ದೇ ಇರುತ್ತವೆ. ಈ ವ್ಯತ್ಯಾಸಗಳು ಮೇಲಿನ ದೃಷ್ಟಿಗೆ ಕ್ರಮಬದ್ಧವಲ್ಲವೆಂದು ತೋರಿದರೂ ನಿಜವಾದ ದೃಷ್ಟಿಗೆ ಅವು ಬೇರೆಯದೇ ಕಾರಣಗಳನ್ನು ಕೊಡುತ್ತವೆ. ಇವುಗಳು ಕಾಲ ಮತ್ತು ಸ್ಥಳಗಳಲ್ಲಿ ಬದುಕುತ್ತವೆ. ಜನಪದ ಕಥೆಗಳು ಕಾಲದಿಂದ ಕಾಲಕ್ಕೆ, ಬಾಯಿಂದ ಬಾಯಿಗೆ, ದೇಶದಿಂದ ದೇಶಕ್ಕೆ ಹರಿದು ಬರುವಾಗ ಅರಿತೋ ಅರಿಯದೋ ಬದಲಾವಣೆಯನ್ನು ಹೊಂದುತ್ತವೆ. ಉದಾಹರಣೆಗೆ 'ದೊಂಬರ ಹುಡುಗ', 'ನಾಗಮಾಣಿಕ್ಯ', 'ಕುಂಟನ ಸಾಹಸ', ಮುಂತಾದ ಕಥೆಗಳಲ್ಲಿ ಕಾಣಬಹುದಾಗಿದೆ. ಈ ರೂಪಾಂತರ ಪ್ರವೃತ್ತಿಯ ಪರಿಣಾಮದಿಂದಾಗಿ ಕಥೆಗಳ ರಚನೆ ಬಿಗಿಯಾಯಿತು. ಶೈಲಿ ಸುಂದರವಾಯಿತು. ಒಟ್ಟಿನಲ್ಲಿ ಜನಪದ ಕಥೆಗಳು ಅಧಿಕ ಪ್ರಮಾಣದಲ್ಲಿ ದೊರೆಯುವಂತಾದವು.

ಈ ಕಥಾಸಂಕಲನವು ಹಲವು ಸಾರ್ವತ್ರಿಕ ಲಕ್ಷಣಗಳಿಂದ ಕೂಡಿವೆ. ಆಕ್ಸೆಲ್ ಒಲ್ರಿಕ್ ಎಂಬ ಪ್ರಸಿದ್ಧ ಜಾನಪದ ವಿದ್ವಾಂಸ ಒಂಬತ್ತು ವಿಭಾಗಗಳಲ್ಲಿ ಜನಪದ ಕಥೆಗಳ ಲಕ್ಷಣಗಳನ್ನು ಗುರುತಿಸಿದ್ದಾನೆ. ಈತ ಗುರುತಿಸಿರುವ ಎಲ್ಲಾ ಲಕ್ಷಣಗಳನ್ನು ಪ್ರಸ್ತುತ ಅಧ್ಯಯನದ ಕಥಾ ಸಂಕಲನವು ಬಹುತೇಕವಾಗಿ ಒಳಗೊಂಡಿದೆ.

೧. ಬಹುಮುಖ್ಯವಾದ ಕ್ರಿಯೆಯೊಂದರಿಂದ ಪ್ರಾರಂಭವಾಗುವುದಿಲ್ಲ ಮತ್ತು ಇದ್ದಕ್ಕಿದ್ದಂತೆ ಮುಕ್ತಾಯವಾಗುವುದಿಲ್ಲ. ಸಾವಕಾಶವಾದ ಪ್ರವೇಶವಿದ್ದು, ಶಿಖರವನ್ನು ತಲುಪಿದ ಮೇಲೂ ನಿಲುಗಡೆಯ ಸ್ಥಾನದ ತನಕ ಮುಂದುವರಿಯುತ್ತದೆ.

೨. ಪುನರಾವರ್ತನೆ ಸಾಮಾನ್ಯವಾಗಿ ಎಲ್ಲ ಕಡೆಯಲ್ಲೂ ಕಂಡುಬರುತ್ತದೆ. ಅದು ಕಥೆಯನ್ನು ನಿರೀಕ್ಷೆಯಲ್ಲಿಡುವುದಲ್ಲದೆ. ಅದರ ಶರೀರವನ್ನು ತುಂಬುಗೊಳಿಸಿ ಸಮರ್ಥಿಸುತ್ತದೆ. ಈ ಪುನರಾವರ್ತನೆ ಕೆಲವು ದೇಶಗಳಲ್ಲಿನ ಧಾರ್ಮಿಕ ಸಂಕೇತದ ಕಾರಣದಿಂದಾಗಿ ನಾಲ್ಕು ಮಡಿಕೆಯಾಗುವುದಾದರೂ, ಬಹುಮಟ್ಟಿಗೆ ಮೂರು ಮಡಿಕೆಯದ್ದು.

೩. ಸಾಮಾನ್ಯವಾಗಿ ಏಕಕಾಲದಲ್ಲಿ ಇಬ್ಬರು ವ್ಯಕ್ತಿಗಳು ಮಾತ್ರ ಒಂದು ದೃಶ್ಯದಲ್ಲಿ ಕಾಣಿಸಿಕೊಳ್ಳುತ್ತಾರೆ. ಇನ್ನು ಹೆಚ್ಚಿಗೆ ಇದ್ದರೂ ಇಬ್ಬರು ಮಾತ್ರ ಏಕಕಾಲದಲ್ಲಿ ಕ್ರಿಯಾಶೀಲರಾಗಿರಬೇಕು.

೪. ವೈದೃಶ್ಯ ಪಾತ್ರಗಳ ಸಮಾಗಮ-ನಾಯಕ ಮತ್ತು ಪ್ರತಿನಾಯಕ, ಶಿಷ್ಟ ಮತ್ತು ದುಷ್ಟ.

೫. ಒಂದೇ ಪಾತ್ರದಲ್ಲಿ ಇಬ್ಬರೇನಾದರೂ ಕಾಣಿಸಿಕೊಂಡರೆ, ಅವರು ಚಿಕ್ಕವರಾಗಿ ಅಥವಾ ಅಶಕ್ತರಾಗಿ ಚಿತ್ರಿತರಾಗಿರುತ್ತಾರೆ. ಅವರು ಅನೇಕ ವೇಳೆ ಅವಳಿಗಳಾಗಿದ್ದು ಶಕ್ತರಾಗಿ ಪರಿಣಮಿಸಿದರೆ, ಅವರು ವೈರಿಗಳಾಗುವ ಸಾಧ್ಯತೆಯುಂಟು.

೬. ದುರ್ಬಲ ಅಥವಾ ಕೀಳಾಗಿರುವವರು ಉತ್ತಮರಾಗುವ ಸಾಧ್ಯತೆ ಇದೆ. ಕಿರಿಯ ಸೋದರ ಅಥವಾ ಸೋದರಿ ಸಾಮಾನ್ಯವಾಗಿ ಜಯಗಳಿಸುವರು.

೭. ಪಾತ್ರ ಚಿತ್ರಣ ಸರಳ. ಕಥೆಗೆ ನೇರವಾಗಿ ಸಂಬಂಧಪಟ್ಟ ಗುಣಗಳು ಮಾತ್ರ ನಿರೂಪಿತ. ಪಾತ್ರಕ್ಕೆ, ಕಥೆಗೆ ಹೊರತಾದ ಯಾವುದೇ ಜೀವನದ ಸುಳಿವು ಕೂಡ ಇರುವುದಿಲ್ಲ.

೮. ಕಥಾವಸ್ತು ಸರಳ. ಸಂಕೀರ್ಣವಲ್ಲ. ಒಂದು ಕಾಲದಲ್ಲಿ ಒಂದು ಕತೆಯನ್ನು ಮಾತ್ರ ಹೇಳಬೇಕು. ಎರಡು ಅಥವಾ ಹೆಚ್ಚು ಉಪಕಥೆಗಳು ಒಂದೇ ಕಾಲದಲ್ಲಿ ಬಂದರೆ, ಆಗ ಅದು ಜನಪದ ಕಥೆಯ ಜಾಯಮಾನವಾಗಿರದೆ, ನಾಗರೀಕ ಸಾಹಿತ್ಯದ ಆಭಾಸವಾಗಿರುತ್ತದೆ.

೯. ಪ್ರತಿಯೊಂದು ಸಾಧ್ಯವಾದಷ್ಟು ಸರಳವಾಗಿ ನಡೆಯುತ್ತದೆ. ಸಮಾನ ವಿಷಯಗಳೆಲ್ಲವೂ ಪೂರಕವಾಗಿರುತ್ತವೆ. ವೈವಿಧ್ಯತೆಯನ್ನು ತರುವ ಯಾವುದೇ ಪ್ರಯತ್ನ ಕಂಡುಬರುವುದಿಲ್ಲ.

ಕಥೆ ಪ್ರಾರಂಭವಾಯಿತೆಂದರೆ ಮುಕ್ತಾಯದ ತನಕ ನಿರರ್ಗಳವಾಗಿ ಹರಿಯುತ್ತದೆ. ಕಥೆಗಳು ನೇರ ಮತ್ತು ಸ್ಪಷ್ಟವಾಗಿವೆ. ಯಾವುದೇ ವೈವಿಧ್ಯತೆಯ ಆಡಂಬರವಿಲ್ಲ. ನಿಧಾನವಾದ ಪ್ರವೇಶ, ಸಾವಕಾಶ ಮುಕ್ತಾಯ, ವಸ್ತುವಿನ ಜಟಿಲತೆ ಇಲ್ಲ. ಪಾತ್ರಗಳ ತೊಡಕಿಲ್ಲ. ಉಪಕಥೆಗಳ ಗೋಜಿಲ್ಲ. ಕಥೆ ಹೇಳುವುದೊಂದೇ ಇಲ್ಲಿ ಪ್ರಧಾನ. ಇಲ್ಲಿ ನಡೆಯುವ ಕ್ರಿಯೆಗಳೆಲ್ಲವೂ ಸರಳ ಹಾಗೂ ಸಹಜ, ಪರಿಣಾಮಕಾರಿ ಹಾಗೂ ಫಲಕಾರಿಯಾಗಿರುತ್ತದೆ. ಒಟ್ಟಿನಲ್ಲಿ ಜನಪದ ಕಥೆಗಳು ರಚನೆಯ ದೃಷ್ಟಿಯಿಂದ ಒಂದೇ ಮಾದರಿಯವು ಎನ್ನಬೇಕಾಗುತ್ತದೆ. ಈ ಕಥೆಗಳಲ್ಲಿ ಪಾತ್ರಗಳು ಬಹುಮುಖ್ಯವಾಗಿರುತ್ತವೆ. ಮನುಷ್ಯ ಪಾತ್ರವಹಿಸುವುದಲ್ಲದೆ, ದೇವತೆ, ಪ್ರಾಣಿಗಳು, ರಾಕ್ಷಸರು ಭಾಗವಹಿಸುತ್ತಾರೆ. ನಿರ್ಜೀವ ವಸ್ತು, ಗಿಡಮರಗಳೂ ಪಾತ್ರವಹಿಸುವುದುಂಟು. ಸಾಮಾನ್ಯವಾಗಿ ಪಾತ್ರಗಳ ಸಂಖ್ಯೆ ಕಡಿಮೆಯಾಗಿರುತ್ತವೆ. ಪಾತ್ರಗಳನ್ನು ನಾಯಕ ನಾಯಕಿಯರು, ಸಹಾಯಕರು ಮತ್ತು ಪ್ರತಿನಾಯಕರು ಎಂಬುದಾಗಿ ಮೂರು ಭಾಗ ಮಾಡಬಹುದು. ಇವರೆಲ್ಲರಿಗೂ ಸಹಾಸವೇ ಮೂಲವಾಗಿರುತ್ತದೆ.

ಕಥೆಯಲ್ಲಿ ನಾಯಕ ಅನ್ವೇಷಕನಾಗಿ ಕಾಣಿಸಿಕೊಳ್ಳುತ್ತಾನೆ. ಇವನಲ್ಲಿ ಉತ್ತಮ ಗುಣಗಳ ಸಮಾವೇಶವೇ ಆಗಿರುತ್ತದೆ. ನಾಯಕಿಗೆ ನಾಯಕನಿಗಿಂತ ಧೈರ್ಯ ಇರುವುದಿಲ್ಲ. ಉಳಿದೆಲ್ಲ ಗುಣಗಳನ್ನು ಒಳಗೊಂಡಿರುತ್ತಾಳೆ. ನಾಯಕನಲ್ಲಿ ಲೋಪದೋಷಗಳು ಸಾಮಾನ್ಯವಾಗಿ ಇರುವುದಿಲ್ಲ. ನಾಯಕನ ಪಾತ್ರದಲ್ಲಿ ಮತ್ತೊಂದು ವಿಶೇಷವೆಂದರೆ 'ನಿಷ್ಕ್ರಿಯತೆ'. ಇಂತಹ ಕಡೆಯಲೆಲ್ಲ ಅತಿಮಾನುಷ ಸಹಾಯಕರು ನಾಯಕನ ಕೆಲಸವನ್ನು ನಿರ್ವಹಿಸುತ್ತಾರೆ. ಕಥಾನಾಯಕ ಸಾಮಾನ್ಯವಾಗಿ ಕಿರಿಯ ಮಗನಾಗಿರುತ್ತಾನೆ.

ನಾಯಕ ಮತ್ತು ನಾಯಕಿಯರನ್ನು ಬಿಟ್ಟರೆ ಮುಂದೆ ನಾವು ಗಮನಿಸಬಹುದಾದ ಪಾತ್ರವರ್ಗ ಸಹಾಯಕರು. ನಿಜಕ್ಕೂ ಇವರ ಪಾತ್ರ ವೈವಿಧ್ಯಪೂರ್ಣವಾದುದು. ಸಹಾಯಕರಲ್ಲಿ ಎರಡು ವರ್ಗ. ನಾಯಕನಿಗೆ ಸಲಹೆಕೊಟ್ಟು, ನಿರ್ಗಮಿಸುವ ಸಹಾಯಕ ಒಂದು ವರ್ಗವಾದರೆ, ಕಾರ್ಯದ ಪ್ರಧಾನ ಹಾಗೂ

ಕಷ್ಟದ ಭಾಗವನ್ನು ವಹಿಸುವ ಸಹಾಯಕವರ್ಗ ಮತ್ತೊಂದು. ನಾಯಕ ಸಹಾಯಕರಿಂದ ಸಲಹೆ ಪಡೆದು ಮುಂದಿನ ಸಾಧನೆಗಳನ್ನು ಎಸಗುವುದರಿಂದ ಸ್ವಲ್ಪಮಟ್ಟಿಗೆ ನಾಯಕನ ಸ್ವಪ್ರಯತ್ನವನ್ನು ಕಾಣಬಹುದಾಗಿದೆ. ಎರಡನೆಯದರಲ್ಲಿ ನಾಯಕನ ಕಾರ್ಯ ಸುಲಭಗೊಳ್ಳುತ್ತದೆ. ಇದರಿಂದಾಗಿ ನಾಯಕ ಎಷ್ಟೇ ಗುಣಪಂಸನ್ನನಾದರೂ ಸಹಾಯಕರಿಲ್ಲದೆ ಜಯ ಪಡೆಯಲಾರ ಎಂಬುದು ಸ್ಪಷ್ಟವಾಗುತ್ತದೆ. ಆದರೆ ನಾಯಕ ಸಹಾಯಕರ ನೆರವನ್ನು ಪಡೆಯಬೇಕಾದರೆ ದಯಾಪರವಾದ ಯಾವುದಾದರೂ ಕಾರ್ಯವನ್ನು ಆ ಮುನ್ನ ಮಾಡಿರಬೇಕಾಗುತ್ತದೆ. ಸಹಾಯಕರನ್ನು ಪ್ರಾಣಿಗಳು, ಅತಿಮಾನುಷ ಶಕ್ತಿಗಳು ಮತ್ತು ವಸ್ತುಗಳು ಎಂಬುದಾಗಿ ಮೂರು ಭಾಗವಾಗಿ ಮಾಡಿಕೊಳ್ಳಬಹುದು. ಕೆಲವೊಮ್ಮೆ ಮನುಷ್ಯ ಸಹಾಯಕರು ಕಾಣಿಸಿಕೊಳ್ಳುವುದಿದೆ. ಸಾಮಾನ್ಯವಾಗಿ ಅತಿಮಾನುಷ ಸಹಾಯಕವರ್ಗವೇ ಹೆಚ್ಚು ಪ್ರಚುರದಲ್ಲಿರುವುದು. ಎಷ್ಟೋ ಸಾರಿ ನಾಯಕನಿಗೆ ಮಾನುಷ ಅಥವಾ ಅತಿಮಾನುಷ ಸಹಾಯಕರಿಗಿಂತ ಪ್ರಾಣಿ ಸಹಾಯಕರಿಂದಲೇ ಹೆಚ್ಚು ಅನುಕೂಲ ದೊರೆಯುವುದೂ ಇರುತ್ತದೆ.

ಜನಪದ ಕಥೆಗಳಲ್ಲಿ ಪ್ರತಿನಾಯಕನ ಪಾತ್ರವೂ ಕೂಡ ಗಮನಾರ್ಹವಾದುದೇ ಪ್ರತಿನಾಯಕರನ್ನು ವಿರೋಧಿಗಳೆಂದು ಕರೆಯುವುದೇ ಸೂಕ್ತವೆನಿಸುತ್ತದೆ. ಏಕೆಂದರೆ ತನ್ನವರೇ ಆದರೂ ಅವರು ನಾಯಕನಿಗೆ ಒಳ್ಳೆಯದನ್ನು ಕೆಟ್ಟದನ್ನೂ ಮಾಡಬಹುದು. ಮಲತಾಯಿಯ ಪಾತ್ರ ಇದರಲ್ಲಿ ಮುಖ್ಯವಾದುದು. ಪ್ರತಿನಾಯಕರನ್ನು ಸಮೀಪವರ್ತಿಗಳು ಮತ್ತು ಸಂಬಂಧವಿಲ್ಲದವರು ಎಂದು ಎರಡು ವಿಧಮಾಡಿಕೊಳ್ಳಬಹುದು. ಮೊದಲನೆಯದರಲ್ಲಿ ಹಗೆತನ ಸಾಧಿಸುವ ಚಿಕ್ಕಪ್ಪಂದಿರು. ಕ್ರೂರ ಮಲತಾಯಿಯರು ಇವರು ಸಮೀಪವರ್ತಿ ಸಂಬಂಧದ ಪ್ರತಿನಾಯಕರು ಹಾಗೂ ಅಸೂಯಾಪರ ಮಲಸೋದರ ಸೋದರಿಯರು ಇತ್ಯಾದಿ ಬರುವರು. ಎರಡನೆಯ ವರ್ಗದಲ್ಲಿ ರಾಕ್ಷಸಿ, ದೆವ್ವ, ಇಂದ್ರಜಾಲಿಕ, ಮಾಟಗಾರ ಅಥವಾ ಮಾಟಗಾತಿ ಮುಂತಾದವರು ಸೇರುತ್ತಾರೆ. ಈ ಎರಡು ಗುಂಪಿನಲ್ಲಿ ಮೊದಲ ಗುಂಪಿನವರೇ ನಿಜವಾದ ಪ್ರತಿನಾಯಕರೆನಿಸುತ್ತದೆ. ಮೊದಲನೆಗುಂಪಿನವರಿಗೂ ನಾಯಕನಿಗೂ ಬಂಧುತ್ವದ ಸಂಬಂಧ ಇದ್ದರೆ, ಈ ಯಾವುದೇ ಸಂಬಂಧ ಎರಡನೆಯದರಲ್ಲಿ ಕಂಡುಬರುವುದಿಲ್ಲ. ಆದರೆ ಎರಡೂ ವರ್ಗದ ವಿರೋಧಿಗಳಿಗೆ ಶಿಕ್ಷೆ ಮಾತ್ರ ಸಮಾನವಾಗಿಯೇ ಇರುತ್ತದೆ.

ಪ್ರಸ್ತುತ ಕಥೆಗಳಲ್ಲಿ ಮಾಂತ್ರಿಕ ವಸ್ತುಗಳು ಬಹುಮುಖ್ಯ ಪಾತ್ರವಹಿಸುತ್ತದೆ. ಮಂತ್ರದಂಡ, ಉಂಗುರ, ಕೊಡಲಿ, ಪಾತ್ರೆ, ಕುಂಬಳಕಾಯಿ, ಮುಂತಾದವುಗಳು ಕಂಡುಬರುತ್ತವೆ. ಮಂತ್ರವಾದಿಯ ಕೈವಾಡ ಇದ್ದೇ ಇರುತ್ತದೆ. ಮತ್ತೆ ಇಲ್ಲಿ ಕೆಲವು ಪ್ರಾಣಿ ಪಕ್ಷಿಗಳು ಕೂಡ ಮಂತ್ರವಸ್ತುಗಳ ಸಾಲಿನಲ್ಲಿ ಅದರಂತೆಯೇ ಕೆಲವು ಸಂದರ್ಭದಲ್ಲಿ ವರ್ತಿಸುತ್ತವೆ. ಜನಪದ ಕಥೆಗಳಲ್ಲಿ ಮತ್ತೊಂದು ಸಾಮಾನ್ಯ ನಮೂನೆ ಎಂದರೆ ರಾಜಕುಮಾರಿಯನ್ನು ತಮ್ಮಂತೆ ಮಾಡಿಕೊಳ್ಳಲು ಹೂಡುವ ಸ್ಪರ್ಧೆಗಳು. ಇಂತಹ ಸಂದರ್ಭಗಳಲ್ಲಿ ಪ್ರತಿಸ್ಪರ್ಧಿ ಕಾಣಿಸಿಕೊಳ್ಳಬಹುದು ಅಥವಾ ಇಲ್ಲದಿರಬಹುದು. ಆದರೆ ಉದ್ದಕ್ಕೂ ಅದ್ಭುತ ಹಾಗೂ ಅಲೌಕಿಕತೆಗಳು ತುಂಬಿಕೊಳ್ಳುತ್ತವೆ.

'ಹೂ ಕೊಟ್ಟ ಚದುರೆ' ಕಥೆಯಲ್ಲಿ ಮಂತ್ರಿಕುಮಾರ ರಾಣಿಯನ್ನು ಗೆಲ್ಲಲು ದೇವಲೋಕದ ಇಂದ್ರ ಹೂಡುವ ಸ್ಪರ್ಧೆಯನ್ನೆಲ್ಲಾ ಹಲವು ಸಾಹಸಗಳ ಮೂಲಕ ಗೆಲ್ಲುವುದು ಇದಕ್ಕೆ ಒಂದು ಬಹುಮುಖ್ಯವಾದ ಉದಾಹರಣೆಯಾಗಿದೆ.

ಹೀಗೆ ಪ್ರಸ್ತುತ ಅಧ್ಯಯನದ ಕಥೆಗಳು ಸ್ವರೂಪ ಮತ್ತು ಲಕ್ಷಣದಲ್ಲಿ ಹಲವು ವೈವಿಧ್ಯತೆಗಳನ್ನು ಹೊಂದಿದ್ದು ವಿಶ್ವದ ಜನಪದ ಕಥೆಗಳ ಸಾಲಿನಲ್ಲಿ ನಿಲ್ಲುತ್ತವೆ. ಈ ಎಲ್ಲಾ ಕಥೆಗಳಲ್ಲಿ ಕಂಡು ಬರುವ ಸಮಾನ ಗುಣದಿಂದಾಗಿ ಮಾನವ ಸ್ವಭಾವದ ವೈವಿಧ್ಯತೆಯಲ್ಲಿರುವ ಏಕತೆಯನ್ನು ನಾವು ಗಮನಿಸಬಹುದು. ಜೊತೆಗೆ ಜಗತ್ತಿನ ಎಲ್ಲ ದೇಶಗಳ ಜಾನಪದ ಕಥೆಗಳನ್ನು ಒಂದೆಡೆ ಸಂಗ್ರಹಿಸಿ, ಒಂದನ್ನೊಂದು ಹೋಲಿಸಿ ನೋಡಿದಾಗ ಎಲ್ಲವೂ ಮಾನವ ಸಂಬಂಧಗಳನ್ನು ಸಹೃದಯ ಮನಸ್ಸನ್ನು ಪ್ರೀತಿ, ವಿಶ್ವಾಸಗಳನ್ನು ಅನಾವರಣಗೊಳಿಸುವ ಎಲ್ಲಾ ಲಕ್ಷಣಗಳನ್ನು ಹೊಂದಿವೆ ಎಂಬುದನ್ನು ತಿಳಿಯಬಹುದು. ಇದರಿಂದ ಪ್ರಸ್ತುತ ಕಥಾ ಸಂಕಲನವೂ ಕೂಡ ಹೊರತಾಗಿಲ್ಲ.

ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಾಯ - ೪

ಜೀ.ಶಂ.ಪ. ಕನ್ನಡ ಜನಪದ ಕಥೆಗಳಲ್ಲಿ ಮಹಿಳಾ ಚಿತ್ರೀಕರಣ

048515

ಜೀ.ಶಂ.ಪ. ಕನ್ನಡ ಜನಪದ ಕಥೆಗಳಲ್ಲಿ ಮಹಿಳಾ ಚಿತ್ರೀಕರಣ

ಭಾರತೀಯ ಜನಪದ ಕಥೆಗಳು ಹೆಚ್ಚಾಗಿ ಮಹಿಳೆಯರಿಂದ ಕಟ್ಟಲ್ಪಟ್ಟಿದ್ದು, ಭಾರತದ ಜನಪದ ಕಥೆಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಈ ಸತ್ಯಸಂಗತಿ ಅರಿವಾಗುತ್ತದೆ. ಇದು ಕರ್ನಾಟಕದ ಬಹುಪಾಲು ಜನಪದ ಕಥೆಗಳಿಗೆ ಮೂಲಾಧಾರವಾಗಿರುವ ಜೀ.ಶಂ.ಪರಮಶಿವಯ್ಯ ಅವರ 'ಕನ್ನಡ ಜನಪದ ಕಥೆಗಳು' ಕಥಾಸಂಕಲನ ಕೂಡ ಇದರಿಂದ ಹೊರತಾಗಿಲ್ಲ. ಪ್ರಸ್ತುತ ಕಥೆಗಳಲ್ಲಿ ಮಹಿಳಾ ಪಾತ್ರಗಳಿಲ್ಲದ ಕಥೆಗಳೇ ಇಲ್ಲವಾಗಿವೆ. ಜನಪದ ಕಥೆಗಳನ್ನು ನಮ್ಮಲ್ಲಿ ಅಜ್ಜಿ ಕಥೆಗಳು ಎಂದು ಕರೆಯುವ ವಾಡಿಕೆ ಇದೆ. ಇದರ ಹಿನ್ನೆಲೆಯನ್ನು ಗಮನಿಸಿದಾಗ ಕಥೆಗಳಲ್ಲಿ ಮಹಿಳೆಯರ ಪ್ರಭಾವವನ್ನು ದೃಢಪಡಿಸಬಹುದಾಗಿದೆ. ಪ್ರಸ್ತುತ ಕಥೆಗಳಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನ-ಮಾನ, ಅಂದಂದಿನ ಕಾಲದ ಆರ್ಥಿಕ ಸ್ಥಿತಿ-ಗತಿಗಳನ್ನು ಈ ಕಥೆಗಳು ಕಟ್ಟಿಕೊಡುತ್ತವೆ. ಬದುಕಿನ ವಿನೋದ, ಹಾಸ್ಯ, ಕುಟುಂಬ, ಮದುವೆ, ದುರಂತ, ಸಾಹಸ, ಕಷ್ಟ ಪರಂಪರೆ ಇತ್ಯಾದಿ ಸಂಗತಿಗಳನ್ನು ಈ ಕಥೆಗಳಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಜನಪದ ಕಥೆಗಳು ಎಂದೋ ಮುಗಿದು ಹೋದ ಗತಕಾಲದ ಸಂಗತಿಯಲ್ಲ. ಇವುಗಳು ಭೂತಕಾಲದ ವಸ್ತು ವಿಷಯಗಳೊಂದಿಗೆ ವರ್ತಮಾನದ ಸಂಗತಿಯನ್ನು ಸೇರಿಸಿಕೊಂಡು ಅಂದಂದಿನ ಜೀವನ ವಿಧಾನಕ್ಕೆ ಅನುಕೂಲವಾಗುವಂತೆ ವೈಚಾರಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅಂಶಗಳನ್ನು ನೀಡುತ್ತಾ ಬಂದಿರುವ ವಟವೃಕ್ಷವಾಗಿವೆ. ಇವು ಸಂಸ್ಕೃತಿ ಮತ್ತು ಪರಂಪರೆಗೆ ಸಂಬಂಧಿಸಿದ್ದಾದರೂ, ಸಮಸ್ಯೆಯಿಂದ ಅಂಗೀಕರಿಸಲ್ಪಟ್ಟ ವಿಚಾರ, ಸಂಪ್ರದಾಯ, ನಂಬಿಕೆ, ನಡಾವಳಿಕೆಗಳನ್ನು ಒಳಗೊಂಡವುಗಳಾಗಿವೆ. ಇವುಗಳಲ್ಲಿ ಸಾಮೂಹಿಕ ಚಿಂತನೆಗಳು ಆಯಾ ಸಮೂಹದ ಆಶೋತ್ತರಗಳನ್ನು ಅಭಿವ್ಯಕ್ತವೆನ್ನುವುದನ್ನು ಅವರವರ ಜೀವನ ವಿಧಾನದಲ್ಲೇ ಗುರುತಿಸುತ್ತೇವೆ. ಇಂಥ ಸಮುದಾಯಗಳ ಬದುಕಿನ ವಿವರಗಳನ್ನು, ಜೀವನದ ಪ್ರತಿಯೊಂದು ಸ್ತರಗಳನ್ನು ಅತಿಸೂಕ್ಷ್ಮತೆಯಿಂದ ಮತ್ತು ಎಚ್ಚರಿಕೆಯಿಂದ ಅಧ್ಯಯನ ಮಾಡಿದಾಗ ಮಾತ್ರ ಮಹಿಳೆಯರ ಬದುಕಿನ ಚಿತ್ರಣವನ್ನು ತಿಳಿಯಲು ಸಾಧ್ಯವಾಗುತ್ತದೆ.

ಪ್ರಸ್ತುತ ಕಥೆಗಳಲ್ಲಿ ಸ್ತ್ರೀಕೇಂದ್ರಿತ ಮತ್ತು ಪುರುಷಕೇಂದ್ರಿತ ಕಥೆಗಳೆರಡೂ ಒಳಗೊಂಡಿದ್ದು ಎರಡೂ ಭಾಗದ ಕಥೆಗಳು ಸಮಪ್ರಮಾಣದಲ್ಲಿ ಕಾಣಬಹುದಾಗಿದೆ. ಕಥೆಗಳ ಹೆಸರೂ ಕೂಡ ಸ್ತ್ರೀಯನ್ನು ಹೆಸರಿಸುವ ಕಥೆಗಳು ಬಹುವಾಗಿದ್ದರೂ, ಪುರುಷನನ್ನು ಹೆಸರಿಸುವ ಕಥೆಗಳೂ ಸಮಪ್ರಮಾಣದಲ್ಲಿ ಇವೆ. ಅತಿಮಾನುಷ

ಪತ್ನಿಯರು, ಅತಿಮಾನುಷ ಪತಿಗಳು, ಅತಿಮಾನುಷ ವಿರೋಧಿಗಳು ಮತ್ತು ರಮ್ಯ ಕಥೆಗಳು ಭಾಗಗಳಲ್ಲಿ ಸ್ತ್ರೀಯ ಹೆಸರಿನಿಂದಲೇ ಕೂಡಿರುವ ಕಥೆಯ ಹೆಸರುಗಳೇ ಬಹುಸಂಖ್ಯೆಯಲ್ಲಿವೆ. ಹೂ ಕೊಟ್ಟ ಚದುರೆ, ದೇವಗನ್ನೆ, ಸಾವಿತ್ರಮ್ಮ ಸೊಪ್ಪಿನ ಗುಡ್ಲಕ್ಕ, ದುಷ್ಟತಾಯಿ, ಬಡತಂಗಿ, ಸಿರಿದೇವಿ. ಮಂಚದಮ್ಮ, ಭಾಗ್ಯಲಕ್ಷ್ಮಿ, ಪುಣ್ಯದ ಲಕ್ಷ್ಮಿ, ಹೂವಿನ ಸುಪ್ಪತ್ತಿಗೆ ರಾಣಿ, ದುಡಿದ ಗಂಡನ ಪಡೆದ ಚೆಲುವೆ, ಜಂಬೂರ ನಾಗಯ್ಯನ ಸೊಸೆ, ಅಣ್ಣ ತಂಗಿ, ಗುಲಗಂಜಮ್ಮ, ಚಿಕ್ಕಮ್ಮಿ, ದೊಡ್ಡಮ್ಮಿ, ಹೆಂಡತಿಗೆ ಹೇಳಿದ ಗುಟ್ಟು, ಹೀಗೆ ಇನ್ನೂ ಕೆಲವು ಕಥೆಯ ಹೆಸರುಗಳನ್ನು ಹೇಳಬಹುದು. ಇಷ್ಟೇ ಅಲ್ಲದೇ ಉಳಿದ ಕಥೆಗಳೆಲ್ಲದರಲ್ಲೂ ಮಹಿಳೆಯ ಪಾತ್ರ ಬಹಳ ಮುಖ್ಯವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಪುರುಷಕೇಂದ್ರಿತ ಕಥೆಗಳಲ್ಲಿ ನಾಯಕನ ಶೋಧ ಹಾಗೂ ಸಾಹಸಗಳೇ ಪ್ರಧಾನವಾದರೆ, ಸ್ತ್ರೀಕೇಂದ್ರಿತ ಕಥೆಗಳ ಕೇಂದ್ರ ಬಿಂದುವೇ ಬೇರೆ. ಸಾಯುವಂತವರನ್ನು ಬದುಕಿಸುವುದು, ಕಷ್ಟ ಕಾರ್ಪಣ್ಯಗಳಿಂದ ಪಾರುಮಾಡುವುದು, ಅತಿಮಾನುಷವಾಗಿ ಸಹಾಯಮಾಡುವುದು, ಸಮಸ್ಯೆಗಳನ್ನು ಪರಿಹರಿಸುವುದು ನಾಯಕಿಯರ ಜೀವನ ಧ್ಯೇಯವಾಗಿರುತ್ತದೆ. ಇಂತಹ ಕಥೆಗಳಲ್ಲಿ ಸ್ತ್ರೀಯರದೇ ಪ್ರಾಬಲ್ಯವಾಗಿದೆ. ಪುರುಷರು ತಾಯಿಯರ, ಹೆಂಡತಿಯರ ವಶವರ್ತಿಗಳಾಗುತ್ತಾರೆ. ನಾಯಕಿಯ ವಿರೋಧಿಗಳು ಸಾಮಾನ್ಯವಾಗಿ ಸವತಿಯರು, ನಾದಿನಿಯರು, ಮಲತಾಯಿಯರು, ಅಂದರೇ ಸ್ತ್ರೀಯರೇ ಆಗಿರುತ್ತಾರೆ. ಅಂದರೆ ಇಲ್ಲಿ ಸ್ತ್ರೀಯರಿಗೆ ಸ್ತ್ರೀಯರೇ ಶತ್ರುವಾಗಿ ಕಾಣಿಸುತ್ತಾರೆ. ಅಷ್ಟೇ ಅಲ್ಲದೇ ಆಕೆಯ ಪ್ರಮುಖ ಸಹಾಯಕರು ಕೂಡ ಹೆಂಗಸರೇ ಆಗಿರುತ್ತಾರೆ. ಸೋದರ ಸೋದರಿಯರ ಬಗೆಗಿನ ಕುಟುಂಬ ಕತೆಗಳಲ್ಲಿ ಈ ವಿನ್ಯಾಸವು ಹಿಂದು ಮುಂದಾಗುತ್ತದೆ. ಅಂದರೆ ಸೋದರ ಸೋದರಿಯರು ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ, ಅಥವಾ ಒಬ್ಬರನ್ನೊಬ್ಬರು ದ್ವೇಷಿಸುತ್ತಾರೆ.

ಸ್ತ್ರೀಕೇಂದ್ರಿತ ಕಥೆಗಳು ಸ್ತ್ರೀಯರು ಸ್ತ್ರೀಯರ ಬಗೆಗೆ ಹೇಳುವ ಕಥೆಗಳಾಗಿವೆ. ಪ್ರಸ್ತುತ ಕಥೆಗಳಲ್ಲಿ ಸ್ತ್ರೀಯ ಹೆಸರಿನ ಕಥೆಗಳನ್ನು ಸ್ತ್ರೀಯರೇ ಹೇಳಿರುವುದನ್ನು ಕಾಣಬಹುದು. ಉದಾಹರಣೆಗೆ ವಡ್ಡರಹಳ್ಳಿ ಲಕ್ಷ್ಮಮ್ಮ ಎಂಬುವರು 'ಪುಣ್ಯದ ಲಕ್ಷ್ಮಿ', 'ಬಡತಂಗಿ', 'ಜಂಬೂರು ನಾಗಯ್ಯನ ಸೊಸೆ', ಮುಂತಾದ ಕಥೆಗಳನ್ನು ಹೇಳಿದ್ದರೆ ಈ ಕಥೆಯ ಬಹುಪಾಲು ಕಥೆಗಳನ್ನು ಹೇಳಿರುವ ತಿಮ್ಮಕ್ಕ 'ದೇವಗನ್ನೆ', 'ಸಾವಿತ್ರಮ್ಮ', 'ಸಿರಿದೇವಿ', 'ಹೂ ಕೊಟ್ಟ ಚದುರೆ', 'ಮಡಿದ ಗಂಡನ ಪಡೆದ ಚೆಲುವೆ', ಅಣ್ಣ ತಂಗಿ ಇನ್ನು ಮುಂತಾದ ಕೆಲವು ಪುರುಷಕೇಂದ್ರಿತ ಕಥೆಗಳನ್ನು ಅಂದರೆ 'ದೊಂಬರ ಹುಡುಗ', 'ಗುಳಕಾಯಿ ತಮ್ಮ', ನಾಗಮಾಣಿಕ್ಯ, ಅದೃಷ್ಟವಂತ ಬುದ್ಧಿವಂತ, ತಬ್ಬಲಿಯ ಹುಡುಗ, ಪೆದ್ದರಾಮ ಮುಂತಾದ ಕಥೆಗಳನ್ನು ಹೇಳಿರುವುದನ್ನು ನೋಡಬಹುದು. ಹಾಗೆಯೇ ಮತ್ತೊಬ್ಬ ಕಥೆಗಾರ್ತಿ ದೇವೇಗೌಡನ ಕೊಪ್ಪಲಿನ ನಂಜಮ್ಮ ಎಂಬುವರು 'ದುಷ್ಟತಾಯಿ', 'ಮಳೆರಾಯನ ಮಡದಿ', 'ಯಾರು ಹೆಚ್ಚು', ಎಂಬ ಕಥೆಗಳನ್ನು ಹೇಳಿದ್ದಾರೆ. ಹಾಗೆಯೇ ರಂಗಮ್ಮ ಎಂಬುವರು 'ಸೊಸೆಗೆ ತಕ್ಕ ಅತ್ತೆ', ಎಂಬ ಕಥೆಯನ್ನು, ಲಕ್ಷ್ಮಮ್ಮ ನಾಯಿಯಾದರೂ ತಾಯಿ, ಶಾರದಮ್ಮ 'ಭಾಗ್ಯಲಕ್ಷ್ಮಿ' ಕಥೆಯನ್ನು ಹಾಗೂ ಸುಂದರಮ್ಮ ಅವರು 'ಮಂಚದಮ್ಮ', 'ಗುಲಗಂಜಮ್ಮ'

ಎಂಬ ಕಥೆಗಳನ್ನು ಹೇಳಿದ್ದಾರೆ. ಇದು ಸ್ತ್ರೀಯರು ಸ್ತ್ರೀಯರ ಬಗ್ಗೆ ಹೇಳುವ ಕಥೆಗಳಾಗಿರುವುದಕ್ಕೆ ಆಧಾರಗಳಾಗಿವೆ.

ಪುರುಷಕೇಂದ್ರಿತ ಕಥೆಗಳಲ್ಲಿ ಕಥೆ ಮದುವೆಯಲ್ಲಿ ಮುಕ್ತಾಯವಾದರೆ ಸ್ತ್ರೀಕೇಂದ್ರಿತ ಕಥೆಯಲ್ಲಿ ಮದುವೆಯ ನಂತರ ಅಥವಾ ಮದುವೆಯಿಂದ ಕಥೆ ಆರಂಭವಾಗುತ್ತದೆ. ಹಾಗೂ ಸಂತಾನ ಪ್ರಾಪ್ತಿ ಇಲ್ಲದಿದ್ದರೆ ಅಲ್ಲಿಂದಲೇ ಪ್ರಾರಂಭವಾಗುತ್ತವೆ.

'ತಾವರೆಯ ಹೂ', ಕಥೆಯಲ್ಲಿ ಸ್ತ್ರೀಕೇಂದ್ರಿತ ಕಥೆಯಾಗಿದ್ದು, ಈ ಕಥೆ ಪ್ರಾರಂಭವಾಗುವುದು ಮದುವೆಯಾದ ನಂತರ. "ಒಂದು ಊರಿನಲ್ಲಿ ಒಬ್ಬ ದೊರೆ ಇದ್ದ. ಅವನಿಗೆ ಒಬ್ಬ ಗಂಡುಮಗ, ಒಬ್ಬಳು ಹೆಣ್ಣು ಮಗಳು, ಮಗಳನ್ನು ದೂರದ ಊರಿಗೆ ಕೊಟ್ಟು ಮದುವೆ ಮಾಡಿದ್ದರು'. ಬೇಕಾದ ಹಾಗೆ ಒಡವೆವಸ್ತ್ರ ಮಾಡಿಸಿದ್ದರು".

ಬೆಂಗಳೂರಿನಂಥಾದ್ದು ಒಂದು ಪಟ್ಟಣ; ಮೈಸೂರಿನಂಥಾದ್ದು ಇನ್ನೊಂದು ಪಟ್ಟಣ. ಮೈಸೂರು ರಾಜ ಬೆಂಗಳೂರು ರಾಜನಿಗೆ ತಂಗಿಯನ್ನು ಕೊಟ್ಟು ಮದ್ವೆಮಾಡಿದ. ಬೆಂಗಳೂರು ರಾಜನಿಗೆ ಒಬ್ಬಳು ಹೆಣ್ಣುಮಗಳಿದ್ದಳು. ಮೈಸೂರು ರಾಜನಿಗೆ ಇಬ್ಬರು ಗಂಡುಮಕ್ಕಳಿದ್ದರು. ತಂಗಿ ಮಗಳನ್ನು ತಂದು ಮದುವೆ ಮಾಡಿಕೊಳ್ಳಬೇಕು ಎಂದು ಮೈಸೂರು ರಾಜ ಯೋಚಿಸಿದ. ಲಕ್ಷಣವಾಗಿ ಎಂಟುದಿನ ಲಗ್ನ ಮಾಡಿದರು" ಎಂದು ಭಾಗಲಕ್ಷ್ಮಿ ಕಥೆಯು ಪ್ರಾರಂಭವಾಗುತ್ತದೆ.

'ಸೊಪ್ಪಿನ ಗುಡ್ಲಕ್ಕ' ಕಥೆಯಲ್ಲಿ ಕಥೆಯು ಪ್ರಾರಂಭವಾಗುವುದು "ಒಂದು ಪಟ್ಟಣ. ಆ ಪಟ್ಟಣಕ್ಕೆ ಒಬ್ಬ ದೊರೆ. ಆ ದೊರೆಗೆ ಏಳು ಜನ ಹೆಣ್ಣು ಮಕ್ಕಳು. ಆರು ಜನಕ್ಕೆ ಲಗ್ನಮಾಡಿದ್ದ. ಕಿರಿಯವಳನ್ನು ಮನೆವಾಳತನಕ್ಕೆ ಮಾಡಬೇಕು ಎಂದು ಇಟ್ಟುಕೊಂಡಿದ್ದ.

'ಸಾವಿತ್ರಮ್ಮ' ಕಥೆಯಲ್ಲಿಯೂ "ಒಂದು ಪರದೇಶಿ ಹೆಣ್ಣು ಮಗು ಇತ್ತು. ಸಾವಿತ್ರಮ್ಮ ಎಂದು ಆ ಹುಡುಗಿಗೆ ಹೆಸರು. ಎಂಟುವರ್ಷಕ್ಕೆ ಆ ಕಾಲಕ್ಕೆ ಮದುವೆಯಾಯಿತು. ಒಂಬತ್ತು ವರ್ಷಕ್ಕೆ ಗಂಡ ತೀರಿಕೊಂಡ ತಾಯಿ ಇಲ್ಲ, ತಂದೆ ಇಲ್ಲ'. ಹೀಗೆ ಪ್ರಾರಂಭವಾಗುತ್ತದೆ.

ಹೀಗೆ ಮಹಿಳೆಯ ಕೇಂದ್ರವಾಗಿಟ್ಟುಕೊಂಡು ಹೆಣೆದಿರುವ ಕಥೆಗಳು ಮದುವೆಯ ನಂತರ ಮದುವೆಯಿಂದ ಪ್ರಾರಂಭವಾಗುತ್ತವೆ. ಕೆಲವು ಕಥೆಗಳು ಸಂತಾನ ಪ್ರಾಪ್ತಿ ಇಲ್ಲದಿರುವ, ಬಂಜೆತನದಿಂದ ಕೂಡಿದ ಹೆಣ್ಣಾಗಿದ್ದಾಗ ಕಥೆಯು ಅಲ್ಲಿಂದ ಪ್ರಾರಂಭವಾಗುತ್ತವೆ. ಅವುಗಳಲ್ಲಿ 'ಪುಣ್ಯದ ಲಕ್ಷ್ಮಿ' ಕಥೆಯು ಒಂದು. ಈ ಕಥೆ "ಒಂದೂರಿನಲ್ಲಿ ಒಬ್ಬ ದೊರೆ ಇದ್ದ ಅವನಿಗೆ ಆರು ಜನ ಹೆಂಡತಿಯರಿದ್ದರು. ಆ ಆರು ಜನಕ್ಕೂ ಮಕ್ಕಳಿರಲಿಲ್ಲ" ಎಂದು ಕಥೆ ಪ್ರಾರಂಭವಾಗುತ್ತದೆ. ಇಲ್ಲಿ ಮೇಲಿನ ಎಲ್ಲಾ ಕಥೆಗಳೂ ಸ್ತ್ರೀ ಕೇಂದ್ರಿತ ಕಥೆಗಳೇ ಆಗಿವೆ. ಪ್ರಾರಂಭದಲ್ಲಿ ಯಾವುದೇ ಆಘಾತವಾಗದೆ ಸಾವಧಾನವಾಗಿ ಕಥೆ ಪ್ರಾರಂಭವಾಗಿ ಮಧ್ಯದಲ್ಲಿ ಎಲ್ಲಾ ಕಷ್ಟಗಳನ್ನು ಎದುರಿಸಿ ಎಲ್ಲವನ್ನೂ ಗೆದ್ದು ಸುಖದಿಂದ ಅಂತ್ಯವಾಗುತ್ತದೆ.

ಸ್ತ್ರೀಯನ್ನು ಕುರಿತಾದ ಕೆಲವು ಕಥೆಗಳಲ್ಲಿ ತಾಯಿ, ಹೆಂಡತಿ ಅಥವಾ ಮಗಳು, ಗಂಡ ಅಥವಾ ತಂದೆಯರು ಪರಿಹರಿಸಲಾಗದ ಸಮಸ್ಯೆಗಳನ್ನು ಸಾಹಸ ಕ್ರಿಯೆಗಳ ಮೂಲಕ, ಬುದ್ಧಿವಂತಿಕೆಯ ಮೂಲಕ ಪರಿಹರಿಸುತ್ತಾಳೆ. ಆದರೆ ಪುರುಷನಷ್ಟು ಸಾಹಸ ಕ್ರಿಯೆಗಳು ಸ್ತ್ರೀಯಲ್ಲಿ ಕಂಡುಬರುವುದಿಲ್ಲ.

'ಸಾವಿತ್ರಮ್ಮ' ಎಂಬ ಕಥೆಯು ದೈವೀಚೆಗೆ ಸಂಬಂಧಪಟ್ಟಂತ ಕಥೆಯಾಗಿದೆ. ಈ ಕಥೆಯಲ್ಲಿ ಸಾವಿತ್ರಮ್ಮ ಕಥಾನಾಯಕಿ. ನಾಯಕಿಯು ತಂದೆ ತಾಯಿ ಇಲ್ಲದ ಅನಾಥೆಯಾಗಿ ಭಿಕ್ಷೆಬೇಡಿ ಬದುಕುತ್ತಿದ್ದ ಸಂದರ್ಭದಲ್ಲಿ ಸಮಾಜದಲ್ಲಿ ಅವಳಿಗಾದ ನೋವನ್ನು ಸೂರ್ಯನಾರಾಯಣನ ಹತ್ತಿರ ಹೇಳಿಕೊಳ್ಳುವುದು ಈ ಮೂಲಕ ಸೂರ್ಯ ಸಾವಿತ್ರಮ್ಮನಿಗೆ ಎಲ್ಲಾ ಐಶ್ವರ್ಯವನ್ನು ನೀಡಿ, ಈಕೆಗೆ ಗಂಡನಾಗಿಯೂ ಸುಖವನ್ನು ನೀಡುತ್ತಾನೆ. ಅವರಿಗೆ ಹುಟ್ಟಿದ ಮಗು ಹಂದಿಮರಿಯಾಗಿ ಹುಟ್ಟಿ, ಸಮಾಜದಲ್ಲಿ ಅವಹೇಳನಕ್ಕೆ ಗುರಿಯಾಗಿದ್ದ ಸಂದರ್ಭದಲ್ಲಿ ಮತ್ತೆ ಸೂರ್ಯ ದೇವನಿಗೆ ಮೊರೆ ಇಟ್ಟು ತನ್ನ ಕಷ್ಟವನ್ನು ಪರಿಹರಿಸಿಕೊಳ್ಳುವುದು ಇಲ್ಲಿ ಮುಖ್ಯವಾಗಿದೆ. ಮರಿಗೆ ಹತ್ತು ವರ್ಷ ತುಂಬಿತು. ಮತ್ತೆ ಕೇಳಿತು "ನೀಲಮ್ಮ ನಾನು ಗಂಡಸು ಕೈನೆರೆಗೆ ಬಂದಿದ್ದೇನೆ. ಮದುವೆ ಮಾಡ್ತಾಳೋ ಇಲ್ಲವೋ ಕೇಳು" ಎಂದು ಹಂದಿ ಮರಿಯು ಕೇಳುತ್ತದೆ. ಹಂದಿಮರಿಗೆ ಹೆಣ್ಣು ನೋಡಿ ಮದುವೆ ಮಾಡಲು ಹೆಣ್ಣು ಸಿಗದಿದ್ದಾಗ ಒಂದು ಬ್ರಾಹ್ಮಣ ಹುಡುಗಿಯನ್ನು ತಂದು ಸಾಕಿ ಕೊನೆಗೆ ಅವಳಿಗೆ ಹಂದಿಯ ಜೊತೆಯಲ್ಲಿ ಮದುವೆಮಾಡುವಾಗ ಹಂದಿಯು ಸುಂದರ ರಾಜಕುಮಾರನಾಗುತ್ತಾನೆ.

ಇಲ್ಲಿ ಕಥಾನಾಯಕಿಯು ಜಾತಿಯಲ್ಲಿ ಮೇಲ್ವರ್ಗಕ್ಕೆ ಸೇರಿದವಳಾಗಿದ್ದು ಯಾವುದೇ ಆಧಾರಗಳಿಲ್ಲದ ಜೀವನ ನಡೆಸುವುದು ಮತ್ತು ಸಮಾಜದಲ್ಲಿ ಗಂಡನಿಲ್ಲದ ತಾಯಿಗೆ ಸಿಗುವ ಸ್ಥಾನ-ಮಾನ ಅವಳ ಸ್ಥಿತಿಯನ್ನು ಈ ಕಥೆಯಲ್ಲಿ ಕಾಣುತ್ತೇವೆ. ಸಾವಿತ್ರಮ್ಮ ಮೇಲ್ವರ್ಗದ ಜಾತಿಯವಳಾಗಿದ್ದರೂ ಅದಕ್ಕೂ ಮೊದಲು ಅವಳು ಒಂದು ಹೆಣ್ಣು ಅನ್ನುವುದು ಸತ್ಯವಾಗಿದೆ. ಅಂದರೆ ಇಲ್ಲಿ ಕೇವಲ ಕೆಳವರ್ಗದಲ್ಲಿ ಮಾತ್ರ ಕಷ್ಟಕಾರ್ಪಣ್ಯಗಳು ಇರುತ್ತವೆ ಅನ್ನುವುದಷ್ಟೇ ಅಲ್ಲ, ಸಮಾಜದಲ್ಲಿ ಪುರುಷ ಪ್ರಧಾನ ಮೇಲ್ವರ್ಗದ ಮಹಿಳೆಯನ್ನು ನಿಂದಿಸದಿರದು, ಇಲ್ಲಿ ಮೇಲ್ವರ್ಗದ ಮಹಿಳೆಯೂ ಕೂಡ ಅಸ್ಪೃಶ್ಯಳಾಗಿರುವುದನ್ನು ಈ ಕಥೆಯಲ್ಲಿ ತಿಳಿಯಬಹುದು. ಅಂದಿನ ಸಮಾಜದಲ್ಲಿ ಸಾಮಾಜಿಕ ಸ್ಥಿತಿ-ಗಳು ಹೇಗಿದ್ದವು ಎಂಬುದನ್ನು ಈ ಕಥೆಯಲ್ಲಿ ತಿಳಿಯಬಹುದು. ಒಂದು ಹೆಣ್ಣು ಸಮಾಜದಲ್ಲಿ ವಿವಾಹವಾಗದೆ ಅನೈತಿಕ ಸಂಬಂಧಗಳ ಮೂಲಕ ಮಕ್ಕಳನ್ನು ಪಡೆದಾಗ ಎದುರಾಗುವ ಸಮಸ್ಯೆಗಳು, ಸಮಾಜ ಅವರನ್ನು ಯಾವ ದೃಷ್ಟಿಯಿಂದ ನೋಡುತ್ತದೆ ಮತ್ತು ಇಲ್ಲಿ ಅನೈತಿಕ ಸಂಬಂಧವನ್ನು ಹೊಂದಲು ಒಂದು ಗಂಡು ಇಲ್ಲದೆ ಸಾಧ್ಯವಿಲ್ಲ. ಆದರೂ ಹೆಣ್ಣಿನ ನಡತೆಯೇ ಇಲ್ಲಿ ದೃಶ್ಯವಾಗಿದೆ. ಗಂಡು ಅದೃಶ್ಯವಾಗುತ್ತಾನೆ. ಇಲ್ಲಿಯೂ ಕೂಡ ಪುರುಷ ಪ್ರಧಾನ ವ್ಯವಸ್ಥೆ ಕಾರ್ಯನಿರ್ವಹಿಸುವುದನ್ನು ಮರೆಯುವಂತಿಲ್ಲ.

'ಮಳೆರಾಯನ ಮಡದಿ' ಕಥೆಯಲ್ಲಿ ಮಹಿಳೆಯೇ ಇಲ್ಲಿ ಕಥಾನಾಯಕಿಯಾಗಿದ್ದಾಳೆ. ಏಳು ಜನ ಗಂಡು ಮಕ್ಕಳನಂತರ ಕೊನೆಯಾಕೆ ಮಳೆರಾಯನ ಮಡದಿ. ಕೊನೆಯ ಮಗಳು ಮತ್ತು ಏಳು ಜನ

ಅಣ್ಣಂದಿರ ಪ್ರೀತಿಯ ತಂಗಿಯಾಗಿದ್ದ ಇವಳನ್ನು ಕೊನೆಯ ಮಗಳು ಮತ್ತು ಏಳು ಜನ ಅಣ್ಣಂದಿರ ಪ್ರೀತಿಯ ತಂಗಿಯಾಗಿದ್ದ ಇವಳನ್ನು ಎಲ್ಲರು ಪ್ರೀತಿಯಿಂದ ಸಾಕಿ ಸಲುಹಿದ್ದರು. ಮನೆಯಿಂದ ಹೊರಗೆ ಹೋಗದ ರೀತಿಯಲ್ಲಿ ಸುಖವಾಗಿಟ್ಟದ್ದರು. ರಾಗಿ ಒಣಗಿಸಲು ಮಳೆಯ ಕಾರಣದಿಂದ ಆಗಿದ್ದಾಗ ಮಳೆಗೆ ಈ ಹುಡುಗಿ "ಈ ಹಾಳು ಮಳೆ ಈಗ ಬರೋದು ಸಾಯಂಕಾಲವಾದರೂ ಬರ್ಬಾರ್ದೆ" ಎಂದಳು. ಆಗ ಮಳೆ ನಿಂತು ಬಿಸಿಲು ಬಂತು. ಇಲ್ಲಿ ಮಳೆರಾಯ ಇವಳ ಮಾತನ್ನು ಕೇಳಿ ರಾತ್ರಿ ಅವಳ ಮನೆಗೆ ಬಂದು ಅವಳ ಜೊತೆ ಸೇರಿ ಇಬ್ಬರೂ ಒಂದಾದರು. ಹೀಗೆ ಹಲವು ದಿನಗಳು ನಡೆದು ಮಳೆರಾಯನ ಮಡದಿ "ನನಗೆ ಒಂದು ಹೂವಿನ ಸೀರೆ ಮೊಗ್ಗಿನ ರವಿಕೆ ಬೇಕು" ಎಂದು ಕೇಳಿದಳು. ಅದನ್ನು ಕೊಡುವ ಸಂದರ್ಭದಲ್ಲಿ ಸೀರೆಗೆ ಸೀಗೆ ಮುಳ್ಳು ಅಂಟಿಸಿಕೊಟ್ಟಳು "ಈ ಸೀರೆ ರವಿಕೆ ಉಡುವಂಥಾ ಸೂಳೆಯನ್ನು ಮಳೆರಾಯ ಇಟ್ಟುಕೊಂಡಿರಬಹುದು" ಎಂದು ಆತನ ಹೆಂಡತಿ ಹೇಳುತ್ತಾಳೆ.

ಇಲ್ಲಿಯೂ ಕೂಡ ಕಥಾನಾಯಕಿ ಹೆಣ್ಣಾಗಿದ್ದು ಅಲ್ಲಿ ಬರುವ ವಿರೋಧಿ, ಪ್ರತಿನಾಯಕಿ ಮಳೆರಾಯನ ಮಡದಿಯೇ ಆಗಿದ್ದಾಳೆ. ಇಲ್ಲಿ ನಾಯಕಿ ಮತ್ತು ಪ್ರತಿನಾಯಕಿಯರು ಸ್ತ್ರೀ ಆಗಿದ್ದು, ಮಳೆರಾಯನ ಹೆಂಡತಿ ಮಳೆರಾಯನ ಮಡದಿಯನ್ನು ತನ್ನ ಸ್ಥಾನಕ್ಕೆ ಬಿಟ್ಟುಕೊಳ್ಳಲು ಅವಳಿಗೆ ಇಷ್ಟವಿಲ್ಲ. ಇಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರುವಾಗಿ ವೈರಿಯಾಗಿ ಕಾಡುವುದು ಈ ಕಥೆಯಲ್ಲಿ ಮೂಡಿದೆ. ಯಾವುದೇ ಹೆಣ್ಣು ತನ್ನ ಸ್ಥಾನವನ್ನು ಬಿಟ್ಟು ಕೊಡುವುದಿಲ್ಲ ಎಂಬ ಮಾತಿಗೆ ಇದು ಸಾಕ್ಷೀಕರಿಸಿದೆ. "ಈ ಸೀರೆ ರವಿಕೆಯನ್ನು ಉಡುವಂಥಾ ಸೂಳೆಯನ್ನು ಮಳೆರಾಯ ಇಟ್ಟು ಕೊಂಡಿರಬಹುದು" ಈ ಮಾತನ್ನು ಮಲೆರಾಯನ ಮೊದಲ ಹೆಂಡತಿ ಮಳೆರಾಯನ ಮಡದಿಗೆ ಹೋಲಿಸಿ ಹೇಳಲಾಗಿದೆ. ಒಂದು ಹೆಣ್ಣು ಮತ್ತೊಂದು ಹೆಣ್ಣನ್ನು ಅನೈತಿಕ ದೃಷ್ಟಿಯಲ್ಲಿ ಕಾಣುವುದು. ಇಲ್ಲಿ ಹೆಣ್ಣಿನ ಶೋಷಣೆ ಹೆಣ್ಣಿನಿಂದಲೇ ನಡೆಯುತ್ತದೆ.

ಸೀರೆಯಲ್ಲಿ ಸೀಗೆಮುಳ್ಳನ್ನೇ ಸಿಕ್ಕಿಸಿ ಕಳುಹಿಸುವುದು ಅವರಲ್ಲಿ ವೈರತ್ವದ ಭಾವನೆಯು ಎಷ್ಟು ಪ್ರಮಾಣದಲ್ಲಿ ಇತ್ತೆಂಬುದು ತಿಳಿಯುತ್ತದೆ. ಇಲ್ಲಿ ಸೌಂದರ್ಯಕ್ಕೆ ಹೆಣ್ಣು ಹೆಚ್ಚು ಹೊತ್ತು ಕೊಡುವುದು ಒಂದು ಸಹಜಗುಣವಾಗಿದೆ. ಮಳೆರಾಯನ ಮಡದಿಯನ್ನು ಕುರೂಪಗೊಳಿಸುವುದು ಇದರಿಂದ ಮಳೆರಾಯ ಮತ್ತು ಮಳೆರಾಯನ ಮಡದಿ ಮಧ್ಯೆ ವೈರತ್ವ ಭಾವನೆ ತರುವಂತಾಗಿದೆ.

ಮತ್ತೊಂದು ಕಥೆ 'ಸೊಪ್ಪಿನ ಗುಡ್ಲಕ್ಕ' ಕಥೆಯೂ ಕೂಡ ಸ್ತ್ರೀ ನಾಯಕತ್ವದ ಕಥೆಯಾಗಿದೆ. ಏಳು ಜನ ಹೆಣ್ಣು ಮಕ್ಕಳಲ್ಲಿ ಏಳನೆಯವಳು ಈ ಸೊಪ್ಪಿನ ಗುಡ್ಲಕ್ಕ ಇವರ ತಂದೆ ಎಲ್ಲಾ ಮಕ್ಕಳನ್ನು ಕರೆದು ಸುತ್ತಲೂ ಕೂರಿಸಿಕೊಂಡ.

"ನೀವು ಯಾರ ಭಾಗ್ಯ ಊಟ ಮಾಡ್ತಿರ?"

ಆರು ಜನವೂ "ನಿಮ್ಮ ಭಾಗ್ಯ" ಎಂದೇ ಉತ್ತರಕೊಟ್ಟರು

ಆದರೆ ಕಿರಿಯ ಮಗಳ ಮಾತಿಗೆ ದೊರೆಗೆ ಕೋಪಬರುತ್ತದೆ. ಅವಳು "ಅಪ್ಪಾಜಿ ನಿನ್ನ ಮನೇಲಿರೋತನಕ ನಿನ್ನ ಮನೇದು, ಆಚೆ ಹೋದ್ಮೇಲೆ ಅವರ ಮನೇದು" ಎಂದು ಹೇಳುತ್ತಾಳೆ. ಇದರಿಂದ ರಾಜ ಇವಳನ್ನು ಮನೆಯಿಂದ ಹೊರಗೆ ಇಡುತ್ತಾನೆ. ಅವಳನ್ನು ಸೊಪ್ಪಿನ ಗುಡ್ಲು ಹಾಕಿಡುವಂತೆ ಹೇಳುತ್ತಾನೆ. ಆದ್ದರಿಂದ ಅವಳನ್ನು ಸೊಪ್ಪಿನ ಗುಡ್ಲಕ್ಕ ಎಂದು ಕರೆಯಲಾಗಿದೆ.

ಸೊಪ್ಪಿನ ಗುಡ್ಲಕ್ಕನಿಗೆ ದೇವೇಂದ್ರರಾಯನ ಮಗನ ಜೊತೆ ಮದುವೆಯಾಗುತ್ತದೆ. ಅರಮನೆ ಕಟ್ಟಿ ಹಾಲುಬಾವಿ, ನೀರುಬಾವಿ ಕಟ್ಟಿಸಿ ಇವಳ ಸೇವೆಗೆ ಇಬ್ಬರು ದಾದಿಯರು ನೇಮಿಸಿ ಸುಖದಿಂದಿದ್ದರು. ಹೀಗಿರುವಾಗ ಮಗಳ ಸುಖಕಂಡ ಬಂದು ಅವಳು ಬದುಕುವುದನ್ನು ನೋಡುತ್ತಾರೆ. ಅಕ್ಕಂದಿರಿಗೆ ಅವಳ ಸುಖಸಂತೋಷ ನೋಡಿ ಅಸೂಯೆ ಪಡುತ್ತಾರೆ. ಏನಾದರೂ ಮಾಡಿ ಇವಳ ಗಂಡನನ್ನು ಕೊಲ್ಲುವ ಸಂಚು ರೂಪಿಸಿ ಹಾವನ್ನು ತಂದು ಮಳೆರಾಯನ ಮಗನನ್ನು ಕೊಲ್ಲುತ್ತಾರೆ. ಆಗ ದೇವೇಂದ್ರರಾಯನು ಮಗನನ್ನು ಮತ್ತೆ ಸೊಪ್ಪಿನಗುಡ್ಲಕ್ಕೆ ಮಾರುವೇಷಧರಿಸಿ ಅವನನ್ನು ಉಳಿಸಿಕೊಳ್ಳುತ್ತಾಳೆ.

ಇಲ್ಲಿ ನಾಯಕಿಗೆ ವೈರಿಗಳಾಗಿ ನಾಯಕಿಯ ಸೋದರಿಯರೇ ಕಾಡಲಾರಂಭಿಸಿದ್ದು ಪ್ರತಿನಾಯಕಿಯರ ಸ್ಥಾನದಲ್ಲಿ ನಿಲ್ಲುತ್ತಾರೆ. ಸೊಪ್ಪಿನಗುಡ್ಲಕ್ಕ ತಮ್ಮ ಒಡಹುಟ್ಟಿರುವ ತಂಗಿಯಾಗಿದ್ದರೂ ಆರ್ಥಿಕ ಸ್ಥಿತಿ-ಗತಿಗಳ ಮುಂದೆ ಸೋದರಿ ಎಂಬ ಭಾವನೆ ಮಣ್ಣಾಗಿ ಹೋಗಿ. ಸಮಾಜದಲ್ಲಿ ಅಂತಸ್ತು, ಸ್ವಾರ್ಥ ಸಾಧನೆ ರಕ್ತ ಸಂಬಂಧವನ್ನು ಮುರಿದು ಹಾಕುತ್ತದೆ. ಇಲ್ಲಿ ನಾಯಕಿ ಅವರ ಎಲ್ಲ ಮೋಸಗಳನ್ನು ನಿರ್ಭಯದಿಂದ, ಬುದ್ಧಿವಂತಿಕೆಯಿಂದ ಪರಿಹರಿಸಿಕೊಳ್ಳುತ್ತಾಳೆ. ಪ್ರತಿನಾಯಕಿಯರಲ್ಲಿ ವಿರೋಧಿಗಳಿಗೆ ಇರಬೇಕಾದ ಎಲ್ಲ ಗುಣಗಳು ಅವರಲ್ಲಿ ಅಡಕವಾಗಿದೆ.

ಸಿರಿದೇವಿ ಕಥೆಯಲ್ಲಿ ಕಥಾನಾಯಕಿ ತನ್ನ ಮನೆಯಲ್ಲಿ ಉಪೇಕ್ಷೆಗೆ ಒಳಪಡುವುದು. ಅವಳನ್ನು ತಂದೆ ದೂರದ ಕಾಡಿನಲ್ಲಿ ಕಾಡುಪಾಪಕ್ಕೆ ಕೊಟ್ಟು ಮದುವೆಮಾಡಿ, ಬಿಟ್ಟುಬರುವುದು, ನಂತರ ದೈವದ ಸಹಾಯದಿಂದ ಕಾಡುಪಾಪ ಸುಂದರ ರಾಜಕುಮಾರನಾಗುವುದು. ಅದಕ್ಕೆ ಕಾರಣವನ್ನು ಅವಳ ಪತಿವ್ರತೆಯ ಪ್ರತೀಕವೆಂದು ಮೊದಲು ಮಾಡುವುದು. ನಂತರ ತನ್ನ ಗಂಡನನ್ನು ಒಳ್ಳೆಯ ವಿದ್ಯಾವಂತನನ್ನಾಗಿ, ಬುದ್ಧಿವಂತನನ್ನಾಗಿ ಮಾಡುವುದು. "ನನ್ನ ಗಂಡನಿಗೆ ವಿದ್ಯೆ ಕೊಟ್ಟೆ; ಮನೆ ಕೊಟ್ಟೆ; ಈಗ ಬದುಕುವ ದಾರಿ ಹ್ಯಾಗೆ?" ಹೀಗೆ ಕಥೆಯಲ್ಲಿ ದೈವೀ ಕಲ್ಪನೆಯು ಪ್ರತಿಯೊಂದು ಕಷ್ಟದಲ್ಲಿಯೂ ಪ್ರತ್ಯಕ್ಷವಾಗುತ್ತದೆ. ಸಿರಿದೇವಿ ತನ್ನ ಗಂಡನಿಗೆ ಕೆಲಸವನ್ನು ಗೊತ್ತುಮಾಡಲು ಕೇಳಿಕೊಂಡಾಗ ರಾಜನ ಆಸ್ಥಾನದಲ್ಲಿ ಕೆಲಸದೊರಕುತ್ತದೆ. ಬ್ರಹ್ಮದೇವರಿಗೆ ಕೊಟ್ಟ ಸಾಲವನ್ನು ಬಡ್ಡಿ ಸಮೇತ ವಸೂಲು ಮಾಡಿಕೊಂಡು ಬರಬೇಕು. ಸಾಲ ವಸೂಲು ಮಾಡುವಾಗ ಮತ್ತೆ ಅನೇಕ ಘಟನೆಗಳ ವೃತ್ತಾಂತವನ್ನು ಈ ಕಥೆಯಲ್ಲಿ ಹೆಣೆಯಲಾಗಿದೆ.

ಇಲ್ಲಿ ಕಥಾನಾಯಕಿ ಹೆಣ್ಣಾಗಿದ್ದರೂ ಪುರುಷರ ಸಹಾಯವಿಲ್ಲದೆ ಯಾವುದೇ ಕಾರ್ಯಪೂರ್ಣಗೊಳ್ಳುವುದಿಲ್ಲ. ಮಗಳಿಗೆ ತನ್ನ ತಂದೆಯೇ ವಿಘ್ನಮಾಡುವುದು ಈ ಕಥೆಯಲ್ಲಿ ಕಾಣಬಹುದು. ತನ್ನ ಆಸ್ತಿಯಲ್ಲಿ ಯಾವುದೇ ಪಾಲು ನೀಡುವುದಿಲ್ಲ ಎಂಬ ನಿರಾಕರಣೆಯನ್ನು ನೋಡುತ್ತೇವೆ. "ಅರರೇ

ಹಿರಿಯವಳು ನನ್ನ ಮಕ್ಕಳಾಗುವತ್ತಿಗೆ "ನಿನ್ನ ಆಶೀರ್ವಾದದಿಂದ ಚೆನ್ನಾಗಿದ್ದೀವಿ" ಎಂದರು ಇವಳಿಗೆ ದೇವರಂತೆ ದೇವರು' ಎಂದು ಅವಳ ತಂದೆ ಸಿಟ್ಟಾಗುವುದು. ಅವಳ ಮುಖವನ್ನೇ ನೋಡಬಾರದು ಎಂದು ಮಂಚದ ಮೇಲೆ ಮುಖ ಅಡಿಯಾಗಿ ಮಲಗುವುದು. ಇಲ್ಲಿಯೂ ಪುರುಷಾಧಿಕಾರದ ಪ್ರಭಾವವನ್ನೇ ಕಾಣುತ್ತೇವೆ.

"ಹೂವಿನ ಸುಪ್ಪತ್ತಿಗೆ ರಾಣಿ" ಕತೆಯಲ್ಲಿ ಹೆಸರೇ ಹೇಳುವಂತೆ ರಾಣಿ ಹೂವಿನ ಸುಪ್ಪತ್ತಿಗೆಯಲ್ಲೇ ಮಲಗುತ್ತಿದ್ದಳು. ರಾತ್ರಿ ವೇಳೆ ಲಕ್ಷ್ಮಿ ಅವಳ ಮನೆಗೆ ಬಂದು "ನೀನು ಇಷ್ಟು ಅಹಂಕಾರದಿಂದ ಮೆರೀತಿಯಾ ನಿನ್ನ ಬಿಟ್ಟು ನಾನು ಹೊರ್ಟೋಗ್ತೀನಿ" ಎಂದು ಹೇಳುತ್ತಾಳೆ. "ಏಳು ಸಮುದ್ರದಾಚೆ ಕೀಳು ಸಮುದ್ರ; ಅಲ್ಲೊಬ್ಬ ರಾಜ; ಅಲ್ಲಿ ನೀನು ಸೀಗೆಮೆಳೆಗೆ ಸಿಕ್ಕೊಳ್ಳೇ ಹೋಯ್ತೀಯ; ಮುಕ್ಕರವಿ ತಕ್ಕೊಂಡು ಮೂರಪಟ್ಟೆ ಬರೆಸ್ಕೊಂಡು ನೀರಿಗೆ ಹೋಗ್ದೆ ಇರ್ತೀಯಾ? ತಲೆಮೇಲೆ ದೀಪ ಹೊಕ್ಕೊಂಡೋಗ್ದೆ ಇರ್ತೀಯ ಹನ್ನೆರಡ್ಮೆಟ್ಟಲು ನೀರ್ನ ಹಿಗ್ಗದೆ ಹೋಗ್ತೀಯ!" ಎಂಬ ಕಷ್ಟಗಳನ್ನು ಹೇಳಿ ಹೋಗುತ್ತಾಳೆ.

ಈ ಕಥೆಯಲ್ಲಿ ಮಹಿಳೆಯೇ ಪ್ರಮುಖಪಾತ್ರದಲ್ಲಿದ್ದರೂ ಆ ಪಾತ್ರದ ಹಿನ್ನೆಲೆಯಲ್ಲಿ ಅನೇಕ ರೀತಿಯ ಏಳುಬೀಳುಗಳನ್ನು ಒಳಗೊಂಡಿದೆ. ರಾಜ್ಯವನ್ನಾಳುವ ರಾಜನ ಹೆಂಡತಿಯಾದರೂ ಸರಿ ಕಷ್ಟಗಳು ಯಾರನ್ನೂ ಬಿಡುವುದಿಲ್ಲ. ಕಾಲಚಕ್ರ ತಿರುಗಲೇಬೇಕು. ತಿರುಗುವಾಗ ಮೇಲಿನದು ಕೆಳಕ್ಕೆ, ಕೆಳಗಿನದು ಮೇಲಕ್ಕೆ ಹೋಗುತ್ತದೆ. ಸುಖವುಂಡವರು ಕಷ್ಟಗಳನ್ನು ಉಣಲೇಬೇಕು, ಕಷ್ಟವುಂಡವರು ಸುಖವನ್ನು ಉಣ್ಣುತ್ತಾರೆ ಎಂಬುದನ್ನು ಹೂವಿನ ಸುಪ್ಪತ್ತಿಗೆ ರಾಣಿ ಕಥೆಯು ತಿಳಿಸುತ್ತದೆ.

ಪ್ರಸ್ತುತ ಕಥೆಯಲ್ಲಿ ಒಂದು ಹೆಣ್ಣಿಗೆ ವಿಧಿಸುವ ಶಿಕ್ಷೆ, ಕಷ್ಟಗಳನ್ನು ತಿಳಿಯಬಹುದು. ಅಹಂಕಾರದಿಂದ ಮೆರೆಯುವವರಿಗೆ ದೈವವೇ ಶಿಕ್ಷೆ ವಿಧಿಸುತ್ತದೆ ಎಂಬ ಅರಿವು ಉಂಟಾಗುತ್ತದೆ.

ತಂದೆಯೇ ತನ್ನ ಮಗಳನ್ನು ವಿವಾಹವಾಗುವುದಕ್ಕೆ ಹೊರಟ ಸಂದರ್ಭವನ್ನು ಪುಣ್ಯದ ಲಕ್ಷ್ಮಿ ಕತೆಯು ಹೇಳುತ್ತದೆ. ಈ ಕಥೆಯು ಮತ್ತೊಂದು ಮುಖವಾಗಿ ಬಂಜೆತನವು ಮಹಿಳೆಯ ಮೇಲೆ ಉಂಟುಮಾಡುವ ಪ್ರಭಾವವನ್ನು ತಿಳಿಸುತ್ತದೆ. ಅದು ಸಮಾಜದಲ್ಲಿ ಯಾವ ರೀತಿ ಪರಿಣಾಮವನ್ನು ಬೀರುತ್ತೆ ಎಂಬುದನ್ನು ತಿಳಿಸುತ್ತದೆ.

ಒಬ್ಬ ರಾಜ ಸಮಾಜದ ಮತ್ತು ರಾಜ್ಯದ ಮೇಲ್‌ಸ್ತರದ ಭಾಗವಾಗಿದ್ದರೂ ಅವನು ಮಕ್ಕಳನ್ನು ಪಡೆಯುವ ಹವಣಿಕೆಯಲ್ಲಿರುತ್ತಾನೆ. ಇದು ಅವನ ಹೆಂಡತಿಯರಲ್ಲೂ ಅನಿವಾರ್ಯವಾಗುತ್ತದೆ. ರಾಜನಿಗೆ ಸಂತಾನ ತನ್ನ ರಾಜ್ಯ ಉಳಿವಿಗಾಗಿ ಬೇಕಾದರೆ, ರಾಣಿಯರಿಗೆ ತಮ್ಮ ಜೀವನ ಮತ್ತು ಜೀವದ ಪ್ರಶ್ನೆಯಾಗಿ ಕಾಡುತ್ತಿರುತ್ತದೆ. ರಾಜನಿಗೆ ತನ್ನ ಪುರುಷಾರ್ಥದ ಪ್ರಶ್ನೆಯಾಗಿಯೂ ಕಾಡುವುದು ಸತ್ಯದ ಸಂಗತಿಯಾಗಿದೆ.

ರಾಜನಿಗೆ ಆರು ಜನ ಹೆಂಡತಿಯರಿದ್ದು ಆರುಜನಕ್ಕೂ ಮಕ್ಕಳಾಗದಿರುವುದಕ್ಕೆ ರಾಜ ಮತ್ತೊಂದು ಮದುವೆಯಾಗಲು ಹೊರಡುತ್ತಾನೆ. ಪುಣ್ಯದ ಲಕ್ಷ್ಮಿಯನ್ನು ಮದುವೆಯಾಗುತ್ತಾನೆ. ಅವಳು ತುಂಬು

ಗರ್ಭಿಣಿಯಾಗುತ್ತಾಳೆ. ರಾಜ ಅದೇ ಸಮಯದಲ್ಲಿ ಕಾಡಿಗೆ ಬೇಟೆಯಾಡಲು ಹೊರಡುತ್ತಾನೆ. ತನ್ನ ಆರು ಜನ ಹೆಂಡತಿಯರಿಗೆ ಕಿರಿಯ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಹೇಳಿ ಹೊರಡುತ್ತಾನೆ.

ಹೆರಿಗೆಯ ಸಮಯದಲ್ಲಿ "ಏನಮ್ಮಿ ಇವಳು ಮಕ್ಕಳ ಹೆತ್ತುಕೊಂಡರೆ ದೊರೆ ನಮ್ಮನ್ನು ಕಣ್ಣಿಂದ ನೋಡ್ತಾನೆ" ಅವಳ ಹತ್ತಿರ ಬಂದು "ನಿಮ್ಮ ಸೀಮೆ ಹೆರಿಗೆ ಮಾಡಿಸಾನೋ? ನಮ್ಮ ಸೀಮೆ ಹೆರಿಗೆ ಮಾಡಿಸಾನೋ? "ನಿಮ್ಮ ಸೀಮೆದ್ನೆ ಮಾಡಿಸಿ" ಎಂದಳು. ಅವರು ಮಗಳ ಸಾವೆ ಬೆನ್ನಿಗೆ ಕಟ್ಟಿ ಅವಳ ಕಣ್ಣು ಕಟ್ಟಿ ಹನ್ನೆರಡು ಕಾಲು ಏಣಿಯ ಮೇಲೆ ಹತ್ತಿಸಿ ಇಳಿಸಿದರು.

ಈ ಕಥೆಯಲ್ಲಿ ಪುಣ್ಯದ ಲಕ್ಷ್ಮಿ ಕಥಾನಾಯಕಿ ಆಗಿದ್ದು ಅವಳ ವೈರಿಯಾಗಿ ಅವಳ ಸವತಿಯವರು ಕಷ್ಟಗಳನ್ನು ಕೊಡುತ್ತಾರೆ. ಇಲ್ಲಿ ಸ್ತ್ರೀಯು ನಾಯಕಿ ಮತ್ತು ಪ್ರತಿನಾಯಕಿಯರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾಳೆ. ಬಂಜೆತನದ ಮುಂದೆ ಒಂದು ಪ್ರಾಣವೂ ಕೂಡ ಕುಬ್ಜವಾಗುತ್ತದೆ. ಇವರು ತಮ್ಮ ಬಂಜೆತನವನ್ನು ನೀಗಿಸಲು ಮತ್ತೊಂದು ಪ್ರಾಣವನ್ನು ತೆಗೆಯುವ ಅಥವಾ ಅವಳನ್ನು ಬಂಜೆಮಾಡುವ ಯತ್ನ ಸ್ತ್ರೀಯರಲ್ಲೇ ನಡೆಯುವುದು ಇಲ್ಲಿ ವಿಷಾಧಕರವಾಗಿದೆ.

ಮೇಲಿನ ಕಥೆಗಳೆಲ್ಲವೂ ಸಾಮಾನ್ಯವಾಗಿ ರಮ್ಯ ಕಥೆಗಳಿಗೆ ಸೇರಿದವುಗಳಾಗಿವೆ. ಈ ಕತೆಗಳ ವಸ್ತು ವಾಸ್ತವಕ್ಕೆ ಹೆಚ್ಚು ಸಮೀಪವಾದುದು. ಕಲ್ಪನೆಯ ಅಂಶಗಳು ಇಲ್ಲಿ ತೀರಾ ಸ್ವಲ್ಪ ಪ್ರಮಾಣದಲ್ಲಿ ಕಾಣಿಸುತ್ತವೆ. ಈ ಕಥೆಗಳಲ್ಲಿ ನಾಯಕಿ ಸಾಮಾನ್ಯ ಮಾನವಳಾಗಿದ್ದಾಳೆ. ಇವಳ ಆಸೆ ಆಕಾಂಕ್ಷೆ, ಕಷ್ಟ ಸುಖ, ದುಃಖ, ಸಮಸ್ಯೆಗಳೆಲ್ಲವೂ ಮಾನವ ಜೀವನದ ಪರಿಮಿತಿಯೊಳಗೆ ಬರುವಂಥವುಗಳಾಗಿವೆ. ಇಲ್ಲಿ ನಾಯಕಿ ಎದುರಿಸಬೇಕಾಗಿರುವುದು ಅತಿಮಾನುಷ ಅಡಚಣೆಗಳನ್ನಲ್ಲ, ಮಾನವರಲ್ಲೇ ದುಷ್ಟರೂ, ಕ್ರೂರಿಗಳೂ, ನಿರ್ದಯಿಗಳೂ, ವೈರಿಗಳೂ ಆದವರನ್ನು. ಅಂತಹ ಕ್ರೂರ ವ್ಯಕ್ತಿಗಳಿಂದ ತೊಂದರೆಗೊಳಗಾದ ಇಲ್ಲಿನ ಒಳ್ಳೆಯ ವ್ಯಕ್ತಿಗಳು ಅವುಗಳೆಲ್ಲವನ್ನು ನಿವಾರಿಸಿ ಸುಖ ಕಾಣುತ್ತಾರೆ. ಇಲ್ಲವೇ ಸಹನೆಯಿಂದ ಅವೆಲ್ಲವನ್ನೂ ಸಹಿಸಿಕೊಂಡು ಕೊನೆಗೆ ಸುಖಪಡೆಯುತ್ತಾರೆ. ಉದಾಹರಣೆಗೆ ಪುಣ್ಯದ ಲಕ್ಷ್ಮಿ ಕಥೆಯಲ್ಲಿ ಕಥಾನಾಯಕಿಯಾದ ಪುಣ್ಯದ ಲಕ್ಷ್ಮಿಯು ತನ್ನ ಸವತಿಯರಿಂದ ಹೆರಿಗೆ ಸಮಯದಲ್ಲಿ ಅನುಭವಿಸಿದ ನೋವು, ಯಾತನೆ ಒಂದು ಕಡೆಯಾದರೆ, ಮತ್ತೊಂದು ಕಡೆ ತನ್ನ ಗಂಡನಿಂದ ಅವಹೇಳನಕ್ಕೆ ಗುರಿಯಾಗುವುದು. ನಿಜ ಸ್ಥಿತಿ ಗೊತ್ತಾದ ಮೇಲೆ ಕೊನೆಯಲ್ಲಿ ತನ್ನ ಗಂಡನ ಜೊತೆಯಲ್ಲಿ ಸುಖವಾಗಿರುವುದು.

ತಾವರೆಯ ಹೂ ಕಥೆಯಲ್ಲಿ ರಾಜಕುಮಾರಿಯು ತನ್ನ ಸೋದರನಾದ ಅಣ್ಣನಿಂದಲೇ ಸಾಯುವುದು ದುರಂತವೇ ಸರಿ. ತಂಗಿ ಊಟ ಮಾಡುತ್ತಿದ್ದಾಗ ಅವಳ ಕೈಯಲ್ಲಿ ಒಂದು ತುತ್ತು, ಬಾಯಲ್ಲೊಂದು ತುತ್ತು ಇದ್ದವು. ಆಗ ಅಣ್ಣ ಚಂದ್ರಾಯುಧ ತೆಗೆದು ಹಿಂದಿನಿಂದ ಬಂದು ತಂಗಿಯ ತಲೆ ಕಡಿದುಬಿಟ್ಟು. ಒಡವೆಗಳೆಲ್ಲವನ್ನು ಬಾಚಿಕೊಂಡು ತಲೆಯನ್ನು ತಾವರೆ ಕೊಳಕ್ಕೆ ಎಸೆದು ಹೊರಟು ಹೋದ.

ಇಲ್ಲಿ ಯಾವತಪ್ಪು ಮಾಡದ ತಂಗಿಯನ್ನು ಅಂದರೆ ಒಂದು ಹೆಣ್ಣನ್ನು ಒಂದು ಹೆಣ್ಣಿಗಾಗಿ ಮತ್ತು ಹೊನ್ನಿಗಾಗಿ ಒಂದು ಜೀವ ತೆಗೆಯುವ ಧಾರುಣ ಘಟನೆ ತಾವರೆ ಹೂ ಕಥೆಯಲ್ಲಿದೆ. ದುರಾಸೆ ಮನುಷ್ಯನನ್ನು ಯಾವ ಮಟ್ಟಕ್ಕೆ ಎಳೆದೊಯ್ಯುತ್ತದೆ ಎಂಬುದನ್ನು ತಿಳಿಯಬಹುದು.

“ಮುಟ್ಬ್ಯಾಡ ಮುಟ್ಬ್ಯಾಡ ಗಂಡಯ್ಯ

ಮುಟ್ಟಿದ್ರೆ ಹೂವು ಬಾಡ್ಯಾತು;

ಕೈಲ್ಲೊಂದು ತುತ್ತು ಗಂಡಯ್ಯ;

ಬಾಯ್ಲೊಂದು ತುತ್ತು ಗಂಡಯ್ಯ;

ಅಣ್ಣ ಅನ್ನೋಕ ಋಣಪಾತ

ಕಚಕ್ಕನೆ ಕಡಿದ!”

ಇಲ್ಲಿ ಕಥಾ ನಿರೂಪಣೆ ಪದ್ಯರೂಪದಲ್ಲಿದ್ದು ಈ ಕಥೆಯನ್ನು ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು, ತರಮಕೋಟಿ ಪುಟ್ಟಲಿಂಗಮ್ಮ ಎಂಬ ಮಹಿಳೆ ಹೇಳಿದ್ದಾಳೆ. ಈ ಕಥೆಯ ನಿರೂಪಣೆಯು ಪುರುಷ ಹೇಳಿದ ಯಾವುದೇ ಕಥೆಯ ಮುಂದೆ ಸರಿದೂಗಬಲ್ಲದು. ಎಲ್ಲಾ ಪುರುಷ ವಕ್ತೃಗಳಿಗೂ ಇದು ಕಡಿಮೆ ಏನಿಲ್ಲ. ನಿರೂಪಣೆತಂತ್ರ ಕೇಳುಗರ ಮನಸ್ಸನ್ನು ನಿತ್ಯ ಕುತೂಹಲ ಭರಿತವಾಗಿರಿಸುವ ಕಲೆ ಮತ್ತು ಅವರನ್ನು ಭಾವನಾತ್ಮಕವಾಗಿಸುವ ಸನ್ನಿವೇಶ ಈ ಕಥೆಯಲ್ಲಿ ವ್ಯಕ್ತವಾಗುತ್ತದೆ.

ಈ ಕಥೆಯಲ್ಲಿ ಗಂಡು ಒಂದು ಆಯುಧ ಮಾತ್ರವಾಗಿದ್ದಾನೆ. ಸೂತ್ರ ಹೆಣ್ಣಾಗಿದ್ದಾಳೆ. ಇಂತಹ ಅಮಾನುಷ ಕೃತ್ಯಗಳು ಸಮಾಜದಲ್ಲಿ ಕೇವಲ ಅಣ್ಣನಿಂದ ಮಾತ್ರವಲ್ಲದೆ ಗಂಡ, ಅತ್ತೆ, ಮಾವ ಹೀಗೆ ಹಲವು ಮುಖಗಳಲ್ಲಿ ಕಾಣಸಿಗುತ್ತವೆ. ಕೊನೆಯಲ್ಲಿ ಇಂತಹ ಅಮಾನುಷವಾದ ಕೃತ್ಯಗಳಿಗೆ ಶಿಕ್ಷೆವಿಧಿಸಿರುವುದು ಕೇಳುಗರ ನಿಟ್ಟುಸಿರು ಬಿಟ್ಟು, ಸಮಾಧಾನಗೊಳ್ಳುತ್ತಾರೆ.

ಜೀ.ಶಂ.ಪ. ಅವರ ಕಥೆಗಳಲ್ಲಿ ತಾಯಿ ಚಿತ್ರಣ ಕೆಲವೇ ಕೆಲವು ಕಥೆಗಳಲ್ಲಿ ಮಾತ್ರ ಚಿತ್ರಿತಗೊಂಡಿದೆ. ಇವರ ಬಹುತೇಕ ಎಲ್ಲಾ ಕಥೆಗಳಲ್ಲಿ ಹೆಂಡತಿ ಮಗಳು, ಸೊಸೆಯಾಗಿ ಮಹಿಳೆ ಬಂದಿರುವುದೇ ಹೆಚ್ಚು.

ಕಥೆಗಳಲ್ಲಿ ತಾಯಿ ಹೆಚ್ಚಾಗಿ ದುಷ್ಟ ಪಾತ್ರಗಳಲ್ಲೇ ಕಾಣಿಸಿಕೊಂಡಿದ್ದಾಳೆ. ಈ ಸಂಕಲನದ ಒಂದು ಕಥೆ ‘ದುಷ್ಟತಾಯಿ’ ಹೆಸರೇ ಹೇಳುವಂತೆ ದುಷ್ಟತಾಯಿಯಾಗಿ ಈ ಕಥೆಯಲ್ಲಿ ಕಾಣಿಸಿಕೊಂಡಿದ್ದಾಳೆ. ಗಂಡನನ್ನು ಕಳೆದುಕೊಂಡು ಮಗನೇ ಇವಳಿಗೆ ಎಲ್ಲಾ ಆಶ್ರಯದಾತನಾಗಿದ್ದು, ಮಗನಾದವನು ತನ್ನ ಪ್ರಾಣವನ್ನು ಒತ್ತೆ ಇಟ್ಟು ತನ್ನ ತಾಯಿಯನ್ನು ಕಾಪಾಡುವುದು ಈ ಕಥೆಯಲ್ಲಿ ಕಾಣುತ್ತೇವೆ. ಆದರೆ ತಾಯಿಯಾದವಳಿಗೆ ತನ್ನ ಮಗ ಎಂಬ ಮಮತೆ ಕಿಂಚಿತ್ತೂ ಇಲ್ಲದೆ ಅವಳೇ, ತನ್ನ ಮಗನನ್ನು ಕೊಲ್ಲಲು ಹವಣಿಸುವುದು ಅಸಹ್ಯ ಹುಟ್ಟಿಸುತ್ತದೆ.

ಮಗ ಬೆಳೆದು ದೊಡ್ಡವನಾಗಿ ತನ್ನ ತಂದೆಯನ್ನು ಕೊಂದ ರಾಕ್ಷಸನನ್ನು ತಂದು ಮನೆಯಲ್ಲಿ ಕೂಡಿಹಾಕಿ ಕಾಡಿಗೆ ಹೋಗಿದ್ದಾಗ, ತಾಯಿ ರಾಕ್ಷಸನ ಜೊತೆಗೆ ಸೇರಿ ಅವನನ್ನೇ ಗಂಡನಾಗಿ ಮಾಡಿಕೊಂಡು ಮಗನನ್ನು ಕೊಲ್ಲಲು ಹವಣಿಸುತ್ತಾಳೆ. ಮಗನನ್ನು ಕಾಡಿಗೆ ಕಳುಹಿಸಿ “ಹುಲಿ ಹಾಲು ಮೊಲದ ಗಿಣ್ಣು

ತಂದುಕೊಡು ಬಾ ಎಂದು ಹೇಳಿ ಮಗನನ್ನೆ ಸಾವಿನಬಾಯಿಗೆ ತಳ್ಳುವುದು, ಅವನು ಅದನ್ನು ತಂದು ಕೊಟ್ಟನಂತರ ತಲೆನೋವು ಹೋಯಿತು ಎಂದು ನಾಟಕವಾಡುವುದು. ಮತ್ತೆ ಹೊಟ್ಟೆನೋವು ಎಂದು ಹೇಳಿ ಅದಕ್ಕೇನು ಮದ್ದು ಎಂದು ಕೇಳಿದಾಗ "ಮೊಸಳೆ ತುಪ್ಪ, ತಾವರೆ ಕಮಲ ತಂದು ಕೊಡು" ಎಂದು ಹೇಳಿ ಅವನನ್ನು ಸಾಯಿಸಲು ಪ್ರಯತ್ನಿಸುವುದು. ಇದನ್ನು ಗೆದ್ದು ಬಂದು ತಂದು ಕೊಟ್ಟಾಗ ಮತ್ತೆ ಸ್ನಾನದ ಮನೆಯಲ್ಲಿ ವಿಷದ ಮುಳ್ಳನ್ನು ಇಟ್ಟು ಮಗನನ್ನು ಸಾಯಿಸುವ ಪ್ರಯತ್ನ ಮಾಡುವುದು ಮತ್ತು ಮಗ ತಾಯಿ ಮತ್ತು ಮಗ ಇಬ್ಬರನ್ನು ಸಿಗಿಸಿ ಊರಬಾಗಿಲಿಗೆ ತೋರಣ ಕಟ್ಟುವುದು. ಇಲ್ಲಿ ತಾಯಿ ಮತ್ತು ಮಗನ ಸಂಬಂಧ ದ್ವೇಷಭಾವನೆಯಿಂದ ಕೂಡಿದೆ. ಜಗತ್ತಿನಲ್ಲಿ ಯಾವುದೇ ತಾಯಿ ತನ್ನ ಮಗನನ್ನು ಕೊಲ್ಲುವ ಹವಣಿಕೆ ಮಾಡುವುದಿಲ್ಲ. ಮಗನೂ ತನ್ನ ತಾಯಿಯನ್ನು ಕೊಲ್ಲುವ ಸ್ಥಿತಿ ತಲುಪುದಿಲ್ಲವಾದರೂ ಈ ಕಥೆಯು ತಾಯಿ ಮತ್ತು ಮಗನ ಮತ್ತೊಂದು ಮುಖವನ್ನೇ ತಿಳಿಸುವ ಪ್ರಯತ್ನ ಮಾಡಿದೆ. ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನಲ್ಲೂ ಸ್ವಾರ್ಥತನ ಕಿಂಚಿತ್ತಾದರೂ ಇರುತ್ತದೆ ಎನ್ನುವುದನ್ನು ಈ ಕಥೆಯ ಮೂಲಕ ತಿಳಿಯಬಹುದು.

'ಮಂಚದಮ್ಮ' ಮತ್ತು 'ಪುಣ್ಯದ ಲಕ್ಷ್ಮಿ' ಕಥೆಗಳಲ್ಲಿ ತಾಯಿಯ ಪಾತ್ರವನ್ನು ಶಿಷ್ಟವಾಗಿ ಚಿತ್ರಣಗೊಂಡಿರುವುದು ಕಾಣಬಹುದು. ತಾಯಿಯನ್ನು ಅವಳ ಪಾತಿವ್ರತ್ಯವನ್ನು ಪರೀಕ್ಷಿಸುವ ಒಂದು ಕ್ಲಿಷ್ಟಕರ ಸಂದರ್ಭವನ್ನು ಕಾಣುತ್ತೇವೆ. ರಾಜ ತನ್ನ ಮತ್ತು ಮಗಳ ಸಂಬಂಧವನ್ನು ತಿಳಿಯಲು ಇವಳು ನನ್ನ ಮಗಳೇ ಆಗಿದ್ದರೆ "ತಾಯಿಯ ಎದೆ ಹಾಲು ಹರಿದು ಇವಳ ಬಾಯಿಗೆ ಬರಲಿ" ಎಂದು ಹೇಳಿ ತಾಯಿಯ ಪಾತಿವ್ರತ್ಯವನ್ನು ಪರೀಕ್ಷಿಸುವುದು, ಕೊನೆಗೆ ಎದೆಹಾಲು ಹರಿದು ಮಕ್ಕಳ ಬಾಯಿಗೆ ಸೇರಿದಾಗ ರಾಜ ಇವರನ್ನು ತನ್ನ ಮಕ್ಕಳೆಂದು ಒಪ್ಪಿಕೊಳ್ಳುತ್ತಾನೆ. ಹೀಗೆ ಅನೇಕ ಕಥೆಗಳಲ್ಲಿ ಹೆಣ್ಣು ಪರೀಕ್ಷೆಗೆ ಒಳಪಡುವ ಸನ್ನಿವೇಶಗಳೇ ಈ ಕಥೆಗಳಲ್ಲಿ ಹೆಚ್ಚಾಗಿ ಚಿತ್ರಿತಗೊಂಡಿವೆ.

ಪ್ರಸ್ತುತ ಕಥಾ ಸಂಕಲನದಲ್ಲಿ ಹಾಸ್ಯಕಥೆಗಳು ಕಥಾ ಹಂದರವನ್ನು ಬಿಗಿಗೊಳಿಸುತ್ತವೆ. ಹಾಸ್ಯಕಥೆಗಳಲ್ಲಿ ಮಹಿಳೆ ಮತ್ತು ಪುರುಷರ ಪಾತ್ರಗಳು ಬಹುಮುಖ್ಯವಾಗಿವೆ. ಇಲ್ಲಿ ಇಬ್ಬರ ಪಾತ್ರಗಳಿಂದ ಹಾಸ್ಯ ರಸಮಯವಾಗಿ ಹೊರಹೊಮ್ಮುತ್ತದೆ. ಗಂಡ-ಹೆಂಡತಿ, ಅತ್ತೆ-ಅಳಿಯನ ಪಾತ್ರಗಳಲ್ಲಿ ಹೆಚ್ಚಾಗಿ ಹಾಸ್ಯದ ರಸವನ್ನೂ ಕಾಣುತ್ತೇವೆ.

ಮಂಜುಗಣ್ಣಿನ ಮಾಯಣ್ಣನ ಕಥೆಯಲ್ಲಿ ಅತ್ತೆ ಮತ್ತು ಅಳಿಯನ ನಡುವೆ ನಡೆಯುವ ಹಾಸ್ಯ ಅದ್ಭುತವಾಗಿ ಮೂಡಿಬಂದಿದೆ. ಊಟಕ್ಕೆ ಕುಳಿತ ಸಂದರ್ಭದಲ್ಲಿ ಅತ್ತೆ ಕಾಲಿಗೆ ಕಾಲುಂಗರ ಹಾಕಿ ಊಟ ಬಡಿಸುತ್ತಿದ್ದಾಗ ಮಾಯಣ್ಣ ಮಂಜುಗಣ್ಣಾಗಿದ್ದರಿಂದ ಕಾಣದೆ "ಓಹೋ ಬೆಕ್ಕು ಬಂದಿದೆ, ಹತ್ತಿರಕ್ಕೆ ಬರಲಿ ಸರಿಯಾಗಿ ಮಾಡ್ತೀನಿ!" ಎಂದು ಅತ್ತೆ ಊಟ ಬಡಿಸಲು ಬಂದ ತಕ್ಷಣ ಕೋಲಿನಿಂದ ಹೊಡೆದ ಅವಳು ಹೌಹಾರಿ ಬೋಗುಣಿಯನ್ನು ಎತ್ತಿ ಹಾಕಿಕೊಂಡು ಬಿದ್ದಳು. ಯಾಕಪ್ಪ ಎಂದು ಕೇಳಿದರೆ ಅತ್ತೆ ಎಂದು ಗೊತ್ತಾದ ಮೇಲೆ, ನಾನು ಮದುವೆಯಾಗಿರುವುದು ಯಾತಕ್ಕೆ, ನನ್ನ ಹೆಂಡತಿನೇ ಬಡಿಸಬೇಕು ಎಂದು ಹೇಳಿ

ತಪ್ಪಿಸಿಕೊಳ್ಳುವುದು. ರಾತ್ರಿವೇಳೆ ಮಲಗಿದ್ದಾಗ ಒಂದಕ್ಕೆ ಅವಸರವಾಗಿ ಮಾವನ್ನು ಹೋಗಿ ಬಂದು ಕಾಣದೆ ಅವರ ಅತ್ತೆ ಮಲಗಿದ್ದ ಕೋಣೆಗೆ ಹೋಗಿ ಬೀಳುವುದು ಅತ್ತೆ ಕಾಲು ಹಿಡಿಯುವುದು, ಯಾಕಪ್ಪ ಎಂದರೆ ಊಟ ಮಾಡುವಾಗ ನಮ್ಮತ್ತಿಗೆ ಹೊಡೆದಿದ್ದೇನಲ್ಲ, ಈಗ ಕಾಲಿಗೆ ಬಿದ್ದು ಕ್ಷಮೆ ಕೇಳಿಕೊಳ್ಳೋಣ ಎಂದು ಬಂದೆ ಎಂದು ಹೇಳುತ್ತಾನೆ.

'ಬೆಟ್ಟಿಕಿತ್ತು ಹತ್ತಿ ಹಾಕಿದಾಗ' ಕಥೆಯಲ್ಲಿ ಗೌಡ ಮತ್ತು ಆತನ ಹೆಂಡತಿಯ ಹಾಸ್ಯ ಪ್ರಸಂಗ ಕ್ಷೌರದವನಿಗೆ ಬಟ್ಟೆ ಹಡದೆ ಕೊಡ್ತೀನಲ್ಲ ಎಂದು ಹೇಳಿ ಗೌಡ ಇಲ್ಲದ್ದಕ್ಕೆ ಗೌಡನ ಹೆಂಡತಿ ಮಾಚಕ್ಕೆ ತಾನೇ ತಲೆಬೋಳಿಸಿಕೊಳ್ಳುವುದು ಗಂಡನ ಕೈಯಿಂದ ಬಸರಿಕೋಲಿನ ಏಟು ತಿನ್ನುವುದು.

'ಕೊಂಗನ ಹಳ್ಳಿಯ ದಾಸಯ್ಯ'ನ ಕಥೆಯಲ್ಲಿ ದಾಸಯ್ಯ ಮತ್ತು ಗೌಡನ ಹೆಂಡತಿ ನಡುವೆ ನಡೆಯುವ ಕಥೆ. ಗೌಡನ ಹೆಂಡತಿಯನ್ನು ತಳವಾರ ಮಡಗಿಟ್ಟುಕೊಂಡಿದ್ದ. ಗೌಡನಹೆಂಡತಿ ಒಳ್ಳೊಳ್ಳೆ ಅಡುಗೆ ಮಾಡಿ ತಳವಾರನಿಗೆ ಕೊಡಲು ಹವಣಿಸುತ್ತಾಳೆ. ದಾಸಯ್ಯ ತಳವಾರ ಎಲ್ಲೆಲ್ಲಿ ಮಲಗುವನೋ ಅಲ್ಲೆಲ್ಲಾ ಹೋಗಿ ಮಲಗುವುದರಿಂದ ಗೌಡನ ಹೆಂಡತಿ ದಾಸಯ್ಯನನ್ನು ತಳವಾರ ಎಂದು ಊಹಿಸಮಾಡಿ, ಅವನ ಜೊತೆ ಮಲಗುವ ದೃಶ್ಯ ಹಾಸ್ಯಾಸ್ಪದವಾಗಿದೆ. ನಂತರ ಅವನು ದಾಸಯ್ಯ ಎಂದು ಗೊತ್ತಾದಾಗ ಅಪಹಾಸ್ಯಪಡುವುದು ದಾಸಯ್ಯ ಕೊನೆಗೆ ತಳವಾರನ ಮನೆಯ ಜಗಲಿಯಲ್ಲಿ ಮಲಗಿರುವಾಗ ತಳವಾರನ ಇಬ್ಬರ ಹೆಂಡತಿಯರ ಜೊತೆ ಮಲಗುವುದು ನಂತರ ದಾಸಯ್ಯ ಎಂದು ಹೆಂಡತಿಯರಿಗೆ ಗೊತ್ತಾಗಿ ಅವರ ಅತ್ತೆ ಬಂದು ಅವನ ಜೊತೆಯಲ್ಲಿ ಮಲಗುವ ದೃಶ್ಯ ನಗೆಯನ್ನು ತರುತ್ತದೆ. ಇಲ್ಲಿ ಒಂದು ಹೆಣ್ಣು ಲೈಂಗಿಕಾಸಕ್ತಿಯಲ್ಲಿ ತೊಡಗಲು ತನ್ನ ಗಂಡನನ್ನು ಮರೆಯುವುದು ಕಾಣುತ್ತೇವೆ.

ಪ್ರಸ್ತುತ ಹಾಸ್ಯಕಥೆಗಳಲ್ಲಿ ಹೆಣ್ಣಿನ ಮೂರ್ಖತನ, ಹೆಣ್ಣಿನ ಮುಠ್ಠಾಳತನ, ತಪ್ಪು ಬುದ್ಧಿವಂತಿಕೆ, ಹಸುಳೆತನ, ಮೂಢತೆ, ಪಂತನೆ, ಕ್ರೂರತೆ, ಅಪ್ರಬುದ್ಧತೆ, ಕೆಟ್ಟಕಾಮ, ತಪ್ಪುಗ್ರಹಿಕೆ, ಕೆಟ್ಟ ಹೆಣ್ಣುತನ, ಕಿವುಡು ಸುಳ್ಳು, ಉತ್ಪ್ರೇಕ್ಷೆ ಮುಂತಾದ ಅಂಶಗಳು ಪ್ರಧಾನಗುಣಗಳಾಗಿ ಕಂಡು ಬರುತ್ತವೆ. ಈ ವ್ಯಕ್ತಿತ್ವಗಳ ಪರೋಕ್ಷ ವಿಡಂಬ ಕಥಾವಸ್ತುವಾಗಿ ಬೆಳೆದು ಕಥೆಯನ್ನು ಮೈತುಂಬಿಕೊಳ್ಳುತ್ತದೆ. ಅನೇಕ ಸಂದರ್ಭಗಳಲ್ಲಿ ಒಂದು ವ್ಯಕ್ತಿತ್ವದ ದಡ್ಡತನ ಮತ್ತು ಬುದ್ಧಿವಂತಿಕೆಯನ್ನು ಬೇರೆ ಮಾಡಲು ಸಾಧ್ಯವೇ ಆಗುವುದಿಲ್ಲ.

ಹಾಸ್ಯಕಥೆಗಳಲ್ಲಿ ಬಹುಪಾಲಿನ ವಸ್ತುಸ್ಥಿತಿ ಎಂದರೆ ಸಾಮಾಜಿಕ ನಡವಳಿಕೆಯ ಬಹಿರ್ಮುಖತೆ ಅಥವಾ ಸಾಮಾನ್ಯ ಜ್ಞಾನದ ಕೊರತೆ. ಕೊಳಕು ಹಾದರಗಳಂಥವು ಮುಕ್ತವಾಗಿ ಪ್ರತಿಪಾದನೆಗೊಳ್ಳುವುದುಂಟು. ಬದುಕಿಗೆ ಹೊಸ ಮೌಲ್ಯಗಳನ್ನೇನೋ ರೂಪಿಸಿಕೊಳ್ಳದ ಸಾಮಾನ್ಯ ಸ್ತರದಲ್ಲಿ ಬದುಕುವ ಜನರ ನಡವಳಿಕೆಗಳೇ ಇಲ್ಲಿ ಮುಖ್ಯವಾಗಿವೆ.

ಪ್ರಸ್ತುತ ಕಥಾ ಸಂಕಲನದಲ್ಲಿ ಹೆಣ್ಣು ಅದೃಶ್ಯಳು ಎಂದೆನಿಸುತ್ತದೆ. ಆದರೂ ಇವಳು ದೃಶ್ಯಗೊಳ್ಳದಿರುವುದು ಅಸ್ಪೃಶ್ಯ ಹಾಗೂ ಅಧೀನ ನೆಲೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿದ್ದಾಳೆ. ಪುರುಷನ ಬೇಡಿಕೆಗಳೆಲ್ಲವೂ ಇಲ್ಲಿ ಗಂಡುಮಗುವಿನ ಜನನದ ಕುರಿತಾಗಿವೆಯೇ ಹೊರತು ಹೆಣ್ಣು ಮಗುವಿನ ಜನನ

ಕುರಿತು ಪ್ರಸ್ತಾಪಿಸಲಾಗಿಲ್ಲ. ಉದಾಹರಣೆಗೆ 'ಮಂಚದಮ್ಮ' ಕಥೆಯಲ್ಲಿ ರಾಜನಿಗೆ ಏಳು ಜನ ಹೆಣ್ಣು ಮಕ್ಕಳಾಗಿದ್ದರು. ರಾಣಿ ಮತ್ತೆ ಬಿಮ್ಮನೆಯಾದಳು. ಆಗ ರಾಜ "ಇದೂ ಹೆಣ್ಣಾದ್ರೆ ಮಗು ಮತ್ತು ನಿನ್ನನ್ನೂ ಇಬ್ಬರನ್ನೂ ಕಡಿದು ಹಾಕ್ತೀನಿ" ಎಂದು ಹೇಳುವ ಪ್ರಸಂಗವನ್ನು ನೋಡಬಹುದು. ಗರ್ಭಿಣಿಗೆ ಮಾಡುವ ಎಲ್ಲ ಆಚರಣೆಗಳು ಕೂಡ ಗಂಡು ಮಗುವನ್ನು ಕುರಿತ ಆಶಯವನ್ನೇ ಹೊಂದಿದೆ. ಇಲ್ಲಿ ಹೆಣ್ಣನ್ನು ಗಂಡಿನ ಸಂಬಂಧದೊಳಗೆ ಬೆಸೆಯಲಾಗುತ್ತದೆ. ತಂದೆಯೊಂದಿಗೆ, ಗಂಡನೊಂದಿಗೆ, ಮಗನೊಂದಿಗೆ ಹೆಣ್ಣನ್ನು ಗುರುತಿಸಲಾಗುತ್ತದೆ. ಇದನ್ನು ಎಲ್ಲಾ ಕಥೆಗಳಲ್ಲೂ ಗುರುತಿಸಬಹುದು.

ಪುರುಷ ಪ್ರಧಾನ ಸಾಮಾಜಿಕ ಸಂರಚನೆಯಲ್ಲಿ ಹೆಣ್ಣು ಆಸ್ತಿಯ ಒಡೆತನ ಪಡೆಯುವುದಿಲ್ಲ. ಪಡೆಯುವುದಿದ್ದರೆ ಅದೂ ಗಂಡನ ಸಾವಿನೊಂದಿಗೆ, ಗಂಡ ಸತ್ತ ಸಂದರ್ಭದಲ್ಲಿ ಆಕೆಗೆ ಗಂಡು ಮಗು ಇದ್ದಲ್ಲಿ ಆಕೆಯ ಕಾರ್ಯನಿರ್ವಹಣೆಯಾಗಿದೆ. ಆಸ್ತಿಯ ಒಡೆತನದ ಅಥವಾ ಮಾರಾಟದ ಹಕ್ಕು ಈ 'ಅದೃಶ್ಯ' ಪರಂಪರೆಯಲ್ಲಿ ಹೆಣ್ಣಿಗೆ ದೊರೆಯುತಿಲ್ಲ. ಹೆತ್ತವರ ಅವರ ಕರ್ಮಗಳಲ್ಲಿ ಹೆಣ್ಣು ಮಕ್ಕಳ ಉದ್ಧಾರವಿಲ್ಲ. ಪುತ್ರನಾದವನನ್ನಷ್ಟೇ ಸಂತತಿಯಾಗಿ ಪರಿಗಣಿಸಲಾಗುತಿದೆ.

ಈ ಸಂಸ್ಕೃತಿಯಲ್ಲಿ ಹೆಣ್ಣಿನ ಲೈಂಗಿಕ ಶಕ್ತಿಯನ್ನು ಕೇವಲ ಜನನ ಸಾಮರ್ಥ್ಯಕ್ಕಾಗಿ ಅಷ್ಟೇ ಉಪಯೋಗಿಸಿಕೊಳ್ಳಲಾಗಿದೆ. ಅದು ಗಂಡಸರ ಸಂತಾನಕ್ಕೆ ಹೆಚ್ಚು ಹೊತ್ತು ಕೊಡಲಾಗಿದೆ. ಸ್ತ್ರೀ ಎಂದರೆ ಹೆರುವವಳು ಎಂದೇ ತೀರ್ಮಾನಿಸಿದಂತಿದೆ. ಹೆಣ್ಣು, ಗರ್ಭದ ಅಸ್ತಿತ್ವದಿಂದಲೇ ವ್ಯಕ್ತಿತ್ವವನ್ನು ಪಡೆದುಕೊಂಡವಳು. ಹೆಣ್ಣಿನ ಗರ್ಭಧಾರಣೆಯನ್ನು ಜೈವಿಕ ಕ್ರಿಯೆಯಾಗಿ ಪರಿಗಣಿಸಲಾಗಿದೆಯಾದರೂ ಗರ್ಭಧರಿಸಲಾಗದ ಬಂಜೆತನವನ್ನು ಮತ್ತು ಗರ್ಭಪಾತವನ್ನು ಸಾಂಸ್ಕೃತಿಕಗೊಳಿಸಿ ಹೆಣ್ಣಿನ ಪ್ರಜನನ ಶಕ್ತಿಯ ಮೇಲೆ ಹತೋಟಿ ಸಾಧಿಸುವ ಪ್ರಯತ್ನವನ್ನು ಈ ಕಥೆಗಳಲ್ಲಿ ಕಾಣಬಹುದು.

ಹೆಣ್ಣಿನ ಲೈಂಗಿಕ ಬದುಕಿನ ಮೇಲಿನ ಪುರುಷ ಸಂಸ್ಕೃತಿಯ ಮಾಲಿಕ ಹಕ್ಕು ಎಷ್ಟು ಗಾಢವಾಗಿದೆ ಎಂದರೆ ಏಕಪತ್ನಿತ್ವದ ಹೆಸರಿನಲ್ಲಿ ವಿವಾಹಿತ ಹೆಣ್ಣೊಬ್ಬಳು ಇನ್ನೊಂದು ಗಂಡನನ್ನು ಕುರಿತು ಯೋಚಿಸುವುದು ಕೂಡಾ ಅಪರಾಧವಾಗುತ್ತದೆ. ಆದರೆ ಇಲ್ಲಿನ ಕಥೆಗಳಲ್ಲಿ ಬಹುತೇಕವಾಗಿ ಪ್ರತಿಯೊಬ್ಬ ರಾಜನು ಐದು ಜನ, ಮೂರು ಜನ, ಮತ್ತು ಏಳು ಜನ ಪತ್ನಿಯರನ್ನು ಹೊಂದಿರುವುದು ಏಕಪತ್ನಿತ್ವಕ್ಕೆ ವಿರುದ್ಧವಾಗಿದೆ. ವಿವಾಹದ ಮೂಲಕ ಹೆಣ್ಣಿನ ಲೈಂಗಿಕತೆಯ ಹಕ್ಕನ್ನು ಪಡೆಯುವ ಗಂಡಿಗೆ ಆ ಹಕ್ಕು ಅಧಿಕಾರ ಅವನ ಸಾವಿನಲ್ಲೂ ಮುಂದುವರಿಯುತ್ತದೆ. ಕುಟುಂಬ ಸಂಸ್ಥೆಯು ಹೇರಿದ ಸ್ತ್ರೀಯ ಲೈಂಗಿಕತೆಯೂ ಮೇಲಿನ ಈ ನಿರ್ಬಂಧಗಳ ಕಾರಣಗಳಿಂದ ಶೀಲಕ್ಕೆ ವಿಶಿಷ್ಟ ಮಹತ್ವ ಸಂದಿತು. ಬಾಲ್ಯವಿವಾಹ, ವಿಧವೆ, ವೇಶ್ಯಾ ಸಂಪ್ರದಾಯಗಳು ಕೂಡ ಈ ಕಥೆಗಳಲ್ಲಿ ಕಾಣುತ್ತವೆ. ತನಗಿಂತ ಕಿರಿಯವಳಾದ ಹೆಣ್ಣನ್ನು ಹೆಂಡತಿಯಾಗಿ ಸ್ವೀಕರಿಸುವ ಪುರುಷ ಸ್ವಭಾವವನ್ನು ಬಯಲಿಗೆಳೆಯುತ್ತದೆ.

ಹೆಣ್ಣು-ಗಂಡುಗಳ ನಡುವೆ ಶ್ರಮ ವಿಭಜನೆ ಎನ್ನುವುದು ಒಂದು ಸಾಮಾನ್ಯ ಸಂಗತಿ. ಆದರೆ ಗಂಡು-ಹೆಣ್ಣು ಮಾಡುವ ಕೆಲಸಗಳನ್ನು ಲಿಂಗಾಧಾರಿತ ನೆಲೆಯಲ್ಲಿ ನಿರ್ಧರಿಸುವುದನ್ನು ಸಾಮಾನ್ಯ

ಸಂಗತಿಯೆಂದು ಒಪ್ಪಿಕೊಳ್ಳಲಾಗದು. ಯಾಕೆಂದರೆ ಆ ಕೆಲಸಗಳು ಒಂದು ನಿರ್ದಿಷ್ಟ ಯೋಚನಾಕ್ರಮಗಳಿಗೆ ಅನುಗುಣವಾಗಿ ನಿರ್ಧರಿಸಲ್ಪಟ್ಟ ಗಂಡು ಮಾಡುವ ಕೆಲಸ, ಹೆಣ್ಣು ಮಾಡುವ ಕೆಲಸ ಎಂದು ವಿಭಜನೆಯಾಗಿರುತ್ತದೆ. ಆದುದರಿಂದ ಕೆಲಸದ ವಿಭಜನೆಯು ನಮ್ಮ ಬದುಕಿನಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಚಿಂತನೆಗಳೊಂದಿಗೆ ಸಂಬಂಧ ಪಡೆದುಕೊಳ್ಳುವ ಒಂದು ವ್ಯವಸ್ಥೆಯಾಗಿದೆ.

ಜಾನಪದ ಸೃಷ್ಟಿಕಾರ್ಯದಲ್ಲಿ ಬಹುಪಾಲು ಕೊಡುಗೆ ಮಹಿಳೆಯದೇ ಆದರೂ ಆಕೆಯ ಶ್ರಮ ಗೌಣವಾಗಿ, ಪರಿಭಾವಿಸುವ ಕ್ರಮ ಗಂಡಿನ ಮೂಲಕವೇ ನಡೆದುದು ವಿಪರ್ಯಾಸವೇ ಸರಿ. ಆಕೆಯನ್ನು ಬೌದ್ಧಿಕ ನೆಲೆಯಲ್ಲಿ ಗುರುತಿಸುವುದು ಅಷ್ಟಕಷ್ಟೇ ಆಗಿದೆ.

ಹೆಣ್ಣನ್ನು ರಾಕ್ಷಸಿಯಾಗಿ, ಬಂಜೆಯಾಗಿ, ದುಷ್ಟಳನ್ನಾಗಿ, ಗಯ್ಯಾಳಿಯನ್ನಾಗಿ ಅನಂತ ರೂಪದಲ್ಲಿ ಕಂಡದ್ದೇ ಹೆಚ್ಚಾಗಿದೆ. ಅವಳು ಸಾಂಸ್ಕೃತಿಕವಾಗಿ ಕಟ್ಟಿಕೊಡುವುದೇನು? ಗೃಹಿಣಿಯಾಗಿ, ಕನ್ಯೆಯಾಗಿ ಅವಳ ಭಾವನೆಗಳೇನು? ಮುಂತಾಗಿ ಈ ಕಥೆಗಳಲ್ಲಿ ಆಲೋಚಿಸಿ ಮಾತೃತ್ವಕ್ಕೇ ಹೆಚ್ಚು ಒತ್ತು ನೀಡಿ ಬಂಜೆ ಹೆಣ್ಣನ್ನು ನಿಕೃಷ್ಟವಾಗಿ ಕಂಡ ಸಮಾಜ ತಾಯ್ತನಕ್ಕೆ ಅಥವಾ ಬಂಜೆತನಕ್ಕೆ ಕಾರಣವೇನು ಎಂಬುದನ್ನು ಕಂಡುಕೊಳ್ಳಲಿಲ್ಲ. ಸ್ತ್ರೀಯು, ಸ್ತ್ರೀಯ ನೆಲೆಯಲ್ಲೇ ಹೀಗೆ ಶೋಷಿತಳಾದಳೆಂಬುದರ ಸಾಮಾಜಿಕ ಅಧ್ಯಯನಕ್ಕೆ ಈ ಕಥೆಗಳು ದಾರಿಮಾಡಿಕೊಡುತ್ತವೆ. ಆರ್ಥಿಕ ನೆಲೆಯೊಂದು ಮತ್ತು ಜಾತಿ, ವರ್ಗವನ್ನು ಹೇಗೆ ಸೃಷ್ಟಿಸಿ ಅಂತರವನ್ನು ಕಾಯ್ದುಕೊಳ್ಳುತ್ತದೆ ಎಂಬುದನ್ನು ಈ ಕಥೆಗಳು ತಿಳಿಸುತ್ತವೆ.

ಅಜ್ಜಿಯೊಬ್ಬಳು ಕಥೆ ಹೇಳುತ್ತಾಳೆಂದರೆ, ಅವಳು ಅದರಲ್ಲಿ ತನ್ನೆಲ್ಲಾ ಕನಸುಗಳು, ಕಲ್ಪನೆಗಳು, ಆಸೆಗಳು ಮುರುಟಿ ಹೋದ ಭಾವನೆಗಳು ಮುಂತಾದವನ್ನು ನಿರೂಪಿಸುತ್ತಾಳೆ. ಇಲ್ಲೆಲ್ಲಾ ಮಧ್ಯಮ ವರ್ಗದ ನೀತಿ, ಪ್ರೀತಿ, ತ್ಯಾಗ ಮುಂತಾದವುಗಳನ್ನು ಕಾಣುತ್ತೇವೆಯೇ ವಿನಃ ಅವಳ ಯೌವ್ವನದ ಬದುಕು, ಬಯಕೆಗಳೇನು? ಅಲ್ಲಿನ ಪರಿಸರ ಎಂತಹದು? ವಿನೋದ ವೈರಾಗ್ಯಗಳ ಅಂತರಾಳದ ನೋವಿನ ನೆಲೆ ಏನು? ಮುಂತಾಗಿ, ಬದಲಾದ ಪರಿಸರಕ್ಕನುಗುಣವಾದ ಆಯಾ ಸಮಾಜದ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಅಧ್ಯಯನಗಳು ನಡೆದದ್ದು ವಿರಳವಾಗಿದ್ದು ಅದರ ಹಿನ್ನೆಲೆಯಲ್ಲಿ ಅಧ್ಯಯನಗಳನ್ನು ಕೈಗೊಳ್ಳುವುದು ಅತ್ಯವಶ್ಯಕವಾಗಿದೆ.

ಅಧ್ಯಾಯ - ೫

ಭಾಷೆ, ಶೈಲಿ ಮತ್ತು ತಂತ್ರ

ಭಾಷೆ, ಶೈಲಿ ಮತ್ತು ತಂತ್ರ

ಪ್ರಸ್ತುತ ಕನ್ನಡ ಜನಪದ ಕಥೆಗಳು ಹಲವು ವಿಶಿಷ್ಟತೆಯಿಂದ ಕೂಡಿರುವುದರಲ್ಲಿ ಭಾಷೆಯು ಪ್ರಮುಖವಾದ ಸ್ಥಾನ ಪಡೆಯುತ್ತದೆ. ಜನಪದ ಕಥೆಗಳು ಮೌಖಿಕ ರೂಪದಲ್ಲಿ, ವಾಗ್ರೂಪದಲ್ಲಿ ಪ್ರಸಾರವಾಗುವುದರಿಂದ ಭಾಷೆ ಇಲ್ಲದೆ ಕಥೆಗಳೇ ಇಲ್ಲ, ಅವುಗಳ ಸಂಗ್ರಹವೂ ಸಾಧ್ಯವಾಗುವುದಿಲ್ಲ. ಕಥಾ ನಿರೂಪಣೆಯಲ್ಲಿ ಭಾಷೆಗೆ ಮೊದಲಸ್ಥಾನ.

ಪ್ರಸ್ತುತ ಕನ್ನಡ ಜನಪದ ಕಥೆಗಳನ್ನು ಕರ್ನಾಟಕದ ಬಹು ವಿಸ್ತಾರವಾದ ಪ್ರದೇಶವಾದ ಹಳೇ ಮೈಸೂರು ಭಾಗದಿಂದ ಸಂಗ್ರಹಿಸಿದಂಥ ಕಥೆಗಳಾಗಿವೆ. ಮೈಸೂರು ಸುತ್ತಮುತ್ತಲಿನ ಪ್ರದೇಶಗಳಾದ ಮಂಡ್ಯ, ಮದ್ದೂರು, ತುಮಕೂರು, ಮಧುಗಿರಿ, ತುರುವೇಕೆರೆ, ನಾಗಮಂಗಲ, ಹಿರಿಯೂರು, ರಾಮನಗರ, ಚನ್ನಪಟ್ಟಣ, ಮಳವಳ್ಳಿ, ಕೊಳ್ಳೇಗಾಲ, ಕೆ.ಆರ್.ಪೇಟೆ ಮುಂತಾದ ಪ್ರದೇಶಗಳಿಂದ ಸಂಗ್ರಹಿಸಲಾದ ಕಥೆಗಳಾಗಿರುವುದರಿಂದ ಈ ಪ್ರದೇಶಗಳಲ್ಲಿನ ಭಾಷೆಯನ್ನೇ ಕಥೆಗಳಲ್ಲಿ ಒಡಮೂಡಿಸಿದ್ದಾರೆ.

ಕರ್ನಾಟಕದಲ್ಲಿ ಅಧಿಕೃತಭಾಷೆ ಕನ್ನಡವೇ ಆದರೂ, ಪ್ರಾದೇಶಿಕ ವೈಶಿಷ್ಟ್ಯತೆಯಿಂದ ಕೂಡಿರುವುದರಿಂದ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಭೌಗೋಳಿಕ ವ್ಯತ್ಯಾಸವಿದ್ದಂತೆ ಭಾಷೆಯಲ್ಲೂ ವ್ಯತ್ಯಾಸವಿದೆ. ಪ್ರತಿ ನಲವತ್ತರಿಂದ ಐವತ್ತು ಕಿಲೋಮೀಟರ್‌ಗಳಿಗೆ ಒಂದೊಂದು ಪ್ರದೇಶದ ಭಾಷೆ ವ್ಯತ್ಯಾಸದಿಂದ ಕೂಡಿರುತ್ತದೆ. ಕರ್ನಾಟಕದಲ್ಲಿ ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ, ಗುಲ್ಬರ್ಗ, ರಾಯಚೂರು ಕನ್ನಡ ಎಂಬ ಪ್ರಾದೇಶಿಕ ಭಾಷೆಗಳಿದ್ದು ಪ್ರಸ್ತುತ ಅಧ್ಯಯನದ ಕಥೆಗಳು ಮೈಸೂರು ಕನ್ನಡದ ಭಾಷೆ ಒಳಗೊಂಡಿವೆ. ಈ ಪ್ರಾದೇಶಿಕ ಪ್ರಭೇದಗಳಲ್ಲಿ ಬಹುಮುಖ್ಯವಾದ ವ್ಯತ್ಯಾಸವಿರುವುದು ಉಚ್ಚಾರಣಾ ರೀತಿಯಲ್ಲಿ. ಇದನ್ನೇ ಭಾಷಾ ಶಾಸ್ತ್ರದಲ್ಲಿ ಸ್ವರಾಘಾತ ಎನ್ನುತ್ತಾರೆ. ಜೊತೆಗೆ ಆಯಾ ಪ್ರದೇಶದಲ್ಲಿ ಬಳಸುವ ಪದಗಳು, ಶೈಲಿ, ವಾಕ್ಯರಚನೆಯೂ ಭಿನ್ನವಾಗಿರುತ್ತದೆ. ಜನಪದ ಸಾಹಿತ್ಯದಲ್ಲಿ ಈ ಎಲ್ಲ ಅಂಶಗಳನ್ನೂ ಅಭಿವ್ಯಕ್ತಿಸಿರುವುದರಿಂದ ಈ ವ್ಯತ್ಯಾಸಗಳನ್ನು ಪರಿಚಯ ಮಾಡಿಕೊಳ್ಳುವುದು ಅತ್ಯವಶ್ಯಕ.

ಜನಪದ ಭಾಷೆಗೂ ಶಿಷ್ಟ ಭಾಷೆಗೂ ಬಹಳಷ್ಟು ವ್ಯತ್ಯಾಸವಿದೆ. ಜನಪದ ಜೀವನ ಹೇಗೆ ಭಿನ್ನವೋ ಹಾಗೆಯೇ ಭಾಷೆಯೂ ಭಿನ್ನವಾಗಿರುತ್ತದೆ. ಶಿಷ್ಟ ಭಾಷೆಗೆ ವಿರುದ್ಧವಾದ ನೆಲೆ, ಉಚ್ಚಾರಣಾ ವಿಧಾನ ಜನಪದ ಭಾಷೆಯದು. ಅದು ಸಾಮೀಪ್ಯಗೊಂಡ ಬದುಕಿನ ಪ್ರತಿನಿಧಿಯಾಗಿರುತ್ತದೆ. ಜನಪದ ಭಾಷೆಯಲ್ಲಿ

[illegible]

ಸಂಕ್ಷಿಪ್ತತೆ ಮತ್ತು ಪರಿಣಾಮತನ ಎರಡೂ ಮುಖ್ಯವಾಗಿರುತ್ತವೆ. ಇಲ್ಲಿನ ಕಥೆಯಲ್ಲಿ ಬರುವ ಶಾಬ್ದಿಕ ರೂಪಗಳು ಜನಪದರ ಜೀವನದ ಪ್ರತಿಬಿಂಬವಾಗಿರುತ್ತವೆ.

ಜೀ.ಶಂ.ಪ. ಅವರು ಹೇಳುವಂತೆ ಜನಪದ ಕಥೆ ವಿಶ್ವವ್ಯಾಪಕ ಗುಣವನ್ನು ಪಡೆದ ಜಾನಪದ ಪ್ರಕಾರ. ಯಾವುದೇ ಭಾಷೆಯ ಸೀಮಿತ ಪರಿಧಿಯಲ್ಲಿ ಅದು ನಿಲ್ಲದೆ ಭಾಷೆಯಿಂದ ಭಾಷೆಗೆ, ದೇಶದಿಂದ ದೇಶಕ್ಕೆ ಸಂಚಾರವನ್ನು ಕೈಗೊಂಡು ಆಯಾ ನೆಲದಲ್ಲಿ ಬೇರುಬಿಟ್ಟುಕೊಳ್ಳುತ್ತದೆ. ಜನಪದ ಕಥೆಗಳ ವೈಜ್ಞಾನಿಕ ಅಧ್ಯಯನವನ್ನು ಕೈಗೊಳ್ಳುವ ಸಂಶೋಧಕ ಆ ಕಥೆಗಳ ಆಶಯಗಳನ್ನೂ, ವರ್ಗಗಳನ್ನೂ ಅಭ್ಯಸಿಸುವತ್ತಲೇ ತನ್ನ ಒಲವನ್ನು ಹರಿಸುತ್ತಾನೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ ಕಥೆಗಳ 'ಭಾಷೆ'ಗಿಂತಲೂ ಕಥಾರೂಪ ಪ್ರಮುಖವೆನಿಸುತ್ತದೆ. ಆದರೆ ಕಥೆಯೂ ಒಂದು ಕಲಾತ್ಮಕ ಅಭಿವ್ಯಕ್ತಿ ಎಂಬುದನ್ನು ಪರಿಗಣಿಸಿದಾಗ ಆಯಾ ಭಾಷೆಯ, ಸಂಸ್ಕೃತಿಯ ಹಿನ್ನೆಲೆಯಲ್ಲಿ ಅವುಗಳ ಪಾತ್ರವೂ ಗಣ್ಯವಾದುದೇ.

ಪ್ರಸ್ತುತ ಕಥೆಗಳಲ್ಲಿ ಬರುವ ಶಾಬ್ದಿಕ ರೂಪಗಳು ಅಲ್ಲಿನ ಜನಪದರ ಜೀವನ ಮತ್ತು ಪ್ರಾದೇಶಿಕ ಭಿನ್ನತೆಯ ಪ್ರತಿಬಿಂಬಗಳಾಗಿವೆ. ಆ ಪ್ರದೇಶದ ಜನಪದರು ತಮ್ಮ ನಿತ್ಯಜೀವನದಲ್ಲಿ ಬಳಸುವ ಪದಗಳು ತಿಪ್ಪೆ, ರುಬ್ಬುಗುಂಡು, ಇಟ್ಟಿಗೆಕಲ್ಲು, ಮಾಳಿಗೆ, ಅಗಸೆ ಸೊಪ್ಪು, ಪೇಟೆಗೆ, ರವಷ್ಟು, ಬಡ್ಡಿ, ಅಸ್ಲು, ಇಪ್ಪತ್ತು ರೂಪಾಯಿ, ಹೀಗೆ ದಿನಿತ್ಯದ ಬಳಕೆಯ ಪದಗಳನ್ನು ಸಾಮಾನ್ಯವಾಗಿ ಎಲ್ಲಾ ಕಥೆಗಳಲ್ಲಿ ಕಾಣುತ್ತೇವೆ.

"ಇದೇನು ಹೆಡ್ಡ ಎದ್ದೇಳು ಹೋಗಾನ ಕಲ್ಲುಗೊಂಬೆ ನಿಗ್ಗೆ ಹೂ ಕೊಡುತ್ತಾ", 'ನಾನು ಪಾಪಿಷ್ಟೆ', 'ಅದೇನ್‌ಮಾವ ಅಂಥಪಂಥ', "ಏನೋ? ಅವ್ವ-ಇವ್ವ ಎದ್ದಿದ್ದೀರಾ? 'ಅವ್ವ ಸತ್ತವ್ವೊ ಬದುಕ್ಯವ್ವೋ ನೋಡ್ಕೊಂಡ್ ಬನ್ನಿ" ಇವು ದಿನನಿತ್ಯದಲ್ಲಿ ಬಳಕೆಯಾಗುವ ಪದಗಳಾಗಿವೆ.

ಕೆಲವು ಕಾರ್ಯಕಾರಿಗೆ ಪದಗಳ ಬಳಕೆಯಲ್ಲಿ ಪ್ರಾದೇಶಿಕ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. 'ಬೆಂಟುತಿದ್ದ' 'ಹೊಯ್ತೀವಿ',, ತರ್ತೀನಿ, ಬರ್ತೀನಿ, ಅಡ್ಡಬಳಸು, ಕಟ್ಟಾಕು, ಯಾವುದ್ಯೋಗೀಹೋಗಿ, ಹೀಗೆ ಬಳಸುವುದು ತಿಳಿಯಬಹುದು.

ಪ್ರಸ್ತುತ ಕಥೆಗಳಲ್ಲಿ ದ್ವಿರುಕ್ತಿಗಳ ಬಳಕೆ ಹೆಚ್ಚಾಗಿವೆ. 'ಒಬ್ಬಳೋ ಒಬ್ಬಳು', 'ಕಷ್ಟವೋ ಕಷ್ಟ', 'ಹುಡುಗರ ಪಡಗರ', 'ಎಲೆಗಿಲೆ',ಹೀಗೆ ಈ ದ್ವಿರುಕ್ತಿಗಳಲ್ಲಿನ ಭಾಷೆಯಲ್ಲಿ ಸ್ವಂತಿಕೆಯನ್ನು ಉಳಿಸಿಕೊಂಡಿದೆ.

ಕಳಸ, ಕನ್ನಡಿ, ಸೀರೆ, ಬೆಂಕಿಪೊಟ್ಟಣದ ಸೀರೆ, ಲಗ್ನ, ಸ್ಯಾಲೆ, ಕುಪ್ಸ, ಹೂ, ಹಣ್ಣು, ಮುತ್ತೈದೆ ಇತ್ಯಾದಿಯಾದ ಮದುವೆಗೆ ಸಂಬಂಧಿಸಿದ ಪದಗಳ ಬಳಕೆಯನ್ನು ಕಾಣಬಹುದು.

ಗಳಗಳನೆ ಅತ್ತುಬಿಟ್ಟ, ಪಳಪಳನೆ ಕಣ್ಣೀರು ಸುರಿಜು ಬಿಟ್ಟೋ ಎಂಬ ಅನುಕರಣೆ ಶಬ್ದಗಳು ಈ ಕಥೆಗಳಲ್ಲಿ ಬಳಕೆಯಾಗಿವೆ.

ಮೂರು ಎಕರೆ ಜಮೀನು, ಉಳುಮೆ, ಆರಂಭ, ಕುಂಟೆ, ಹಲುಬೆ, ಎಳ್ಳು, ರಾಗಿ, ಭತ್ತ, ತಾಳೆಯಮರ ಮುಂತಾದ ಒಕ್ಕಲು ತನದ ಪದಗಳು ಕಂಡುಬರುತ್ತವೆ.

ಅಕ್ಕಿ-ಬೇಳೆ, ಅನ್ನ, ಕೊಪ್ಪರಿಕೆ ಅಕ್ಕಿ ಅನ್ನ, ಎಳ್ಳು-ಜೀರಿಗೆ, ಗೆಡ್ಡೆ ತುಪ್ಪ, ಹಾಲುತುಪ್ಪ, ಒಬ್ಬಟ್ಟು ಮುಂತಾದ ಆಹಾರ ಪದಾರ್ಥಗಳು ಧಾನ್ಯಗಳ ಬಳಕೆಯಾಗುವುದು ಇಲ್ಲಿ ವಿಶೇಷವಾಗಿದೆ.

ಇಲ್ಲಿ ಜಾತಿ, ವರ್ಗ, ವರ್ಣದ ಆಧಾರದ ಮೇಲೆ ಇಲ್ಲಿನ ಜನರನ್ನು ವಿಭಾಗಿಸಿರುವುದು ಅವರ ಜಾತಿಯ ಹೆಸರಿನಿಂದಲೇ ಅವರನ್ನು ಕರೆಯುವುದು ಉದಾಹರಣೆಗೆ ರಾಜಶೆಟ್ಟಿಯನ್ನು ಕರೆಸಿದ, ಕ್ಷೌರದವನು, ಕುಂಬಾರ, ಕಂಬಳಿ ಬೋರಯ್ಯ, ಬ್ರಾಹ್ಮಣರ ಹುಡುಗಿ, ಬೆಸ್ತ, ಗೌಡ, ಪೊಂಗನಹಳ್ಳಿ ದಾಸಯ್ಯ ಇತ್ಯಾದಿಯಾಗಿ ಕರೆಯುವುದು ಈ ಪ್ರದೇಶದಗಳಲ್ಲಿ ರೂಢಿಯಲ್ಲಿದೆ.

ಈ ಕಥೆಗಳಲ್ಲಿನ ಭಾಷಾ ಬಳಕೆಯಲ್ಲಿ ಗಮನ ಸೆಳೆದಿರುವ ಮತ್ತೊಂದು ವಿಶೇಷ ಪದಗಳು ಬೈಗುಳದ ಪದಗಳು ಅವುಗಳಲ್ಲಿ

"ಎಂಥ ಸೂಳೆಮಗನೋ ದೇವಲೋಕಾನೆ ನುಂಗಾಕ್ಬಂದವ್ನೆ"

'ಅವನ್ಯಾವೋನೊ'?

'ನನ್ನ ಹೆಸರು ಹುಚ್ಮುಂಡೆ'

"ಎಮ್ಮೆಯಂತ ಮುಂಡೇರು ಎಮ್ಮೆಯಾಗಿ ಹುಟ್ಬಾರ್ದೆ"

"ಅಯ್ಯೋ ನಿನ್ನ ಸುಳಿ ಹಾಳಾಗ"

"ನಿನ್ನ ನಾಲ್ಗೆ ಸೇದೋಗ್ಲಿ"

"ಅಯ್ಯೋ ನಿನ್ನ ಹೋಸು ಹಾಳಾಗ"

"ಅಯ್ಯೋ ನಿನ್ನ ಮನೆ ಮಾರತ್ತ"

ಇತ್ಯಾದಿಯಾಗಿ ಬಳಕೆಯಾಗುವ ಈ ಬೈಗುಳದ ಪದಗಳು ಕಥೆಗಳಲ್ಲಿ ಸಾಮಾನ್ಯವಾಗಿ ಬಳಕೆಯಾಗಿವೆ. ಇವುಗಳ ಭಾಷಾ ಬಳಕೆಯ ಶೈಲಿಯಲ್ಲಿ ಇವುಗಳನ್ನು ಬಳಸಿದಾಗ ಅವುಗಳಿಗೆ ವಿಶೇಷವಾದ ಅರ್ಥಬರುತ್ತದೆ. ಹೀಗೆ ಪ್ರಸ್ತುತ ಜನಪದ ಕಥೆಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸುತ್ತದೆ.

ಜನಪದ ಕಥೆ ಒಂದು ಕಲಾತ್ಮಕ ಸೃಷ್ಟಿ. ಇದು ಜನತೆಯ ಸಾಂಸ್ಕೃತಿಕ ಇತಿಹಾಸದ ಬಹುಮುಖ್ಯ ಭಾಗವಾಗಿ ಕಾಣಿಸಿಕೊಳ್ಳುತ್ತದೆ. ಇದು ಮನುಷ್ಯನ ಸಮಸ್ತ ಬೌದ್ಧಿಕ ಮತ್ತು ರಸಾನುಭವದ ತಿಳುವಳಿಕೆಯನ್ನು ನೀಡುತ್ತದೆ. ಅದ್ಭುತ ರಂಜಕತೆಯೇ ಇವುಗಳ ವಿಶಿಷ್ಟತೆ. ಗ್ರಾಮ್ಯತೆ ಇವುಗಳ ಸೊಗಸು, ನಾಟಕೀಯತೆ ಅದರ ಉಸಿರು, ಪ್ರಮುಖ ಘಟನೆಗಳು ಮನಶಾಸ್ತ್ರೀಯ ಹಿನ್ನೆಲೆಯಲ್ಲಿ ರೂಪಿತವಾಗಿರುತ್ತವೆ. ಆಗಾಗ್ಗೆ ಭಾವನಾತ್ಮಕವಾಗುವ ಸಂಭವವೂ ಇರುತ್ತದೆ. ಜನತೆಯ ಆಚಾರ ವಿಚಾರಗಳ, ನಂಬಿಕೆ ನಡಾವಳಿಗಳ,

ವಿವೇಕ ಬುದ್ಧಿವಂತಿಕೆಗಳ ಪ್ರತಿನಿಧಿಗಳು ಆಗಿರುವ ಈ ಕಥೆಗಳು ತನ್ನ ರಚನಾ ತಂತ್ರ ಮತ್ತು ಶೈಲಿಯಲ್ಲಿ ಅಷ್ಟೇ ವಿಶಿಷ್ಟತೆಯಿಂದ ಕೂಡಿದವುಗಳಾಗಿವೆ.

ಜನಪದ ಕಥೆ ವಾಕ್ಸಂಪ್ರದಾಯದಲ್ಲಿ ಬಂದ ನಿರೂಪಣೆಯಾದ್ದರಿಂದ ಅದರಲ್ಲಿ ಎಷ್ಟು ಪರಂಪರಾಗತ ಲಕ್ಷಣಗಳಿವೆಯೋ ಅಷ್ಟೇ ಅದರಿಂದ ಸ್ವತಂತ್ರವಾದ ಅಂದರೆ ವ್ಯಕ್ತಿ ಮತ್ತು ಪರಿಸರ ವಿಶಿಷ್ಟವಾದ ಅಂಶಗಳೂ ಇವೆ. ಆದ್ದರಿಂದ ಕಥೆಯ ಶೈಲಿ, ತಂತ್ರವನ್ನು ಗಮನಿಸುವಾಗ ಅದನ್ನು ವ್ಯಕ್ತಿ ವಿಶಿಷ್ಟ ಶೈಲಿ, ಪರಂಪರಾಗತ ಶೈಲಿ ಎಂದು ವಿಂಗಡಿಸಿ ಕೊಳ್ಳುವುದು ಅಗತ್ಯವಾಗುತ್ತದೆ. ವ್ಯಕ್ತಿ ವಿಶಿಷ್ಟವಾದ ಅಂಶಗಳು ಕಥೆಯ ಮೇಲ್ಮೈರೂಪವನ್ನು ನಿರ್ಧರಿಸುತ್ತವೆ. ಪರಂಪರಾಗತ ಲಕ್ಷಣಗಳು ಕಥೆಯ ಆಂತರಿಕ ರಚನೆಯಲ್ಲಿ ಅಳವಟ್ಟಿವೆ.

ಕಥೆಗಾರನ ವೈಯಕ್ತಿಕತೆಯಿಂದಾಗಿ ಕಥೆಯ ಶೈಲಿಯ ಮೇಲಾಗುವ ಪ್ರಭಾವವನ್ನು ಮೊದಲು ಗಮನಿಸಬಹುದು. ಪರಂಪರೆ ಹಾಕಿಕೊಟ್ಟ ಮಿತಿಯಲ್ಲೂ ಕಥೆಗಾರನ ವೈಯಕ್ತಿಕ ಅಭಿವ್ಯಕ್ತಿಗೆ ಸಾಕಷ್ಟು ಸ್ವಾತಂತ್ರವಿದೆ. ಇದರಿಂದಾಗಿ ಕಥೆಗಾರನಿಂದ ಕತೆಗಾರನಿಗೆ ಅದೇ ಕಥೆ ಬೇಕಾದಷ್ಟು ರೀತಿಯಲ್ಲಿ ಮೈದಾಳಬಹುದು. ಲಿಂಡಾಡೆಗ್ ಅವರು ಹೇಳುವಂತೆ ಕಥೆಯ ನಿರೂಪಣೆಯಾಗುವಾಗ ಕಥೆಗಾರ ಮತ್ತು ಕೇಳುಗ ಸಮುದಾಯ ಪರಸ್ಪರ ಪ್ರಭಾವಬೀರುತ್ತಾರೆ. ಕೇಳುಗ ಒಂದು ಕಥೆಯನ್ನು ಗಣಿಸುವುದು ಕೂಡ ಕಥೆಗಾರನ ನಿರೂಪಣಾ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಉತ್ತಮ ಕಥೆಗಾರ ತನ್ನ ವಾಕ್‌ಚಾತುರ್ಯ, ನಾಟಕೀಯಶಕ್ತಿ ಹಾಗೂ ರಚನಾ ಪ್ರತಿಭೆಗಳಿಂದ ಕಥೆಯ ಹಂದರವನ್ನು ತುಂಬುಗೊಳಿಸಬಲ್ಲ.

ಉತ್ತಮ ಸ್ಮರಣಶಕ್ತಿ ಜನಪದ ಕಥೆಯ ನಿರೂಪಣೆಗೆ ತೀರ ಅವಶ್ಯಕ. ಇದರ ಬಲದಿಂದ ಆತ ಕಥೆಯ ರಚನೆಯನ್ನು ಘಾಸಿಗೊಳಿಸದೆ ಸ್ವಂತ ಅಂಶಗಳನ್ನು ಬೆಸೆಯುತ್ತಾನೆ. ಆತನ ಈ ಎಲ್ಲ ಶಕ್ತಿಗಳ ಸಮ್ಮಿಳನ ಪರಿಣಾಮಕಾರಿಯಾಗುವುದು ಆತನಿಗೆ ತಕ್ಕ ಕೇಳುಗ ಸಮುದಾಯವಿದ್ದಾಗ ಮಾತ್ರ.

ಲಿಂಡಾಡೇಗ್ ಹೇಳುವಂತೆ "ಕಥೆಗಾರ ಸಾಮಾಗ್ರಿಯನ್ನು ಆಯ್ದು ಕೊಳ್ಳುವುದರಲ್ಲಿ ಅದನ್ನು ವ್ಯಕ್ತಪಡಿಸುವುದರಲ್ಲಿ ಸಮುದಾಯದಿಂದ ಪ್ರಭಾವಿತನಾಗುತ್ತಾನೆ. ಕೇಳುಗರ ಸಹಕಾರ ಕಥೆಗಾರನ ಪರವಾಗಿದ್ದಷ್ಟು ಕಥೆ ಹೆಚ್ಚುರಂಗುಗೊಳ್ಳುತ್ತದೆ ಮತ್ತು ಪರಿಪೂರ್ಣಗೊಳ್ಳುತ್ತದೆ. ಕಥೆಯ ಹಂದರವನ್ನು ತುಂಬುಗೊಳಿಸಲು ಕಥೆಗಾರನ ವೈಯಕ್ತಿಕ ಅನುಭವ ವಿಸ್ತಾರ, ಕಲ್ಪನಾಶಕ್ತಿ, ಕಥೆಯ ಕ್ರಿಯೆಯಲ್ಲಿ ಆತನ ಒಂದಾಗುವಿಕೆ ಎಲ್ಲವೂ ಕಾರಣವಾಗುತ್ತದೆ. ಮತ್ತು ಆತನ ವೈಯಕ್ತಿಕ ಪ್ರತಿಕ್ರಿಯೆಗಳಲ್ಲಿ ಗೋಚರವಾಗುವುದು ಆತನ ಜೀವನಾನುಭವ. ಉದಾಹರಣೆಗೆ ಕಥೆಯಲ್ಲಿ ಬಡತನವಿರುವ ಪಾತ್ರದ ವಿವರಣೆ, ಗೋಳಾಟದ ಪ್ರಸಂಗ, ವೈಭವದ ಪ್ರಸಂಗ ಇತ್ಯಾದಿಗಳನ್ನು ತನ್ನ ಅನುಭವಕ್ಕೆ ತಕ್ಕಂತೆ ಎಷ್ಟು ದೀರ್ಘವಾಗಿಯಾದರೂ ವರ್ಣಿಸಬಹುದು. ಕಥೆಗಾರನ ಸ್ವಂತಿಕೆ ಇಂತಹ ಕಡೆ ಕಾಣಿಸುತ್ತದೆ. ಕೆಲವು ಘಟನಾಕ್ರಿಯೆ, ಪಾತ್ರ, ಸಂದರ್ಭಗಳೊಂದಿಗೆ ಕಥೆಗಾರ ಒಂದಾಗುವುದು, ನಿರೂಪಣೆಯಲ್ಲಿ ಗಮನಿಸಬೇಕಾದ ಅಂಶ. ಇದಕ್ಕೆ ಆತನ ಭಾವನೆಯ ಸ್ಥಿತಿ, ಸಾಂಸ್ಕೃತಿಕ ಹಿನ್ನೆಲೆಗಳು ಕಾರಣವಾಗಿರಬಹುದು. ನಿರೂಪಣೆಯಲ್ಲಿ ವ್ಯಕ್ತವಾಗುವ

ಆತನ ಉದ್ಗಾರಗಳಲ್ಲಿ ವೈಯಕ್ತಿಕ ಪಾಲ್ಗೊಳ್ಳುವಿಕೆ ವ್ಯಕ್ತವಾಗುತ್ತದೆ. ಕತೆಗಾರನ ಸ್ವಂತಿಕೆಯನ್ನು ಆತನ ತಂತ್ರಗಳಲ್ಲಿ, ಸಂಭಾಷಣೆಗಳಲ್ಲಿ, ವೈಯಕ್ತಿಕ ಟೀಕೆ ವ್ಯಾಖ್ಯಾನಗಳಲ್ಲಿ, ಪುನರಾವರ್ತನೆಗಳಲ್ಲಿ ಕಾಣಬಹುದಾಗಿದೆ.

ಕಥೆಯು ವಾಗ್ರೂಪದ ನಿರೂಪಣೆಯಾಗಿರುವುದರಿಂದ ಕಥೆಯನ್ನು ಶುದ್ಧ ಜನಪದ ಕಥೆಗಾರ, ಉತ್ತಮ ಕಲ್ಪನಾಶಕ್ತಿ, ಪ್ರತಿಭೆ ಇದ್ದವ, ಕಥೆಯನ್ನು ಸ್ವಾರಸ್ಯವಾಗಿ ನಿರೂಪಿಸಿದರೆ, ಅದೇ ಕಥೆ ನಿರೂಪಣಾ ಸೌಂದರ್ಯವಿಲ್ಲದೆ ಒಬ್ಬ ಸಾಧಾರಣ ದರ್ಜೆಯ ಕಥೆಗಾರನಲ್ಲಿ ಸತ್ವಹೀನವಾಗಿಬಿಡುತ್ತದೆ. ಕಥೆಗಾರ ಉತ್ತಮಮಟ್ಟದವನೇ ಆಗಿರಲಿ, ಸಾಧಾರಣಮಟ್ಟದವನೇ ಆಗಿರಲಿ ಕಥೆಯ ಪಾರಂಪರಿಕ ಶೈಲಿಯನ್ನು ಮಾತ್ರ ಉಳಿಸಿಕೊಂಡೇ ಬರುತ್ತಾನೆ.

ಪ್ರಪಂಚದ ಎಲ್ಲ ಜನಪದ ಕಥೆಗಳಲ್ಲೂ ಕೆಲವು ಸಮಾನ ರಚನಾ ತತ್ವಗಳಿರುವಂತೆ ಪ್ರಸ್ತುತ ಅಧ್ಯಯನದ 'ಕನ್ನಡ ಜನಪದ ಕಥೆಗಳು' ಕಥಾಸಂಕಲನದ ಕಥೆಗಳಲ್ಲಿ ಕೆಲವು ಸಮಾನರಚನಾ ತತ್ವಗಳನ್ನು ಒಳಗೊಂಡಿದೆ. ನಿರೂಪಣೆಯಲ್ಲಿನ ಈ ತತ್ವಗಳು ಕಥೆಗಳ ಸಿದ್ಧ ಶೈಲಿಗೆ ಕಾರಣವಾಗಿವೆ. ಈ ಶೈಲಿಯು ಪರಂಪರೆಯಿಂದಲೇ ಸಿದ್ಧವಾದುದು. ಪರಂಪರಾಗತವಾದ ಈ ಶೈಲಿ ಜನಪದ ಕಥೆಗಳ ಲಕ್ಷಣವೇ ಆಗಿದೆ. ಇದು ಇತರ ಸಾಹಿತ್ಯಕ ಪ್ರಕಾರಗಳಿಂದ ಕಥೆಯನ್ನು ಸ್ಪಷ್ಟವಾಗಿ ಬೇರ್ಪಡಿಸುತ್ತದೆ. ಈ ಲಕ್ಷಣ ತಂತ್ರವಿಧಾನವೂ ಆಗಿದೆ.

ಪ್ರಸ್ತುತ ಕಥೆಗಳು ಪಾರಂಪರಿಕ ಶೈಲಿಯಲ್ಲಿ ಸಮಾನವಾಗಿದ್ದರೂ ಅಡಕಗೊಂಡಿರುವಂತ ವಿವರಗಳು ಮಾತ್ರ ಆಯಾ ಸಂಸ್ಕೃತಿ, ಪ್ರಾದೇಶಿಕತೆಯಿಂದ ರೂಪಗೊಂಡಂಥವು. ಆದ್ದರಿಂದ ಕಥೆಯ ಶೈಲಿಯ ಸ್ವಾರಸ್ಯವನ್ನು ಅವುಗಳ ಅರ್ಥವನ್ನು ತಿಳಿಯಲು ಅವುಗಳ ಹಿನ್ನೆಲೆಯಲ್ಲಿರುವ ಸಂಸ್ಕೃತಿಯ ಸಂಪೂರ್ಣ ಪರಿಚಯವಿರುವುದು ಅಗತ್ಯವಾಗಿರುತ್ತದೆ. ಕಥೆಯನ್ನು ಕೇಳುವ ಹಾಗೂ ಹೇಳುವ ಇಬ್ಬರಿಗೂ ಕಥಾರಚನೆಯ ಬಗ್ಗೆ ಒಂದು ಪೂರ್ವಕಲ್ಪಿತ ಪ್ರಜ್ಞೆ ಇರುತ್ತದೆ. ಈ ಚೌಕಟ್ಟನ್ನು ಮೀರಿದ ರಚನೆಯನ್ನು ಕೇಳುಗ ಒಪ್ಪಿಕೊಳ್ಳುವುದಿಲ್ಲ.

ಪ್ರಸ್ತುತ ಕಥೆಗಳಲ್ಲಿನ ಪಾರಂಪರಿಕ ಶೈಲಿಯ ವಿಧಾನವನ್ನು ವಿಶೇಷ ಗಮನಕೊಟ್ಟು ಪರಿಶೀಲಿಸುವಾಗ ಯಾವುದೇ ಕಥೆಯನ್ನು ತೆಗೆದುಕೊಂಡಾಗ ಅದು ನಿರ್ದಿಷ್ಟ ಆರಂಭ, ಮಧ್ಯೆ, ಅಂತ್ಯಗಳನ್ನೊಳಗೊಂಡ ಒಂದು ಪರಿಪೂರ್ಣ ನಿರೂಪಣೆಯಾಗಿದೆ. ಕಥೆಯ ಪ್ರಾರಂಭವಾಕ್ಯ ತನಗಿಂತ ಹಿಂದೆ ಮತ್ತೇನನ್ನೂ ಸೂಚಿಸದೆ, ತನ್ನಿಂದಲೇ ಪ್ರಾರಂಭಿಸಿ ಮುಂದಿನ ವಿಷಯಕ್ಕೆ ಪ್ರವೇಶಿಕೆಯಾಗಿರುತ್ತದೆ. ಎಲ್ಲ ಕಥೆಗಳೂ ನಿತ್ಯಜೀವನದ ನೆಲೆಯಿಂದಲೇ ಪ್ರಾರಂಭವಾಗುತ್ತವೆ. ಆರಂಭವಾಕ್ಯ ಸಾಂಪ್ರದಾಯಿಕ ಶೈಲಿಯಲ್ಲಿರುತ್ತದೆ. ಒಂದಾನೊಂದು ಊರು ಅಲ್ಲೊಬ್ಬರಾಜ, ಒಂದು ಊರಿನಲ್ಲಿ ಒಬ್ಬ ಬಡವನ ಮಗ ಇದ್ದ, ಒಂದೂರಿನಲ್ಲಿ ಒಂದು ತೋಪು, ವೀರಾವತಿ ಅನ್ನೋದು ಒಂದು ಪಟ್ಟಣ. ಬೆಂಗಳೂರು ಅಂಥಾದೊಂದು ಊರು, ಚಂದ್ರಾವತಿ ಅನ್ನೋದು ಒಂದು ಪಟ್ಟಣ, ಚಂದ್ರಶೇಖರಾಯ ಅನ್ನುವನು ಅಲ್ಲಿಯ ದೊರೆ.... ಇತ್ಯಾದಿಯಾಗಿ ಕಥೆ ಪ್ರಾರಂಭವಾಗುತ್ತದೆ. ಬಹುಮಟ್ಟಿಗೆ ಶುದ್ಧಜನಪದ ಕಥೆಯಲ್ಲಿ ಊರು, ವ್ಯಕ್ತಿಗಳಿಗೆ ಯಾವುದೇ

ಹೆಸರಿರುವುದಿಲ್ಲ. ಇದ್ದರೂ ಅವು ಬಹುಮಟ್ಟಿಗೆ ಕಾಲ್ಪನಿಕ ಹೆಸರುಗಳಾಗಿರುತ್ತವೆ. ಪುರಾಣ, ಮಹಾಕಾವ್ಯಗಳನ್ನು ತಿಳಿದುಕೊಂಡಿರುವಾತ ಇಂತಹ ಹೆಸರುಗಳನ್ನು ಬಳಸುತ್ತಾನೆ.

ನಿರ್ದಿಷ್ಟ ಹೆಸರುಗಳಿಲ್ಲದಿರುವುದು ಕತೆಯ ಕಾಲ ಮತ್ತು ಸ್ಥಳಗಳಿಗೆ ಅನಂತ ವ್ಯಾಪಕತೆ ತಂದು ಕೊಡುತ್ತದೆ. ಹೀಗಾಗುವುದರಿಂದ ಕಥೆಯ ಅಸಂಭವನೀಯ ಅಂಶಗಳು ಯಾವುದೋ ಕಾಲದ, ಸ್ಥಳದ ಸಂಭವನೀಯ ಘಟನೆಗಳು ಆಗಿದ್ದಿರಬಹುದು ಎಂಬ ಭಾವನೆಯನ್ನು ತಂದು ಕೊಡುತ್ತದೆ. ಎಷ್ಟೋ ವೇಳೆ ಆರಂಭವಾಕ್ಯ ಕಥೆಗಾರನ ಹಿನ್ನೆಲೆಯನ್ನು ಸೂಚಿಸುತ್ತದೆ. ನಮ್ಮೂರಂತೋದು ಒಂದೂರು ನನ್ನಂತೋಳು ಒಬ್ಬ ಬಡವೆ, ಬೆಂಗಳೂರಂತೋದು ಒಂದು ಪಟ್ನ ಇತ್ಯಾದಿ, ಇಂತಹ ಅಂಶಗಳು ಹೇಳುಗನನ್ನು ಅವಲಂಭಿಸಿದವು. ಒಟ್ಟಿನಲ್ಲಿ ಕಥೆಗಳಿಗೆ ಸಾವಕಾಶ ಪ್ರವೇಶಿಕೆ ಇರುತ್ತದೆ. ಆರಂಭ ವಾಕ್ಯದಲ್ಲಿ ಹೆಚ್ಚು ವೈವಿಧ್ಯವಿರುವುದಿಲ್ಲ.

ಕಥೆಗಳ ಅಂತ್ಯ ಯಾವಾಗಲೂ ಸುಖಾಂತವಾಗಿರುತ್ತದೆ. ಪ್ರವೇಶಿಕೆ ಸಾವಧಾನವಾಗಿರುವಂತೆ ಮುಕ್ತಾಯ ಶಮನಸ್ಥಿತಿಯಲ್ಲಿರುತ್ತದೆ. ಕಥೆಗಳು ಮುಕ್ತಾಯವಾದ ನಂತರ ಅದರಾಚೆ ಮತ್ತೇನನ್ನೂ ಧ್ವನಿಸುವುದಿಲ್ಲ. ಕಥೆಯಲ್ಲಿ ನಡೆದ ಎಲ್ಲ ಘಟನೆಗಳಿಗೂ ಪೂರ್ಣ ವಿರಾಮ ಕಥೆಯ ಮುಕ್ತಾಯ ಭಾಗದಲ್ಲಿ ಸಿಗುತ್ತದೆ. ಕೊನೆಗೆ ನಾಯಕ ಪಡೆಯಬೇಕಾದ ಬಹುಮಾನಗಳನ್ನು ಪಡೆಯುವುದು, ಮದುವೆಯಾಗುವುದು, ತಂದೆ ತಾಯಿಗಳನ್ನು ಸೇರುವುದು, ದುಷ್ಟರಿಗೆ ಶಿಕ್ಷೆ ವಿಧಿಸುವುದು, ಉದಾಹರಣೆಗೆ ರಾಜ ತನ್ನ ಆರು ಜನ ಹೆಂಡತಿಯರ ತಲೆಯನ್ನು ಕಡಿಸಿ ತನ್ನ ಹೆಂಡತಿ ಮಕ್ಕಳ ಜೊತೆ ಸುಖವಾಗಿದ್ದನು ಎಂಬುದು 'ಪುಣ್ಯದ ಲಕ್ಷ್ಮಿ' ಕಥೆಯಲ್ಲಿ ಬರುತ್ತದೆ. ಅಣ್ಣನ್ನು ಸಿಗಿಸಿ ತೋರಣಕಟ್ಟಿ ಒಡವೆಗಳನ್ನು ಕಿತ್ತು ತಂದರು. ಇದು 'ತಾವರೆಯ ಹೂ' ಕಥೆಯಲ್ಲಿ ಬರುತ್ತದೆ. ಬಡತಂಗಿ ಕಥೆಯಲ್ಲಿ ಅಣ್ಣ ತನ್ನ ಹೆಂಡತಿಯನ್ನು ಸಿಗಿಸಿ ಹಾಕಿದ ಇನ್ನೊಂದು ಹೆಣ್ಣುತಂದು ಅವನಿಗೆ ಲಗ್ನಮಾಡಿ ಸುಖವಾಗಿದ್ದರು. ಹೀಗೆ ದುಷ್ಟರಿಗೆ ಶಿಕ್ಷೆಯಾಗುವುದು ಶತಸಿದ್ಧವಾಗಿರುತ್ತದೆ. ಮತ್ತೆ ಕೆಲವು ಕಥೆಗಳ ಅಂತ್ಯದಲ್ಲಿ ಯಾವುದು ಹೆಚ್ಚು ಯಾವುದು ಕಡಿಮೆ ನೀವೇ ಹೇಳಿ ಎಂದು ಕೇಳುಗರ ಸಮುದಾಯಕ್ಕೆ ಪ್ರಶ್ನೆಯನ್ನು ಹಾಕುವ ಕೆಲವು ಕಥೆಗಳು ಬರುತ್ತದೆ. 'ಯಾರು ಹೆಚ್ಚು' ಕಥೆಯಲ್ಲಿ ಬರುವ ಈ ವಾಕ್ಯವನ್ನು ಗಮನಿಸಬಹುದು.

ಈಗ ಮೂರು ಪಲ್ಲ ಮೆಣಸಿನಕಾಯಿ ಅರೆಯುತ್ತಲಿದ್ದರಲ್ಲ ಅವರು ಹೆಚ್ಚೋ? ಮೂರು ಬಂಡುಗ ಅವರೆಕಾಳು ಹಾಕುತ್ತಿದ್ದ ಇವರು ಹೆಚ್ಚೋ? ಬೆಣ್ಣೆಯೊಳಗೆ ಸಾವಿರ ಜನಕ್ಕೆ ಊಟಮುಗಿಸಿ ಸಾವಿರ ಗಾಡಿಗೂ ಒಂದೇ ದಿನದಲ್ಲಿ ಮುರಿದ ಮೇಣೆಗಳನ್ನು ತುಂಬಿಸಿದ ಸಾಹುಕಾರರು ಹೆಚ್ಚೋ? ಸೋರೆ ಬುರುಡೆಯನ್ನು ಕೊಚ್ಚಿಸಿದ ಮಗು ಹೆಚ್ಚೋ? ಆ ಬುರುಡೆಯನ್ನು ಎಡಗೈಯಿಂದ ಎತ್ತಿ ಏರಿಯ ಹಿಂದಕ್ಕೆಸೆದ ಬೆಸ್ತ ಹೆಚ್ಚೋ? ನೀವೇ ಯೋಚಿಸಿ! ಹೀಗೆ ಕೇಳುಗರ ಬುದ್ಧಿಗೆ ಕೆಲಸಕೊಡುವ ಅವರನ್ನೇ ಚಿಂತಿನೆಗೆ ಈಡು ಮಾಡುವ ಪ್ರಸಂಗಗಳು ಕೆಲವು ಕಥೆಗಳಲ್ಲಿ ಕಂಡುಬರುತ್ತದೆ.

ಹೀಗೆ ಅನೇಕ ವಿವರಗಳು ಕಥೆಯ ಕ್ರಿಯೆ ಮುಗಿದ ನಂತರವೂ ಬರುತ್ತದೆ. ಈ ವಿವರಗಳೆಲ್ಲ ಸಾಮಾನ್ಯವಾಗಿ ತಾನಾಗೆ ಗೊತ್ತಾಗುವಂಥವು. ಆದರೂ ಸಾಂಪ್ರದಾಯಿಕ ಕಥೆಗಳಲ್ಲಿ ಇವುಗಳ ನಿರೂಪಣೆ ಇದ್ದೇ ಇರುತ್ತದೆ. ಇತರ ಬೇರೆ ಕಥಾಸಂಕಲನದಲ್ಲಿ ಕಂಡುಬರುವಂತೆ 'ಅವ್ರು ಇಲ್ಲಿ ಬಾಳ್ತಾ ಅವ್ರೆ', 'ನಾವು ಬಳೆಸೊಪ್ಪಿಗೆ ಬೆಳ್ಳುಳ್ಳಿ ಇಲ್ಲದೆ ಇಲ್ಲಿವಿ; 'ಅಪ್ರಿಗೆ ಇಲ್ಲಿ ಸ್ಯೆ ಇಪ್ರಿಗೆ ಇಲ್ಲಿ ಸ್ಯೆ', 'ಎಲ್ಲಾ ಅಲ್ಲಿ ಸುಖವಾಗಿದ್ದಾರೆ, ನಾವು ಇಲ್ಲಿ ಇಟ್ಟಾಡೋದು', 'ನಾನು ಹೇಳಿದೆನಂತೆ ನೀನು ಕೇಳಿದೆಯಂತೆ', ಸೂತ್ರಬದ್ಧವಾದ ಪೂರ್ಣ ವಾಕ್ಯಗಳು ಈ ಕಥಾಸಂಕಲನದ ಕಥೆಗಳಲ್ಲಿ ಕಂಡುಬರುವುದಿಲ್ಲ.

ಇಲ್ಲಿ ಕಥೆಗಳು ಬಹುಮಟ್ಟಿಗೆ ಸುಖಾಂತವಾದ್ದರಿಂದ ಮದುವೆ ಮುಂತಾದ ಸಂತೋಷದ ಘಟನೆಗಳು ಕೊನೆಗೆ ಬರುತ್ತವೆ. ಇವುಗಳನ್ನು ಕೆಲವು ಸಿದ್ಧನುಡಿಗಟ್ಟುಗಳಲ್ಲಿ ನಿರೂಪಿಸುವುದರಿಂದ ಕಥೆಯು ಕೊನೆಯಲ್ಲಿ ಇವು ಸೂತ್ರರೂಪದ ವಾಕ್ಯವಾಗಿ ಕಾಣಿಸಿಕೊಳ್ಳುತ್ತವೆ. 'ಬೇಕಾದ್ದು ಬೇಡವಾದ್ದನ್ನು ಎಲ್ಲವನ್ನು ದೂಡಿಸಿಕೊಂಡು ಸುಖವಾಗಿದ್ದರು', "ಎಂಟುದಿನ ಅದ್ದೂರಿಯಿಂದ ಲಗ್ನವಾಯಿತು ಎಲ್ಲಾ ಸುಖವಾಗಿದ್ದರು", "ಯಾರು ಕೊಟ್ರೇನು ಭಾಗ್ಯದ ಲಕ್ಷ್ಮಿ ಕೊಡ್ಬೇಕು". "ಜೈ ಪರಮೇಶ್ವರ! ಎಂದು ಅಷ್ಟು ಜನಕ್ಕೂ ಅಡಿಗೆ ಊಟ ಮಾಡಿಸಿದ. ಇವನೇ ಆ ಪಟ್ಟಣಕ್ಕೆ ದೊರೆಯಾದ'. 'ಅದೃಷ್ಟವಿಲ್ಲದ ಮೇಲೆ ಏನು ಕೆಲಸ ಮಾಡಿದರೂ ಕೈ ಹತ್ತುವುದಿಲ್ಲ. ಇತ್ಯಾದಿ ವಾಕ್ಯಗಳು ನಿಯತವಾಗಿ ಬರುತ್ತವೆ. ಸಾಮಾನ್ಯವಾಗಿ ಕತೆಗಾರ ಇಂಥ ಯಾವುದಾದರೂ ಒಂದು ವಾಕ್ಯವನ್ನು ಬಳಸುತ್ತಾನೆ. ಕಥೆಯ ಮಧ್ಯೆ ಇಂತಹ ಪ್ರಸಂಗಗಳು ಬಂದು ನಿರೂಪಿತವಾಗುತ್ತವೆ.

ಕಥೆಗಳ ತಂತ್ರಗಳಲ್ಲಿ ಕಾಣುವ ಮತ್ತೊಂದು ಮುಖ್ಯವಾದ ಭಾಗ ಪುನರಾವರ್ತನೆ. ಇಡೀ ಕಥೆ ಸಂಭಾಷಣೆಗಳಲ್ಲಿ ಪುನರಾವರ್ತನೆಯಾಗುತ್ತದೆ. ಅಷ್ಟು ದೀರ್ಘವಲ್ಲದ ಕೆಲವು ವಿವರಗಳೂ, ಇದ್ದಹಾಗೆ ಪುನರಾವರ್ತನೆಯಾಗುತ್ತವೆ. ಕಥೆಯ ಪಾತ್ರಗಳು ತಾವು ಕೇಳಿದ ವಿಷಯವನ್ನು ಚಾಚೂತಪ್ಪದೆ ಮತ್ತೊಬ್ಬರಿಗೆ ಹೇಳುತ್ತವೆ. ಸಾಮಾನ್ಯವಾಗಿ ಶುದ್ಧ ಜನಪದ ಕಥೆಗಾರ ಇಂತಹ ವಿಷಯಗಳ ಪುನರಾವರ್ತನೆಯನ್ನು ಬೇಸರವಿಲ್ಲದೆ ಹೇಳುತ್ತಾನೆ.

ಮತ್ತೊಂದು ರೀತಿಯ ಪುನರಾವರ್ತನೆಯಲ್ಲಿ ಕೆಲವು ಪದಗಳು ಪುನರಾವರ್ತಿಸುವುದರಿಂದ ಆ ಸಂದರ್ಭ ಅಥವಾ ಸಂಬಂಧಿಸಿದ ವಿಷಯ ಪರಿಣಾಮಕಾರಿಯಾಗಿ ವ್ಯಕ್ತವಾಗುತ್ತದೆ.

ಒಂದಾನೊಂದು ಕಾಲದಲ್ಲಿ, ಒಂದಾನೊಂದು ಊರು, ಹೋಗೋಂದು ಹೋಗೊಂದು ಹೋದ. ಹಣ್ಣು ಹಣ್ಣು ಮುದುಕಿ ಇತ್ಯಾದಿ ನುಡಿಗಟ್ಟುಗಳಲ್ಲಿ ಅದೇ ಪದದ ಪುನರಾವರ್ತನೆಯಿಂದ ವಿಷಯದ ತೀವ್ರತೆ ಹೆಚ್ಚಿರುವುದನ್ನು ನೋಡುತ್ತೇವೆ. ಶುದ್ಧ ಜನಪದ ಕಥೆಗಳಲ್ಲಿ ಇಂತಹ ನುಡಿಗಟ್ಟುಗಳ ಬಳಕೆ ತೀರಾ ಸಾಮಾನ್ಯ.

ಈ ಕಥೆಗಳಲ್ಲಿ ಬಹುವಾಗಿ ಕಾಣಿಸಿಕೊಳ್ಳುವ ಮುಖ್ಯವಾದ ಅಂಶವೆಂದರೆ ಕಿರಿಯರ ಪ್ರಾಧಾನ್ಯ. ಒಂದು ಕುಟುಂಬದ ಮಕ್ಕಳಲ್ಲಿ ಅಥವಾ ಸಂಬಂಧಿಗಳಲ್ಲಿ ಕಿರಿಯವರು ಹೆಣ್ಣೇ ಆಗಲಿ ಅಥವಾ ಗಂಡೇ

ಆಗಲಿ ಇಡೀ ಕಥೆಯ ಕೇಂದ್ರ ವ್ಯಕ್ತಿಗಳು ಅವರೇ ಆಗಿರುತ್ತಾರೆ. ಯಾವುದೇ ವಿಷಯದ ತೀವ್ರತೆಯನ್ನು ವಿಶೇಷತೆಯನ್ನು ಇವರು ಪ್ರಕಟಿಸುತ್ತಾರೆ. ಸಾಹಸ, ಬುದ್ಧಿವಂತಿಕೆ, ಒಳ್ಳೆಯತನ, ಸೌಂದರ್ಯ ಇತರರನ್ನು ಪ್ರೀತಿಸುವ, ದುಷ್ಟತನವನ್ನು ವಿರೋಧಿಸುವ ಮೊದಲಾದ ಗುಣವಿಶೇಷಗಳು ಇವರಲ್ಲಿ ಕಾಣುತ್ತವೆ. ಯಾವ ಕಾರ್ಯವಾದರೂ ಕೊನೆಗೆ ಸಾಧಿತವಾಗುವುದು ಇವರಿಂದಲೆ, ಎಲ್ಲ ಅದೃಷ್ಟಗಳು ಕಿರಿಯರಿಗೆ ಒದಗುತ್ತವೆ. ಇಷ್ಟಾದರೂ ಕಥೆಯಲ್ಲಿ ಇತರರು ಅಂದರೆ ತಂದೆ ತಾಯಿಗಳು, ಅಣ್ಣ ತಮ್ಮಂದಿರು ಇತರ ಸೋದರ ಸಂಬಂಧಿಗಳು ಇವರನ್ನು ಹೀನಾಯವಾಗಿ ಕಾಣುತ್ತಾರೆ. ಅನೇಕ ಕಷ್ಟ ನಷ್ಟಗಳಿಗೆ ಈಡುಮಾಡುತ್ತಾರೆ. ಸಲ್ಲದ ಆರೋಪ ಹೊರಿಸಿ, ಕುತಂತ್ರಗಳನ್ನು ಮಾಡಿ ಅನೇಕ ರೀತಿಯ ಕಿರುಕುಳಗಳನ್ನು ಕೊಡುತ್ತಾರೆ. ಆದ್ದರಿಂದ ಕೇಳುಗರ ಮತ್ತು ಹೇಳುಗರ ಅನುಕಂಪ ಎಲ್ಲವೂ ಕಿರಿಯ ವ್ಯಕ್ತಿಗಳ ಮನಸೂರೆಗೊಳ್ಳುತ್ತಾರೆ.

ಒಂದು ಕುಟುಂಬದಲ್ಲಿ ವ್ಯಕ್ತಿಗಳ ಸಂಖ್ಯೆ ಎಷ್ಟೇ ಇರಲಿ ಅದರಲ್ಲಿ ಗಮನಾರ್ಹರಾಗುವವರು ಕಿರಿಯರು ಮಾತ್ರ. ಕುಟುಂಬದ ಹಿರಿಯರೆಲ್ಲರ ಗುಣವರ್ತನೆಗಳು ಒಂದು ರೀತಿಯಾದರೆ ಕಿರಿಯವರದೇ ಒಂದು ರೀತಿ ಇದ್ದು, ಮೊದಲಿನವೆರಡಕ್ಕೆ ವಿರುದ್ಧವೂ ಆಗಿರುತ್ತದೆ. ಕಥೆಗಳಲ್ಲಿ ಈ ತತ್ವದ ಮತ್ತೊಂದು ವಿಶೇಷವೆಂದರೆ ಅಷ್ಟು ಜನ ಸಂಬಂಧಿಗಳೂ ಒಂದೇ ಜಾತಿಯವರಾಗಿರುತ್ತಾರೆ. ಏಳು ಜನ ಅಥವಾ ಮೂರು ಜನ ಮಕ್ಕಳಿದ್ದರೆ ಎಲ್ಲರೂ ಗಂಡು ಮಕ್ಕಳು ಅಥವಾ ಎಲ್ಲರೂ ಹೆಣ್ಣುಮಕ್ಕಳೇ ಆಗಿರುತ್ತಾರೆ. ಏಳುಜನ ಮಕ್ಕಳಲ್ಲಿ ಮೊದಲ ಆರುಜನ ಗಂಡು, ಕೊನೆಯದು ಹೆಣ್ಣು, ಆಗಿರುತ್ತದೆ. ಹಿರಿಯವರು ಹೆಣ್ಣಾಗಲಿ ಗಂಡೇ ಆಗಲಿ ಪ್ರಧಾನ ವ್ಯಕ್ತಿಯಾಗಿ ಉಳಿಯಲು ಮಾನವ ಸಂಬಂಧಗಳ ಹಾಗೂ ಭಾವನೆಗಳ ದೃಷ್ಟಿಯಿಂದ ಸರಿ ಎಂದು ಕಂಡುಬಂದಿರುವುದೇ ಕಾರಣ ಎನ್ನುತ್ತಾರೆ ಮಾನವಶಾಸ್ತ್ರಜ್ಞರು.

ಪ್ರಸ್ತುತ ಕಥೆಗಳಲ್ಲಿ 'ನಗೆ ಮುತ್ತಿನ ಸರ', 'ಪಂಥಗಳನ್ನು ಗೆದ್ದ ರಾಜಕುಮಾರ', 'ಹೆಡ್ಡತಂದ ಜಾಣೆಯರು', 'ಮಳೆರಾಯನ ಮಡದಿ' ಮುಂತಾದ ಕಥೆಗಳಲ್ಲಿ ಮಕ್ಕಳಸಂಖ್ಯೆ ಏಳು, ಐದು, ಮೂರು ಜನರಿದ್ದು ಎಲ್ಲರೂ ಗಂಡಮಕ್ಕಳೇ ಆಗಿರುತ್ತಾರೆ. ಅವರಲ್ಲಿ ಕೊನೆಯವನು ತುಂಬ ಕಷ್ಟಗಳಿಗೆ ಸಿಲುಕಿ, ಕಷ್ಟಗಳನ್ನು ಅನುಭವಿಸಿದರೂ ಕೊನೆಗೆ ಸಾಹಸಿಯಾಗಿ ಯಶಸ್ವಿಯಾಗುತ್ತಾನೆ.

ನಗೆಮುತ್ತಿನ ಸರ ಕಥೆಯಲ್ಲಿ ಏಳುಜನ ಅಣ್ಣ-ತಮ್ಮಂದಿರಲ್ಲಿ ಕಿರಿಯವನು ಎಲ್ಲರಿಂದಲು ಅವಮಾನಿತನಾಗುವುದು ಕೊನೆಗೆ ಮಂತ್ರಿ, ರಾಜರಿಂದ ಅಣ್ಣಂದಿರಿಂದ ಹೊಗಳಿಕೆಗೆ ಪಾತ್ರನಾಗುವುದು, ಚಿತ್ರಗನ್ನೆ, ರತ್ನಗನ್ನೆ ಮತ್ತು ರಾಜಕುಮಾರಿಯನ್ನು ಗೆದ್ದು ಮದುವೆಯಾಗುವನು. 'ಹೆಡ್ಡ ತಂದ ಜಾಣೆಯರು' ಕಥೆಯಲ್ಲಿ ಮೂರನೆಯವನು ಸ್ವಲ್ಪ ದಡ್ಡನೆಂದು ಕಡೆಗಣಿಸಿದ್ದರು ಅವನು ರತ್ನಗನ್ನೆ, ತಾವರೆಗನ್ನೆ, ಜೇನುಗನ್ನೆ ಎಂಬ ರಾಣಿಯರನ್ನು ಮದುವೆಯಾಗಿ, ಕೊನೆಗೆ ರಾಜ,ಮಂತ್ರಿ, ದಂಡನಾಯಕ ಎಲ್ಲರನ್ನು ಚಿತೆಗೆ ಹಾಕಿ ಸುಡುವುದರಿಂದ ಅವನು ಬುದ್ಧಿವಂತನೆಂದು ತೋರುವುದನ್ನು ನೋಡುತ್ತೇವೆ.

'ಸೊಪ್ಪಿನ ಗುಡ್ಡಕ್ಕ', 'ಸಿರಿದೇವಿ', 'ಮಂಚದಮ್ಮ' ಕಥೆಗಳಲ್ಲಿ ಒಂದು ಕುಟುಂಬದ ಮಕ್ಕಳಲ್ಲಿ ಎಲ್ಲರೂ ಹೆಣ್ಣೇ ಆಗಿದ್ದು ಕೊನೆಯ ಕಿರಿಮಗಳು ಮಾತ್ರ ಹಲವು ಕಾರಣಗಳಿಂದ ಬಹಳ ಕಷ್ಟನಷ್ಟಗಳನ್ನು

ಅನುಭವಿಸುತ್ತಾಳೆ. ಆಕೆಯೇ ಕಥೆಯ ಪ್ರಧಾನ ಪಾತ್ರವೂ ಆಗಿರುತ್ತಾಳೆ. 'ಸೊಪ್ಪಿನ ಗುಡ್ಲಕ್ಕ'ನ ಕಥೆಯಲ್ಲಿ ದೊರೆಗೆ ಏಳುಜನ ಹೆಣ್ಣು ಮಕ್ಕಳಿದ್ದು ಆರುಜನಕ್ಕೆ ಮದುವೆಯಾಗಿ ಕೊನೆಯವಳು ಮದುವೆಯಾಗದೆ ಹಾಗೆ ಉಳಿದಿರುತ್ತಾಳೆ. ಅವಳು ತನ್ನ ತಂದೆಯಾದ ರಾಜ, ಮತ್ತು ಅಕ್ಕಂದಿರಿಂದ ದೂಷಿತಳಾಗಿ ಸೊಪ್ಪಿನ ಗುಡ್ಲಿನಲ್ಲಿ ಕಾಲಕಳೆಯುವಂತಾಗುತ್ತದೆ. ಆದರೆ ದೇವೇಂದ್ರರಾಯನನ್ನು ಮದುವೆಯಾಗಿ ತನ್ನ ಅಕ್ಕಂದಿರಿಗಿಂತಲೂ ಶ್ರೀಮಂತಳಾಗಿ ಅವರ ಹೊಟ್ಟೆ ಉರಿಗೆ ಕಾರಣಳಾಗುತ್ತಾಳೆ. ಇವಳ ಏಳಿಗೆ ಸಹಿಸದ ಅಕ್ಕಂದಿರು ಇವರಿಬ್ಬರಲ್ಲಿ ವಿರಸ ತಂದು ಗಂಡ ಹೆಂಡತಿಯನ್ನು ಬೇರೆ ಬೇರೆ ಮಾಡುತ್ತಾರೆ. ಈ ಕಷ್ಟಗಳೆಲ್ಲವನ್ನು ಸೊಪ್ಪಿನ ಗುಡ್ಲಕ್ಕ ತನ್ನ ಬುದ್ಧಿವಂತಿಕೆಯಿಂದ ಗೆದ್ದು ಬರುತ್ತಾಳೆ.

'ಸಿರಿದೇವಿ' ಕಥೆಯಲ್ಲಿ ದೊರೆ ಚಕ್ರಭೂತಿಗೆ ಮೂರುಜನ ಹೆಣ್ಣುಮಕ್ಕಳು ಇದ್ದು ಮೂರನೆಯವಳೆ ಸಿರಿದೇವಿ. ಸಿರಿದೇವಿ ತಂದೆ ಕೋಪಕ್ಕೆ ತುತ್ತಾಗಿ ಅವಳನ್ನು ಒಂದು ಕಾಡುಪಾಪಕ್ಕೆ ಮದುವೆಮಾಡುವನು. ಇವಳ ಸತ್ಯವಂತತನದಿಂದ ಗೊಂಬೆ, ಸುಂದರವಾದ ರಾಜಕುಮಾರನಾಗುವುದು ಹೀಗೆ ಎಲ್ಲರ ಹಗೆತನದಿಂದ ಹೊರಬಂದು ರಾಣಿಯಾಗಿ ಸುಖವಾಗಿರುವುದು.

'ಕುಂಟನ ಸಾಹಸ', 'ಬಡತಂಗಿ', ಮುಂತಾದ ಕಥೆಗಳಲ್ಲಿ ಮೊದಲು ಮಕ್ಕಳು ಕ್ರಮವಾಗಿ ಗಂಡುಮಕ್ಕಳಾಗಿದ್ದು, ಕೊನೆಯವಳು ಹೆಣ್ಣುಮಗಳಾಗಿರುತ್ತಾಳೆ. ಈ ಕಥೆಗಳಲ್ಲಿ ಹೆಣ್ಣೇ ಪ್ರಧಾನ ಸ್ಥಾನ ಪಡೆಯುತ್ತಾಳೆ, ಈಕೆಯೇ ನಾಯಕಿಯಾಗುತ್ತಾಳೆ.

'ಜಂಬೂನಾಗಯ್ಯನ ಸೊಸೆ', 'ಅರಿವೆ ಚೆನ್ನಿ', ಕಥೆಗಳಲ್ಲಿ ಕಿರಿಯ ಸೊಸೆಯರಿಗೆ ಸಂಬಂಧಿಸಿದ ಕಥೆಯಾಗಿದೆ.

ಪ್ರಸ್ತುತ ಕಥೆಗಳಲ್ಲಿ ಗಮನಿಸಬಹುದಾದ ಮತ್ತೊಂದು ಮುಖ್ಯ ಅಂಶ, ಇಲ್ಲಿ ಕ್ರಿಯೆಗಿರುವ ಪ್ರಾಧಾನ್ಯತೆ "ವ್ಯಕ್ತಿ ಅಥವಾ ವಸ್ತುವಿನ ಯಾವುದೇ ಗುಣ ಕ್ರಿಯೆಯ ಮೂಲಕವೇ ವ್ಯಕ್ತವಾಗುತ್ತದೆ" ಎಂದು ಒಲ್ರಿಕ್ ಹೇಳುತ್ತಾರೆ. "ಜನಪದರ ಭಾವನೆ ಐಕ್ಯತೆಯನ್ನೂ ಹೇಳುತ್ತದೆ" ಎಂದು ಅಲನ್ ಡಂಡಸ್ ಹೇಳುತ್ತಾರೆ. ಕಥೆಗಳಲ್ಲಿ ಐಕ್ಯತೆ ಬಹುಮುಖ್ಯವಾದ ಅಂಶ. ಈ ಅಂಶಗಳು ತೀರ ಸರಳ, ಸಂಕೀರ್ಣ ಮತ್ತು ಅಮೂರ್ತ ವಿಷಯಗಳು ಅವರ ವ್ಯಾಪ್ತಿಗೆ ಹೊಂದುವುದಿಲ್ಲ. ಆದ್ದರಿಂದ ಈ ಕಥೆಗಳಲ್ಲಿ ಯಾವುದೇ ಗುಣವನ್ನು ಕ್ರಿಯೆಯ ಮೂಲಕ ಕಣ್ಣಿಗೆ ಕಟ್ಟುವಂತೆ ಮಾಡುತ್ತಾರೆ. ವ್ಯಕ್ತಿ ಉತ್ತಮನೇ ಆಗಿರಲಿ, ಕೆಟ್ಟವನೇ ಆಗಿರಲಿ ಅದು ಆತ ಮಾಡುವ ಕ್ರಿಯೆಗಳನ್ನು ಅವಲಂಭಿಸಿರುತ್ತದೆ.

ಕಥೆಗಳ ನಿರೂಪಣೆಯಲ್ಲಿ ಕೆಲವು ನಿರ್ದಿಷ್ಟ ವಿಷಯಗಳನ್ನು ಹೇಳಲು ಪರಂಪರೆಯಿಂದಲೇ ಸಿದ್ಧವಾದ ಕೆಲವು ನುಡಿಗಟ್ಟುಗಳನ್ನು ಬಳಸುತ್ತಾರೆ. ಯಾವ ಕಥೆಯಲ್ಲಿ ಆ ವಿಷಯ ಬಂದಾಗಲೂ ಅದನ್ನು ಅಭಿವ್ಯಕ್ತಿಸಲು ಅದೇ ನುಡಿಗಟ್ಟುಗಳು ಬಳಕೆಯಾಗುತ್ತವೆ. ಆದ್ದರಿಂದ ಕಥೆಗಳಲ್ಲಿ ಒಂದು ರೀತಿಯ ಸಮಾನ ಶೈಲಿಯನ್ನು ಗುರುತಿಸಬಹುದು. ಈ ರೀತಿಯ ವಿವರಗಳು ಕಥೆಯ ಕ್ರಿಯೆಗಾಗಲಿ ರಚನಾ

ತಂತ್ರಕ್ಕಾಗಲಿ ಉಳಿದುಕೊಂಡು ಬಂದಿರುವುದರಿಂದ ಇವುಗಳನ್ನು ಬದಲಿಸಿದರೆ ನಿರೂಪಣೆಯ ಸಾಂಪ್ರದಾಯಿಕ ಕಳೆ ಹಾಗೂ ಕಲಾತ್ಮಕತೆಗೆ ಕುಂದುಂಟಾಗುತ್ತದೆ ಎನ್ನಬಹುದಾಗಿದೆ.

ಈ ಕಥೆಗಳಲ್ಲಿ ದೂರ ಸ್ಥಳವನ್ನು ತಿಳಿಸುವ ನುಡಿಗಟ್ಟುಗಳ ವಿವರಗಳನ್ನು ಪರಿಶೀಲಿಸಬಹುದು. ಬಹುದೂರ ಪ್ರಯಾಣವನ್ನು "ಹೋಗೊಂದು ಹೋಗೊಂದು ಹೋದ", "ಏಳು ಸಮುದ್ರಗಳಾಚೆ" ಇತ್ಯಾದಿ ನುಡಿಗಳಲ್ಲಿ ವ್ಯಕ್ತಪಡಿಸುತ್ತಾರೆ. ಈ ತರದ ವಿವರಣೆಗಳು ಬದಲಾಗುವುದೇ ಇಲ್ಲ. ದೂರ ಎಂಬುದರ ಅರ್ಥ ಬಹುಪರಿಣಾಮಕಾರಿಯಾಗಿ ಬಹಳದೂರದ ಕಲ್ಪನೆಯನ್ನು ತಂದುಕೊಡುತ್ತದೆ. 'ಒಂದಾನೊಂದು ಕಾಲ' ಎಂಬ ನುಡಿಗಟ್ಟು ಕಾಲವನ್ನು ಬಹು ಹಿಂದಕ್ಕೆ ಒಯ್ಯುತ್ತದೆ. ಗಾಢಾಂಧಕಾರ ಹಾಗೂ ಅದರ ನಿಶ್ಯಬ್ಧತೆಯನ್ನು 'ಕಲ್ಲು ನೀರು ಕರಗುವ ಹೊತ್ತು' ಎಂಬ ನುಡಿಗಟ್ಟು ಬಹು ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತದೆ. ಕಥೆಗಳಲ್ಲಿ ಅನವಶ್ಯಕ ವಿವರಗಳಿಗೆ ಎಡೆಯೇ ಇಲ್ಲ. ಒಂದೆರಡು ನುಡಿಗಟ್ಟುಗಳಲ್ಲಿ ಇಡೀ ಸಂದರ್ಭವನ್ನು ಸೂಚಿಸುವ ವಿಧಾನ ಕಥೆಗಳ ಮತ್ತೊಂದು ವೈಶಿಷ್ಟ್ಯವೇ ಆಗಿದೆ.

ಸಿದ್ಧಶೈಲಿಯಲ್ಲಿ ಇನ್ನೂ ಅನೇಕ ರೀತಿಯ ವಿವರಗಳನ್ನು ಕಾಣಬಹುದು. ದುಷ್ಟರನ್ನು ಶಿಕ್ಷಿಸುವಾಗ, ಕೊಲ್ಲಲು ಉಪಯೋಗಿಸುವ ಆಯುಧ ಯಾವಾಗಲೂ 'ಚಂದ್ರಾಯುಧ' ಆಗಿರುತ್ತದೆ. ಕಾಡಿನಲ್ಲಿ, ದೂರದಲ್ಲಿ ಸೂಜಿಗಾತ್ರದ ಹೊಗೆ ಕಂಡರೆ ಅದು ರಾಕ್ಷಸಿಯ ವಾಸಸ್ಥಾನದ ಸೂಚನೆಯಾಗಿದೆ. ಅನ್ಯಾಯವಾಗಿ ಶಿಕ್ಷೆಯನ್ನು ಅನುಭವಿಸುವವರು ಪಡೆಯುವ ಆಹಾರ 'ಕಗ್ಗಲು ರಾಗಿ ಹಿಟ್ಟು, ಮುಗ್ಗಲು ಹುರುಳಿಸಾರು' ಇತ್ಯಾದಿ ಆಗಿರುತ್ತದೆ.

ಪ್ರಸ್ತುತ ಕಥೆಗಳಲ್ಲಿ ಕೆಲವು ಸಂಭಾಷಣೆಗಳು, ಪ್ರತಿಕ್ರಿಯೆಗಳೂ ಸಹ ಯಾವುದೇ ಕಥೆಯಲ್ಲಿ ಅಂಥದೇ ಸಂದರ್ಭ ಬಂದಾಗ ಒಂದೇ ತೆರನಾಗಿರುತ್ತದೆ. ಕಥಾ ನಾಯಕಿಯ ಹೆರಿಗೆಯ ಸಮಯದಲ್ಲಿ ಸೂಲಗಿತ್ತಿಯರು ಅಥವಾ ಆಕೆಯ ವೈರಿಗಳು ಆಕೆಯನ್ನು ಕೇಳುವ ಪ್ರಶ್ನೆ-'ನಮ್ಮ ಸೀಮೆ ಹೆರಿಗೆ ಮಾಡಿಸೋಣೋ, ನಿಮ್ಮ ಸೀಮೆ ಹೆರಿಗೆ ಮಾಡಿಸೋಣೋ' ಎಂಬ ನುಡಿಗಟ್ಟು 'ಪುಣ್ಯದ ಲಕ್ಷ್ಮಿ' ಕಥೆಯಲ್ಲಿ ನಾಯಕಿಯ ಹೆರಿಗೆ ಸಮಯದಲ್ಲಿ ಹೇಳುವುದು, ನಾಯಕಿ 'ನಿಮ್ಮ ಸೀಮೆದ್ನೆ ಮಾಡಿಸಿ' ಎಂದು ಹೇಳುತ್ತಾಳೆ. ಈ ಪ್ರಶ್ನೆ ಅದರ ಉತ್ತರದ ವಿವರಗಳೆಲ್ಲವೂ ಸಹ ಒಂದೇ ರೀತಿಯಾಗಿರುತ್ತದೆ. ಎರಡು ಹಕ್ಕಿಗಳು ಕೂತು ಸಂಭಾಷಿಸುವಾಗ ಒಂದು ಮತ್ತೊಂದನ್ನು ಕಥೆ ಹೇಳಲು ಕೇಳುವುದು, ಈ ಕಥಾಸಂಕಲನದ ಪ್ರಾಣಿಕಥೆಗಳಲ್ಲಿನ 'ಕಾಗಕ್ಕ ಗುಬ್ಬಕ್ಕ'ನ ಕಥೆಯಲ್ಲಿ ಬರುತ್ತದೆ. ಒಂದು ಹಕ್ಕಿಯು ಹಿಂದಾದದ್ದು ಹೇಳಲೋ, ಮುಂದೆ ನಡೆಯುವುದನ್ನು ಹೇಳಲೋ ಎನ್ನುವುದು.

ಇಂತಹ ವಿವರಗಳನ್ನು, ನುಡಿಗಟ್ಟುಗಳನ್ನು ಕೆಲವೊಮ್ಮೆ ಕತೆಗಾರ ಮರೆತರೂ ಅವುಗಳ ಅಲ್ಪಸ್ವಲ್ಪ ಹರುಕು ಮುರುಕು ರೂಪಗಳನ್ನಾದರೂ ಬಳಸಿ ಹೇಳುತ್ತಾನೆ. ಇಂತಹ ಕಡೆ ಜನಪದರಿಗೆ ತಮ್ಮ ಪರಂಪರೆಯ ಮೇಲಿರುವ ಅಗಾಧ ಪ್ರೀತಿ, ಶ್ರದ್ಧೆ ವ್ಯಕ್ತವಾಗುತ್ತದೆ. ಕೆಲವು ವಿವರಗಳು ಅವುಗಳ ಕಲಾತ್ಮಕತೆಯಿಂದ ಮನಸೆಳೆಯುತ್ತವೆ. ಇಲ್ಲಿ ಕೇವಲ ಒಂದೆರಡು ನುಡಿಗಟ್ಟುಗಳಿಂದ, ಉತ್ಪ್ರೇಕ್ಷೆಗಳಿಂದ ಇಡೀ ಸಂದರ್ಭ,

ಹಿನ್ನೆಲೆಯನ್ನು ಪರಿಣಾಮಕಾರಿಯಾಗಿರುವುದನ್ನು ನೋಡಬಹುದು. ಅತೀ ಸುಂದರವಾದ ವ್ಯಕ್ತಿ ಎನ್ನುವುದನ್ನು 'ಸೂರ್ಯನಿಗೆ ಒಂದು ಪಾಲು, ಚಂದ್ರನಿಗೆ ಒಂದು ಪಾಲು' ಹೋಳೀರೆದ್ದ ಎಂಬ ಮಾತುಗಳಲ್ಲಿ ವ್ಯಕ್ತಪಡಿಸುತ್ತಾರೆ. ಕಥೆಯ ನಾಯಕ ಎಷ್ಟು ಭೋರವಾಗಿ ಆರೋಗ್ಯವಂತನಾಗಿ ಬೆಳೆಯುತ್ತಿದ್ದ ಎಂಬುದನ್ನು 'ಹೊತ್ತಿಗೆ ಬಾ ಅಂದ್ರೆ ಜಾವಕ್ಕೆ ಬಂದ', ಅಂದವಾ 'ಒಂದು ದಿನ ಅಂಬೋದು ಒಂದು ವರ್ಷ ಎರಡು ದಿನ ಎಂಬೋದು ಎರಡು ವರ್ಷ ಹೀಗೆ ಹದಿನಾರು ವರ್ಷದ ಹುಡುಗನಾದ ಎಂದು ವರ್ಣಿಸುತ್ತಾರೆ. ಎಲ್ಲಾ ಚಿಂತನೆಗಳನ್ನು ವ್ಯಕ್ತಪಡಿಸುವುದು 'ಮಂಚದ ಮೇಲೆ ಮೊಖಾಡೆ ಮಲಗಿದಳು' ಎಂಬ ವಿವರದ ಮೂಲಕ. ಕಥೆಯಲ್ಲಿ ಯಾವುದೇ ಪಾತ್ರಕ್ಕೆ ಚಿಂತೆಯಾದರೂ ಈ ರೀತಿಯ ವರ್ತನೆ ಸಮಾಧಾನವಾದುದಾಗಿದೆ. ಜಗತ್ತಿನ ಬಹುಭಾಗಗಳ ಕಥೆಗಾರರು ಒಂದು ಕ್ರಿಯೆಯನ್ನು ಅದರ ವಿವರವನ್ನು ಹೇಳುವುದಕ್ಕಾಗಿ ಆಯ್ದುಕೊಳ್ಳುವ ಅಂಶಗಳು ಒಂದೇ ತೆರನಾದರೂ ಅದನ್ನು ಅಭಿವ್ಯಕ್ತಿಸಲು ಬಳಸುವ ನುಡಿಗಟ್ಟುಗಳು ಆಯಾ ಪ್ರದೇಶದ ಹಿನ್ನೆಲೆಯಿಂದ ಮೂಢಿಬರುತ್ತವೆ. ಉದಾಹರಣೆಗೆ ಪ್ರಸ್ತುತ ಕಥೆಗಳಲ್ಲಿ 'ಏಳು ಸಮುದ್ರಗಳಾಚೆ' ಎಂಬುದನ್ನು ದೂರವನ್ನು ಹೇಳಲು ಬಳಸುವುದನ್ನು ಕಾಣುತ್ತೇವೆ.

ಕನ್ನಡದ ಜನಪದ ಕಥೆಗಳಲ್ಲಿ ಬಹುವಾಗಿ ಪ್ರಚಲಿತವಿರುವ ಮತ್ತು ಅವುಗಳಿಗೆ ವಿಶಿಷ್ಟ ಎಂದೆನಿಸುವ ಕೆಲವು ಆಶಯಗಳನ್ನಿಲ್ಲಿ ಉದಾಹರಿಸಬಹುದು. ನಿಜವಾದ ತಾಯಿ-ಮಕ್ಕಳನ್ನು ನಿಲ್ಲಿಸುವುದು, ತಾಯಿಯ ಎದೆಯಿಂದ ಉಕ್ಕಿದ ಹಾಲು ಏಳು ಕೆರೆಗಳನ್ನು ದಾಟಿ ಮಕ್ಕಳ ಬಾಯಿಗೆ ಬಿದ್ದಾಗ ಅವರು ನಿಜವಾದ ತಾಯಿ-ಮಕ್ಕಳೆಂದು ನಿರ್ಧರಿಸುವುದು, ಕಷ್ಟಕ್ಕೆ ನಿಲುಕದ ನಾಯಕಿ ಅಥವಾ ನಾಯಕ ಹುತ್ತಕ್ಕೆ ಕೈಹಾಕಿ ಆತ್ಮಹತ್ಯೆಗೆ ಪ್ರಯತ್ನಿಸುವುದು. ಆ ವ್ಯಕ್ತಿಯ ಕೈಸೋಕಿ ಹಾವಿನ ಕಪಾಲಕುರ ಒಡೆದಾಗ ನೋವಿನ ಉಪಶಮನವಾಗಿ ಹಾವು ಕೃತಜ್ಞತೆಯಿಂದ ಆ ವ್ಯಕ್ತಿಯ ಕಷ್ಟಗಳನ್ನು ನಿವಾರಿಸಲು ಸಹಾಯ ಮಾಡುವುದು.

ಪ್ರತಿಯೊಂದು ಆಟದಲ್ಲೂ ಗೆದ್ದ ಬಾಲಕನನ್ನು ಆತನ ಹಿನ್ನೆಲೆಯ ವಿಷಯ ಕುರಿತು ಗೆಳೆಯರು ಅಣಕವಾಡುವುದು, ಇದರಿಂದ ಮನನೊಂದ ಬಾಲಕ ತನ್ನ ಹಿನ್ನೆಲೆಯ ವಿವರಗಳನ್ನು ತಿಳಿದು ಮುಂದಿನ ಸಾಹಸಕ್ಕೆ ತೊಡಗುವುದು. ಇಲ್ಲಿ ಗೆಳೆಯರ ಅಣಕುಮಾತುಗಳು ಕಥೆಗೆ ಬಹುಮುಖ್ಯ ತಿರುವನ್ನು ತಂದುಕೊಡುತ್ತವೆ. ಕಷ್ಟಕ್ಕೆ ಸಿಲುಕಿದ ವ್ಯಕ್ತಿಗೆ ಶಿವ ಪಾರ್ವತಿಯರು ನೆರವಿಗೆ ಬರುವ ಸನ್ನಿವೇಶ, ಮಾರುವೇಷದಲ್ಲಿರುವ ವ್ಯಕ್ತಿಯ ನಿಜರೂಪ ಬಯಲಾಗುವುದು ಆ ವೇಷವನ್ನು ತೆಗೆದಿಟ್ಟು ಸ್ನಾನಕ್ಕೆ ಇಳಿದಾಗ, ಪಗಡೆಯಾಟದ ಪಂಥದಲ್ಲಿ ಬೆಕ್ಕಿನ ತಲೆಯ ಮೇಲೆ ದೀಪ ಹಚ್ಚಿಡುವುದು, ಬೆಕ್ಕು ದೀಪ ಕೆಳಗೆ ಹಾಕಿ ಓಡಿದರೆ ಆ ಪಂಥ ಹಾಕಿದವನು ಸೋತಂತೆ. ನಾಯಕ ಉಪಾಯದಿಂದ ಬೆಕ್ಕಿನೆದುರಿಗೆ ಇಲಿ ಬಿಟ್ಟು ಪಂದ್ಯದಲ್ಲಿ ಗೆಲ್ಲುವುದು, ವ್ಯಕ್ತಿಯ ಬದಲಿಗೆ ಆತನ ಪಟ್ಟದ ಕತ್ತಿಗೆ ಧಾರೆ ಎರೆಯುವುದು, ರಾಕ್ಷಸಿಯ ನೆಲೆಗೆ ಬಂದ ವ್ಯಕ್ತಿಯನ್ನು ಆಕೆಯ ಮಗಳು ಹಲ್ಲಿಯಾಗಿ ಪರಿವರ್ತಿಸಿ ಗೋಡೆಗೆ ಹಾಕುವುದು, ಒಬ್ಬ ವ್ಯಕ್ತಿಗೆ ವಿಧಿಸುವ ಕಷ್ಟದ ಪರೀಕ್ಷೆಗಳೂ ಆಯಾ ಪ್ರದೇಶದಲ್ಲಿ ವಿಶಿಷ್ಟವಾಗಿರಬಹುದು. ಪ್ರಸ್ತುತ ಕಥೆಯಲ್ಲಿ ಬಹುವಾಗಿ ಕಾಣುವ ಇಂತಹ ಪರೀಕ್ಷೆಗಳು 'ಹನ್ನೆರಡು ಪಲ್ಲ ಎಳ್ಳು ಜೀರಿಗೆ ಬೆರಸಿ, ಬೆಳಗಾಗುವುದರಲ್ಲಿ

ಅವುಗಳನ್ನು ಅರಿಯುವಂತೆ ಹೇಳುವುದು, ಹುಲಿಯ ಹಾಲು, ಮೊಲದ ಗಿಣ್ಣು ತರುವುದು ಇತ್ಯಾದಿ. ಕಥೆಯ ಮುಖ್ಯ ಪಾತ್ರಕ್ಕೆ ತಿರಸ್ಕಾರ ತೋರಿದ್ದ ಸಂಬಂಧಿಗಳು ಕಾರಣಾಂತರದಿಂದ ದುರವಸ್ಥೆಗೆ ಇಳಿಯುವುದು, ಅವರು ಸೌದೆ ಮಾರುತ್ತಾ ಬಂದಾಗ, ತಿರಸ್ಕೃತನಾಗಿದ್ದ ವ್ಯಕ್ತಿ ಉತ್ತಮ ದೆಸೆಯನ್ನು ಪಡೆದಿದ್ದು ಅನ್ನ ಸಂತರ್ಪಣೆ ಏರ್ಪಡಿಸಿ ತಾನು ಯಾರು ಎಂಬುದನ್ನು ಬಂಧುಗಳಿಗೆ ತಿಳಿಸುವುದು. ಗರ್ಭಿಣಿಯಾದ ಕಿರಿಯ ಹೆಂಡತಿಯ ಬಗ್ಗೆ ಅಸೂಯೆ ತಾಳಿದ ಸವತಿಯರು ಆಕೆಯ ಕಣ್ಣು ಕಟ್ಟಿ, ಬಾವಿಯ ಮೇಲೆ ಹನ್ನೆರಡು ಕಾಲಿನ ಏಣಿಹಾಕಿ ಆಕೆಯನ್ನು ಹತ್ತಿ ಇಳಿಸಿ ಹೆರಿಗೆ ಮಾಡಿಸುವುದು, ಮಕ್ಕಳಿಗೆ ಬದಲಾಗಿ ಗುಂಡುಕಲ್ಲು, ಕಸಪೊರಕೆಗಳನ್ನು ಬದಲಿಸುವುದು, ಒಬ್ಬ ದೊರೆ ತನ್ನ ಸಿಂಹಾಸನಕ್ಕೆ ಉತ್ತರಾಧಿಕಾರಿಯಿಲ್ಲದೆ ಸತ್ತಾಗ ಜನರು ಬಂದು ಆನೆಯ ಸೊಂಡಿಲಿಗೆ ಹೂಮಾಲೆ ಕೊಟ್ಟು ಕಳಿಸುವುದು, ಅದು ಯಾರಿಗೆ ಮಾಲೆ ಹಾಕುತ್ತೊ ಅವರನ್ನು ಉತ್ತರಾಧಿಕಾರಿಯೆಂದು ನೇಮಿಸುವುದು.

ಪ್ರಸ್ತುತ ಕಥೆಗಳಲ್ಲಿ ಕಥೆಯ ರಚನೆಯಲ್ಲಿ ಅಡಕವಾಗಿರುವ ಶೈಲೀಕೃತ ವಿವರಗಳು, ನಿರೂಪಣಾ ತಂತ್ರಗಳು, ವಾಕ್ಸಂಪ್ರದಾಯದಲ್ಲಿ ಕಥೆ ಕೆಡದಂತೆ ಉಳಿಯುವುದಕ್ಕೆ ಹಾಗೂ ಕಥೆಯ ಆಂತರಿಕ ಗುಣವಾದ ಕ್ರಿಯಾವೇಗವನ್ನು ಯಶಸ್ವಿಯಾಗಿಸುವುದಕ್ಕೆ ಬಹಳಷ್ಟು ಸಹಕಾರಿಯಾಗಿವೆ. ಪುನರಾವರ್ತನೆಗಳು ಕಥೆಯ ಸ್ಮರಣೆಯಲ್ಲಿ ಉಳಿಯುವುದಕ್ಕೆ ಬಹಳ ಸಹಕಾರಿಯಾಗಿವೆ. ಕಥೆಗಳು ಕ್ರಿಯಾ ಪ್ರಧಾನವಾದವುಗಳು, ಅವುಗಳ ಪ್ರತಿಯೊಂದು ವಿವರಗಳೂ ಕ್ರಿಯಾಪೂರ್ಣವಾಗಿವೆ. ಕಥೆಯನ್ನು ಕುಂಟಿಸುವುದಕ್ಕೆ ಕಥೆಯಲ್ಲಿ ಆಸ್ಪದವಿಲ್ಲ. ನೆನಪಿನಲ್ಲಿ ಉಳಿಯುವುದಕ್ಕೆ ಅನುಕೂಲವಾಗುವ ಸರಳತೆ ಕಥೆಯ ಕ್ರಿಯಾವೇಗವನ್ನು ಸಾಧಿಸಿದೆ.

ಅಧ್ಯಾಯ - ೬

ಉಪಸಂಹಾರ

ಉಪಸಂಹಾರ

ಪ್ರಸ್ತುತ ಅಧ್ಯಯನ ಜೀಶಂಪ ಅವರ 'ಕನ್ನಡ ಜನಪದ ಕಥೆಗಳು' ಕಥಾ ಸಂಕಲನದ ಕಥೆಗಳನ್ನು ಈಗಾಗಲೇ ನಡೆದಿರುವ ಅಧ್ಯಯನಗಳ ಬೆಳಕಿನಲ್ಲಿ ವಿವಿಧ ಕೋನಗಳಿಂದ ನೋಡಿ ಸ್ಥೂಲವಾಗಿ ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಕಥಾಸಂಕಲನದ ಕಥೆಗಳು ದಕ್ಷಿಣ ಕರ್ನಾಟಕದ ಹಳೇ ಮೈಸೂರು ಭಾಗದ ಪ್ರದೇಶಗಳಲ್ಲಿ ಸಂಗ್ರಹಿಸಿದ್ದುದರಿಂದ ಆ ಪ್ರದೇಶದ ಸಾಂಸ್ಕೃತಿಕ ಹಿನ್ನೆಲೆ, ಪ್ರಾದೇಶಿಕ ವೈಶಿಷ್ಟ್ಯವನ್ನು ಭಾಷಾ ಬಳಕೆಯ ವಿಶಿಷ್ಟತೆಯನ್ನು ಸಾಮಾಜಿಕ ಸ್ಥಿತಿಗತಿ, ಸಂಸ್ಕೃತಿ ಹಾಗೂ ಅಲ್ಲಿನ ಜನರ ಜೀವನ ಸಂಪ್ರದಾಯಗಳನ್ನು ತಿಳಿಯಲು ಪ್ರಸ್ತುತ ಕಥೆಗಳು ಆಧಾರವಾಗಿವೆ.

ಡಾ.ಜೀಶಂಪ ಅವರು ಕನ್ನಡ ಜಾನಪದ ವಿದ್ವಾಂಸರಲ್ಲಿ ಅಗ್ರಗಣ್ಯರು. ಕರ್ನಾಟಕ, ಭಾರತೀಯ ಹಾಗೂ ಪಾಶ್ಚಾತ್ಯ ಜಾನಪದದ ಬಗೆಗೆ ಸರಿಯಾಗಿ ತಿಳುವಳಿಕೆ ಹೊಂದಿದ ಅವರು ಅನ್ವಯಿಕವಾಗಿ ಮಾತನಾಡಬಲ್ಲ ಶಕ್ತಿಯನ್ನು ಪಡೆದಿದ್ದರು. ಅವರ ಬರವಣಿಗೆಗಳು, ಸಂಗ್ರಹಗಳು ಅವರ ಈ ಬಗೆಯ ತಿಳುವಳಿಕೆಯ ಹಿನ್ನೆಲೆಯಲ್ಲಿ ಗಮನಾರ್ಹ ಮಹತ್ವವನ್ನು ಪಡೆಯುತ್ತವೆ.

ಜೀಶಂಪ ಅವರು ದೊಡ್ಡ ಜಾನಪದ ಸಂಶೋಧಕರಾಗಿದ್ದಂತೆಯೇ ಅಷ್ಟೇ ದೊಡ್ಡ ಸಂಗ್ರಹಕಾರರಾಗಿಯೂ ಹೆಸರಾದವರು. ವಿಮರ್ಶೆ ಮತ್ತು ವಿಶ್ಲೇಷಣೆಯಲ್ಲಿಯೂ ಪ್ರಬುದ್ಧರಾಗಿದ್ದರು. ಜಾನಪದ ಕ್ಷೇತ್ರಕಂಡ ಅಪರೂಪದ ಮಾಹನ್ ಶಕ್ತಿ ಜೀಶಂಪ ಅವರ ಸಂಗ್ರಹಗಳು ಅಪಾರ ಪ್ರಮಾಣದಲ್ಲಿವೆ. ಅವುಗಳಲ್ಲಿ 'ಕನ್ನಡ ಜನಪದ ಕಥೆಗಳು' ಕಥಾಸಂಕಲನವು ಪ್ರಮುಖವಾಗಿದೆ. ಸುಮಾರು ೧೯೭೦ರ ದಶಕದಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರಕಟವಾದ ಪ್ರಸ್ತುತ ಕಥಾಸಂಕಲನವು ಕನ್ನಡ ಜನಪದ ಕಥಾಸಂಕಲನಗಳಲ್ಲಿ ಒಂದು ಮಾದರಿ ಸಂಗ್ರಹವಾಗಿ ಈ ಕೃತಿ ನಿಲ್ಲುತ್ತದೆ.

ಪ್ರಸ್ತುತ ಕೃತಿಯ ಕಥೆಗಳಲ್ಲಿನ ವೈವಿದ್ಯತೆ, ಅನನ್ಯತೆ ವ್ಯಾಪಕತೆಗಳು ಹಾಗೂ ಸಂಕಲನದ ವಿಶಿಷ್ಟತೆ ಹಲವಾರು ರೀತಿಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಅಷ್ಟೇ ಅಲ್ಲದೆ ಈ ಕೃತಿಯ ನಂತರ ಬಂದ ಎಲ್ಲಾ ಅಧ್ಯಯನಗಳಿಗೂ ಪ್ರೇರಣೆಯನ್ನು ಒದಗಿಸುತ್ತದೆ. ಈ ಕಥಾ ಸಂಕಲನಕ್ಕೆ ಜೀಶಂಪ ಅವರು ಬರೆದಿರುವ ಪ್ರಸ್ತಾವನೆ ಕನ್ನಡ ಜನಪದ ಕಥೆಗಳ ಬಗೆಗಿನ ವಿದ್ವತ್ಪೂರ್ಣ ವಿವೇಚನೆಯಾಗಿದೆ. ಈ ಕಥಾಸಂಗ್ರಹ ಪ್ರಕಟವಾದ ನಂತರ ಪ್ರಕಟವಾದ ಕನ್ನಡ ಜನಪದ ಕಥಾಸಂಕಲನಗಳ ಬಹುತೇಕ ಸಂಪಾದಕರಿಗೆ ಈ

ಸಂಗ್ರಹದ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದೇ ಹೇಳಬಹುದು. ಇಲ್ಲಿನ ಪ್ರಸ್ತಾವನೆ ವಿಭಾಗೀಯ ಕ್ರಮ ಸಂಪಾದನೆಯ ಹಲವಾರು ಅಂಶಗಳು ಅನುಕರಣೀಯವಾಗಿದೆ. ಹೀಗಾಗಿ ಈ ಕೃತಿಯ ಮಹತ್ವ ಗಣನೀಯ ಪ್ರಮಾಣದ್ದೆನಿಸುತ್ತದೆ. ಈ ಕೃತಿಯು ಕನ್ನಡ ಜನಪದ ಕಥೆಗಳ ಸಂಗ್ರಹ, ವಿಧಾನ ಮತ್ತು ವಿಶ್ಲೇಷಣೆ ಹಾಗೂ ವಿಭಾಗೀಯ ಕ್ರಮಗಳ ಮೇಲೆ ಉತ್ತಮ ಪರಿಣಾಮವನ್ನು ಬೀರಿದೆ. ಕನ್ನಡ ಜನಪದ ಕಥೆಗಳ ಸಂಗ್ರಹದ ವಿಧಾನಕ್ಕೆ ಮತ್ತು ವಿಭಾಗೀಯ ಕ್ರಮಕ್ಕೆ ಒಂದು ಸೈದ್ಧಾಂತಿಕ ಶಿಸ್ತನ್ನು ರೂಢಿಸಿಕೊಳ್ಳುವತ್ತ ನಮ್ಮನ್ನು ಕೊಂಡೊಯ್ಯುತ್ತದೆ.

ಪ್ರಸ್ತುತ ಕಥೆಗಳ ಲಕ್ಷಣವನ್ನು ಗಮನಿಸಿದಾಗ ಜಗತ್ತಿನ ಜನಪದ ಕಥೆಗಳ ಎಲ್ಲ ಲಕ್ಷಣಗಳನ್ನು ಈ ಕಥೆಗಳು ಹೊಂದಿವೆ. ಕಥೆಗಳ ಆರಂಭ ಮತ್ತು ಅಂತ್ಯಗಳು ಸಾವಧಾನವಾಗಿ ಪ್ರಾರಂಭವಾಗಿ ಸಾವಧಾನವಾಗಿ ಸುಖಾಂತ್ಯವನ್ನು ಪಡೆಯುತ್ತವೆ. ಪ್ರಸ್ತುತ ಕಥೆಗಳ ವಿಭಾಗೀಯ ಕ್ರಮ ಸ್ಟಿತ್‌ಥಾಮ್ಸನ್‌ರ ವಿಭಾಗೀಯ ಕ್ರಮವನ್ನು ಅನುಸರಿಸಲಾಗಿದೆ. ಪ್ರಸ್ತುತ ಕಥಾಸಂಕಲನವು ೬೮ ಕಥೆಗಳನ್ನು ಒಳಗೊಂಡಿದ್ದು ಅವುಗಳನ್ನು ಅತಿಮಾನುಷ ಪತ್ನಿಯರು, ಅತಿಮಾನುಷ ಪತಿಗಳು, ಅತಿಮಾನುಷ ವಿರೋಧಿಗಳು, ರಮ್ಯ, ಅದ್ಭುತ, ಬುದ್ಧಿವಂತಿಕೆಯ, ಹಾಸ್ಯ ಮತ್ತು ಪ್ರಾಣಿಕಥೆಗಳು ಎಂದು ಎಂಟು ಬಗೆಯಲ್ಲಿ ವಿಭಾಗಿಸಿದ್ದು ಪಾಶ್ಚಾತ್ಯ ಮಾದರಿಯನ್ನೇ ಅನುಸರಿಸಲಾಗಿದೆ.

ಪ್ರಸ್ತುತ ಕಥೆಗಳಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳನ್ನು ಗುರುತಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಭಾರತದ ಜನಪದ ಕಥೆಗಳಲ್ಲಿದ್ದಂತೆ ಪ್ರಸ್ತುತ ಕಥೆಗಳಲ್ಲೂ ಸಂತಾನವಿಲ್ಲದ ದಂಪತಿಗಳ ಚಿತ್ರಣ, ಬಂಜೆತನದ ನೋವು, ಬಂಜೆತನದಿಂದ ಒಂದು ಹೆಣ್ಣಿಗೆ ಒದಗಿಬರುವ ಸಂದಿಗ್ಧ ಪರಿಸ್ಥಿತಿಯನ್ನು ಈ ಕಥೆಗಳ ಮೂಲಕ ಕಂಡುಕೊಳ್ಳಲಾಗಿದೆ. ಇದಕ್ಕೆ ಭಾರತೀಯ ಸಂಸ್ಕೃತಿಯ ರೀತಿ ನೀತಿಗಳೇ ಕಾರಣ ಎಂಬುದು ಸತ್ಯದ ಸಂಗತಿಯಾಗಿದೆ.

ಅತ್ತಿಗೆ-ನಾದನಿಯರ ವಿರಸ, ಅತ್ತೆ-ಸೊಸೆಯರ ವಿರಸ, ಸವತಿಯರ ಕಾಟ ಇತ್ಯಾದಿ ಅಂಶಗಳು ಪುಣ್ಯದ ಲಕ್ಷ್ಮಿ, ಮಳೆರಾಯನ ಮಡದಿ, ತಾವರೆ ಹೂ, ಜಂಬೂರ ನಾಗಯ್ಯನ ಸೊಸೆ ಮುಂತಾದ ಕಥೆಗಳಲ್ಲಿ ವ್ಯಕ್ತವಾಗಿವೆ. ಇವು ಇಂದಿನ ಸಮಾಜದಲ್ಲೂ ಪ್ರಸ್ತುತವೆನಿಸುತ್ತದೆ. ಇಲ್ಲಿ ನಮ್ಮ ಸಮಾಜದ ವ್ಯವಸ್ಥೆ ಕೌಟುಂಬಿಕ ಸಂಬಂಧಗಳಿಂದ ರೂಪಗೊಂಡ ಮನೋಭಾವವನ್ನು ಗುರುತಿಸಬಹುದು.

ಕಥೆಗಳು ಮೌಖಿಕ ಪರಂಪರೆಯಿಂದ ಕೂಡಿರುವುದರಿಂದ ಭಾಷೆ ಪ್ರಮುಖ ಸ್ಥಾನ ಪಡೆಯುತ್ತದೆ. ಪ್ರಸ್ತುತ ಕಥೆಗಳಲ್ಲಿ ಜೀಶಂಪ ಅವರು ಅಲ್ಲಿನ ಪ್ರಾದೇಶಿಕ ಭಾಷೆಗಳಲ್ಲಿ ಕಥೆಗಳನ್ನು ಸಂಗ್ರಹಿಸಿ ಸಾಮಾನ್ಯ ಕನ್ನಡದಲ್ಲಿ ಸರಳವಾದ ರೀತಿಯಲ್ಲಿ ಎಲ್ಲರಿಗೂ ಅರ್ಥವಾಗುವ ಶ್ರೀಸಾಮಾನ್ಯ ಭಾಷೆಯಲ್ಲಿ ಕಥೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಮೌಖಿಕ ಪರಂಪರೆಯಿಂದ ಬಂದ ನಿರೂಪಣಾ ಶೈಲಿಯನ್ನು ಜೀಶಂಪ ತಮ್ಮ ಕಥಾಸಂಕಲನದಲ್ಲಿ ಅಳವಡಿಸಿಕೊಂಡಿದ್ದಾರೆ. ಈ ಶೈಲಿಯು ಜನಪದ ಕಥೆಗಳ ಲಕ್ಷಣವೇ ಆಗಿದ್ದು, ಇತರ ಸಾಹಿತ್ಯಿಕ ಪ್ರಕಾರಗಳಿಂದ ಜನಪದ ಕಥೆಯನ್ನು ಸ್ಪಷ್ಟವಾಗಿ ಬೇರ್ಪಡಿಸುತ್ತದೆ.

ಬಹುಮಟ್ಟಿಗೆ ಜನಪದ ಕಥೆಗಳಿಗೆ ಭಾಷೆಯ ಗಡಿ ಭೌಗೋಳಿಕ ಗಡಿ ಇರುವುದಿಲ್ಲ. ಭಾಷೆಯ ಗಡಿಯನ್ನು ತೊಡೆದು ಹಾಕಿದರೆ ಎಲ್ಲಿಂದ ಎಲ್ಲಿಗೆ ಹೋದರೂ ಕಥೆ ಒಂದೇ. ಪ್ರಸ್ತುತ ಕಥಾಸಂಕಲನದ 'ಕಾಗಕ್ಕ ಗುಬ್ಬಕ್ಕ'ನ ಕಥೆ ದಕ್ಷಿಣ ಭಾರತದಲ್ಲೆಡೆ ಸಿಗುತ್ತದೆ. 'ದೊಂಬರ ಹುಡುಗ', 'ನಾಗಮಾಣಿಕ್ಯ' ಕಥೆಗಳು ಯೂರೋಪಿನಲ್ಲೂ ಕಂಡುಬರುತ್ತವೆ. ಹೀಗೆ ಪ್ರಸ್ತುತ 'ಕನ್ನಡ ಜನಪದ ಕಥೆಗಳು' ಜಗತ್ತಿನ ಜನಪದ ಕಥೆಗಳ ಸಾಲಿನಲ್ಲಿ ನಿಲ್ಲುತ್ತವೆ.

ಪ್ರಸ್ತುತ ಕಥೆಗಳು ಒಂದು ದೇಶದ, ಒಂದು ರಾಜ್ಯದ ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನಕ್ಕೆ ನೆರವಾಗಬಲ್ಲವು. ಅಷ್ಟೇ ಅಲ್ಲ ಒಂದು ಜಾತಿಯ, ಒಂದು ಜನಾಂಗದ, ಒಂದು ಸಮುದಾಯದ ಸಂಸ್ಕೃತಿಯನ್ನು ಧಾರ್ಮಿಕ ಆಚರಣೆ, ವಿಧಿ-ವಿಧಾನಗಳ ಅಧ್ಯಯನಕ್ಕೆ ನೆರವಾಗಬಲ್ಲ ಸಾಧನ ಸಾಮಗ್ರಿಗಳನ್ನು ಒದಗಿಸಬಲ್ಲವು. ಅಂತೆಯೇ ಕಥೆಗಳನ್ನು ಹೇಳುವ-ಕೇಳುವ ಉದ್ದೇಶ ಕೇವಲ ಹೊತ್ತುಗಳೆಯುವುದಕ್ಕಲ್ಲ, ಲೋಕ ವ್ಯವಹಾರ ಜ್ಞಾನ ಪಡೆದು ಬುದ್ಧಿವಂತರಾಗುವುದಕ್ಕಾಗಿ ದುಷ್ಟರನ್ನು, ಅಜ್ಞಾನಿಗಳನ್ನು, ಹಠವಾದಿಗಳನ್ನು ತಿದ್ದಿ ತೀಡುವುದು ಇವುಗಳ ಮುಖ್ಯ ಉದ್ದೇಶವಾಗಿರುವುದು ಸತ್ಯ.

ಅಧ್ಯಯನದ ಫಲಿತಗಳು

* ಸಮಾಜದಲ್ಲಿ ಜಾತಿ, ವರ್ಗ, ಆರ್ಥಿಕ ನೆಲೆಯನ್ನು ಸೃಷ್ಟಿಸಿ ಹೇಗೆ ಅಂತರವನ್ನು ಕಾಯ್ದುಕೊಳ್ಳುತ್ತದೆ ಎಂಬುದನ್ನು ಪ್ರಸ್ತುತ ಕಥೆಗಳ ಮೂಲಕ ತಿಳಿಯಬಹುದು.
* ಹಾಸ್ಯ ಕಥೆಗಳು ಕೇವಲ ಹಾಸ್ಯದಿಂದ ಕೂಡಿದವುಗಳಷ್ಟೇ ಅಲ್ಲ, ಅವು ಮನುಷ್ಯನ ಮೂರ್ಖತನ, ಮುಠ್ಠಾಳತನ, ಹಸುಳೆತನ, ಮೂಢತೆ, ವಂಚನೆ, ಕ್ರೂರತೆ, ಕೆಟ್ಟಕಾಮ, ಕೆಟ್ಟಹೆಣ್ಣುತನ, ಸೋಮಾರಿತನ ಎಲ್ಲವನ್ನೂ ಪ್ರತಿಬಿಂಬಿಸುವ ಮನುಷ್ಯನ ಮನಸ್ಸಿನ ಕನ್ನಡಿಯಾಗಿ ಕಾಣುತ್ತವೆ.
* ಪ್ರಾಣಿಗಳು ಮನುಷ್ಯನ ಪೂರ್ವ ಇತಿಹಾಸದ ಜೊತೆಯಲ್ಲಿ ಜೈವಿಕವಾಗಿ ಮತ್ತು ಕಾರ್ಯಾತ್ಮಕವಾದ ಸಂಬಂಧವನ್ನು ಹೊಂದಿವೆ ಎಂಬುದು ಪ್ರಾಣಿಕಥೆಗಳಿಂದ ತಿಳಿಯುತ್ತದೆ.
* ಪ್ರಾಣಿಕಥೆಗಳಲ್ಲಿನ ತಂತ್ರಿಯ ಮಾನಸಿಕ ಚಕ್ರ ಮಾನವನ ಮನಸ್ಸಿನಲ್ಲಿರುವ ಸುಪ್ತಪ್ರಜ್ಞೆಯ ಅರಿವನ್ನು ಹೊರಸೂಸುತ್ತದೆ.
* ಮನಷ್ಯನ ಬದುಕಿನಲ್ಲಿ ಯಾವ ನಿರೀಕ್ಷೆಯೂ ಇಲ್ಲದೆ ಹುಟ್ಟುವ ಮತ್ತು ಬೆಳೆಯುವ ಈ ಹಾಸ್ಯಕಥೆಗಳ ಅವಸಾನ ಆಕಸ್ಮಿಕವಾದರೂ ಅವು ಮನುಷ್ಯನ ಜೀವನದಲ್ಲಿ ಅನಿವಾರ್ಯವಾಗುತ್ತದೆ.
* ಸ್ವಂತವಾಗಿ ಬದಲಾಗುತ್ತಿರುವ ಈ ಪ್ರಕ್ರಿಯೆಗಳಲ್ಲಿ ಹೆಣ್ಣು, ಹೆಣ್ತನ ಅಲ್ಲಿ ಹುಟ್ಟುವ ಭಾವನೆಗಳೇನೆಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.
* ಸ್ತ್ರೀ, ಸ್ತ್ರೀಯಿಂದ ಹೇಗೆ ಶೋಷಣೆಗೊಳಗಾಗುತ್ತಾಳೆ ಎಂಬುದರ ಸಾಮಾಜಿಕ ಅಧ್ಯಯನಕ್ಕೆ ಈ ಕಥೆಗಳು ದಾರಿಯಾಗುತ್ತವೆ.

- [illegible]
- [illegible]
- [illegible]
- [illegible]
- [illegible]

ಪರಾಮರ್ಶನ ಗ್ರಂಥಗಳು

೧. ಡಾ.ಜೀ.ಶಂ.ಪರಮಶಿವಯ್ಯ (ಸಂ), ಕನ್ನಡ ಜನಪದ ಕತೆಗಳು, ಚೇತನ ಪುಸ್ತಕ ಮಾಲೆ, ಮೈಸೂರು, ೧೯೮೮.

೨. ಎ.ಕೆ.ರಾಮಾನುಜನ್ ಸಂಗ್ರಹ ಮತ್ತು ಸಂಪಾದನೆ, (ಅನು) ಮಹಾಬಲೇಶ್ವರರಾವ್, ಭಾರತೀಯ ಜನಪದ ಕತೆಗಳು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೨೦೦೦.

೩. ಪ್ರೊ.ಹಿ.ಶಿ.ರಾಮಚಂದ್ರೇಗೌಡ, ಕನ್ನಡ ಜನಪದ ಕತೆಗಳ ನೆಲೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨.

೪. ಕ್ಯಾತನಹಳ್ಳಿ ರಾಮಣ್ಣ ಮತ್ತು ಡಾ.ಬೈರೇಗೌಡ ಚಿಕ್ಕಮರಳಿ, ಜೀ.ಶಂ..ಪ. ಜಾನಪದ, ಕರ್ನಾಟಕ ಸಂಘ (ರಿ) ಎಂ.ಎಲ್.ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಮಂಡ್ಯ, ೨೦೦೭.

೫. ಡಾ.ಕೆ.ಆರ್.ಸಂಧ್ಯಾರೆಡ್ಡಿ, ಕನ್ನಡ ಜನಪದ ಕಥೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೧೯೮೨.

೬. ಕರೀಗೌಡ ಬೀಚನಹಳ್ಳಿ, ಕಥೆ ಮತ್ತು ಹಾಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩.

೭. ತೀ.ನಂ.ಶಂಕರನಾರಾಯಣ, ಸಂಕೀರ್ಣ ಜನಪದ ಕಥೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೪.

೮. ಡಾ.ಹೆಚ್.ಜೆ.ಲಕ್ಕಪ್ಪಗೌಡ, ಜೀಶಂಪ ಸಂಸ್ಮರಣೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೫.

೯. ಡಾ.ಜೀ.ಶಂ.ಪ., ಜಾನಪದ ಕೆಲವು ಮುಖಗಳು, ಚೇತನ ಬುಕ್ ಹೌಸ್, ಮೈಸೂರು, ೧೯೯೬.

೧೦. ರಾಜಪ್ಪದಳವಾಯಿ, ಕನ್ನಡ ಸಾಹಿತ್ಯ ಕೋಶ, ಕದಿರು ಪ್ರಕಾಶನ, ಮೈಸೂರು, ೧೯೯೬.

೧೧. ಹಾ.ಮಾ.ನಾಯಕ, ಜಾನಪದ ಸ್ವರೂಪ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೧.

೧೨. ಡಾ.ಚಂದ್ರಶೇಖರ ಕಂಬಾರ, ದೇಶೀಯ ಚಿಂತನೆ, ಅಂಕಿತ ಪ್ರಕಾಶನ, ಬಸವನಗುಡಿ, ಬೆಂಗಳೂರು, ೨೦೦೪.

೧೩. ಡಾ.ಹೆಬ್ಬಾಲೆ ಕೆ.ನಾಗೇಶ್, ಜಾನಪದ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಸಂಪುಟ ೫, ಸಂಚಿಕೆ ೨, ಜುಲೈ ಡಿಸೆಂಬರ್, ೨೦೦೬.

೧೪. ಅಂಬಳಿಕೆ ಹಿರಿಯಣ್ಣ, ಜಾನಪದ ಪರಿಭಾವನೆ, ಸಂವಹನ ಪ್ರಕಾಶನ, ಶಿವರಾಂಪೇಟೆ, ಮೈಸೂರು, ೨೦೦೧.

೧೫. ಡಾ.ವೀರಣ್ಣ ದಂಡೆ, ಜನಪದ ಕಾವ್ಯಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು, ಕವಿಮಾರ್ಗ ಪ್ರಕಾಶನ, ರಸ್ತಪುರ, ಕಲಬುರ್ಗಿ, ೨೦೦೪.

೧೬. ಜಾನಪದ ಮಾಲೆ, ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭.

೧೭. ದೇ.ಜ.ಗೌ. ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧.

೧೮. ಎಂ.ವಿ.ನಾಗರಾಜ್‌ರಾವ್, ಜಗತ್ತಿನ ಪ್ರಸಿದ್ಧ ಜಾನಪದ ಕಥೆಗಳು, ಹೇಮಂತ ಸಾಹಿತ್ಯ ರಾಜಾಜಿನಗರ್, ಬೆಂಗಳೂರು, ೨೦೦೭.

೧೯. ಡಾ.ಹಿ.ಶಿ.ರಾಮಚಂದ್ರೇಗೌಡ, ಕನ್ನಡ ಜನಪದ ಕಥಾವರ್ಗಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

AKSHARA GRANTHALAYA
ACC.NO. 048515
048515